
ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 3 ಜನವರಿ 13-19, 1997 ಬೆಲೆ ರೂ. 2.00









ಕಾವೇರಿ ಜಲವಿವಾದ: ಸೌಹಾರ್ದಯುತ ಮಾತುಕತೆಗಳಿಂದಲೇ ಪರಿಹಾರ

ಸಂಕುಚಿತ ನಿಲುವುಗಳಿಂದಲ್ಲ

ಕರ್ನಾಟಕ ಮತ್ತು ತಮಿಳುನಾಡು ಮಧ್ಯೆ ಕಳೆದ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕಾವೇರಿ ಜಲವಿವಾದಕ್ಕೆ ಶಾಶ್ವತ ಪರಿಹಾರ ಕಂಡು ಹಿಡಿಯಬೇಕೆಂಬ ಪ್ರಯತ್ನ ಆರಂಭವಾಗಿ ವರ್ಷವಾಗುತ್ತಾ ಬಂತು. ಕೇಂದ್ರದಲ್ಲಿ ಸಂಯುಕ್ತ ರಂಗ ಸರಕಾರ ಅಧಿಕಾರಕ್ಕೆ ಬಂದ ನಂತರ ಬದಲಾದ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳು ಮಾತುಕತೆ ಮೂಲಕ ಕಾವೇರಿ ನೀರಿನ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿ ಕೊಳ್ಳಬೇಕೆಂದು ಸಂಯುಕ್ತರಂಗ ಸರಕಾರದ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡರು ಆಸಕ್ತಿ ವಹಿಸಿ ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳನ್ನು ಕೇಳಿಕೊಂಡಿದ್ದರು. ಕಾವೇರಿ ಜಲವಿವಾದದ ಕುರಿತ ನೀಡಿದ ತನ್ನ ನಿರ್ಣಯದಲ್ಲಿ ಸುಪ್ರೀಂಕೋರ್ಟ್ ಕೂಡಾ ಅಂಥದ್ದೇ ಸಲಹೆ ನೀಡಿ ಮಾತುಕತೆ ಮೂಲಕ ವಿವಾದ ಬಗೆಹರಿಸಿಕೊಳ್ಳಿರೆಂದು ಹೇಳಿತ್ತು.

ಆ ಸಲಹೆಯಂತೆ ಎರಡೂ ರಾಜ್ಯದ ಮುಖ್ಯಮಂತ್ರಿಗಳು ಚೆನ್ನೈ ಮತ್ತು ಬೆಂಗಳೂರಿನಲ್ಲಿ ನಾಲ್ಕು ಸುತ್ತಿನ ಮಾತುಕತೆ ನಡೆಸಿದ್ದರೂ ಸಂಯುಕ್ತರಂಗ ಸರಕಾರದಲ್ಲಿ ಎರಡೂ ಪಕ್ಷಗಳು ಸಹಭಾಗಿಗಳಾಗಿರುವುದರಿಂದ ಕಾವೇರಿ ನೀರಿನ ಸಮಸ್ಯೆಯನ್ನು ಸೌಹಾರ್ದಯುತವಾಗಿ ಚರ್ಚಿಸಿ ಕಾಯಂ ಪರಿಹಾರ ಕಂಡುಹಿಡಿಯುವುದರಲ್ಲಿ ಸಫಲತೆ ಕಾಣಬಹುದೆಂದು ಎಲ್ಲರೂ ಅಪೇಕ್ಷಿಸಿದ್ದರು.

ಈ ಮಧ್ಯೆ ನ್ಯಾಯ ಮಂಡಳಿಯ ಅಧ್ಯಕ್ಷರಾದ ಚಿತ್ತತೋಷ್ ಮುಖರ್ಜಿ ಯವರು ಏನೋ ಕಾರಣಗಳಿಂದ ರಾಜೀನಾಮೆ ನೀಡಿದರು. ತೆರವಾದ ಈ ಸ್ಥಾನಕ್ಕೆ ಅಧ್ಯಕ್ಷರನ್ನು ನೇಮಿಸ ಬೇಕೆಂದು ತಮಿಳುನಾಡು ಒತ್ತಾಯಿಸು ತ್ತಲೇಬಂತು. ನ್ಯಾಯಮಂಡಳಿಯ ಕಲಾಪಗಳನ್ನು ಬಹಿಷ್ಕರಿಸಬೇಕೆಂಬ ನಿರ್ಣಯ ಕರ್ನಾಟಕ ವಿಧಾನ ಮಂಡಳದಲ್ಲಿ ಹೋದ ವರ್ಷ ಕೈಗೊಂಡಿರುವ ಹಿನ್ನೆಲೆಯಲ್ಲಿ ನ್ಯಾಯ ಮಂಡಳಿಗೆ ಹೊಸ

ಎನ್.ಕೆ.ಉಪಾಧ್ಯಾಯ

ಅಧ್ಯಕ್ಷರನ್ನು ನೇಮಿಸುವ ಕುರಿತು ಸರಕಾರ ಹೆಚ್ಚಿನ ಆಸ್ತೆ ವಹಿಸಿಲ್ಲ.

ನ್ಯಾಯ ಮಂಡಳಿಗೆ ಹೊಸ ಅಧ್ಯಕ್ಷರನ್ನು ನೇಮಿಸುವಲ್ಲಿ ವಿಳಂಬವಾಗುತ್ತಿರುವುದನ್ನು ಕಂಡ ಕರುಣಾನಿಧಿಯವರು ನಾಲ್ಕು ಸುತ್ತಿನ ಮಾತುಕತೆಗಳಲ್ಲಿ ಕಾವೇರಿ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಅಭಿಲಾಷೆ ತೋರಿಸಿದ್ದರು. ಈ ಮಧ್ಯೆ ಕೇಂದ್ರ ಸರಕಾರ ನ್ಯಾಯ ಮಂಡಳಿಅಧ್ಯಕ್ಷ ಸ್ಥಾನಕ್ಕೆ ನ್ಯಾಯಮೂರ್ತಿ ಎನ್.ಪಿ.ಸಿಂಗ್ ಅವರನ್ನು ನೇಮಕ ಮಾಡಿದೆ. ಜನವರಿ 8ರಿಂದ ಮತ್ತೆ ನ್ಯಾಯ ಮಂಡಳಿ ಮುಂದೆ ಎರಡೂ ರಾಜ್ಯಗಳು ತಂತಮ್ಮ ನಿಲುವನ್ನು ಮಂಡಿಸಲು ಪ್ರಾರಂಭಿಸುತ್ತಾರೆಂದು ತಿಳಿದೇ ಜನವರಿ 6ರಂದು ಚೆನ್ನೈಯಲ್ಲಿ ನಡೆದ ಸಭೆಯಲ್ಲಿ ಕರುಣಾನಿಧಿಯವರು ಕಾವೇರಿ ನೀರಿನ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸುವ ನಿಲುಮೆಯಲ್ಲಿ ಹಿಂದೇಟು ಹಾಕಿದ್ದಾರೆ. ಇದು ಸರಿಯಲ್ಲ. ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕಾವೇರಿ ನೀರಿನ ಸಮಸ್ಯೆಯನ್ನು ಎರಡೂ ರಾಜ್ಯಗಳು ಚರ್ಚಿಸಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬೇಕೆಂದು ಕರ್ನಾಟಕ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ನಿರಂತರವಾಗಿ ಹೇಳುತ್ತಾ ಬಂದಿದೆ. ಈ ಸಂದರ್ಭದಲ್ಲಿಯೂ ನಾವು ಅದೇ ನಿಲುಮೆಯನ್ನು ವ್ಯಕ್ತ ಮಾಡುತ್ತೇವೆ.

ಕಾವೇರಿ ಅಥವಾ ಬೇರೆ ಯಾವುದೇ ನದಿ ನೀರಿನ ಸಮಸ್ಯೆಯೂ ಆಯಾರಾಜ್ಯಗಳ ಜನರಿಗೆ ನೇರ ಸಂಬಂಧವಿರುವುದರಿಂದ ಈ ಸಮಸ್ಯೆಯನ್ನು ರಾಜಕೀಯ ನೆಲೆಗಟ್ಟಿನಲ್ಲಿ ಬಗೆಹರಿಸಬೇಕಾಗಿರುವುದರಿಂದ ಪ್ರಧಾನ ಮಂತ್ರಿ ದೇವೇಗೌಡರು ಕೂಡಲೇ ಮಧ್ಯೆ ಪ್ರವೇಶಿಸಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಸಿ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸುತ್ತದೆ. ಜ್ಯೋತಿ ಬಸು ಅವರ ಮಧ್ಯಪ್ರವೇಶದಿಂದಾಗಿ ಭಾರತ-ಬಾಂಗ್ಲಾ ದೇಶಗಳ ಮಧ್ಯೆ ಗಂಗಾ ನದಿ ನೀರಿನ ಸಮಸ್ಯೆಗೆ ಸಮರ್ಪಕವಾಗಿ ಒಪ್ಪಂದಕ್ಕೆ ಬರಲು ಸಾಧ್ಯವಾಗಿರುವಾಗ ಭಾರತ ದೇಶದ ಒಂದು ಭಾಗವಾಗಿರುವ ತಮಿಳುನಾಡು-ಕರ್ನಾಟಕದ ಕಾವೇರಿ ನೀರಿನ ಸಮಸ್ಯೆಗೆ ಪರಿಹಾರ ಒದಗುವುದೇನೂ ದೊಡ್ಡಸಮಸ್ಯೆ ಏನಲ್ಲ. ಪ್ರಯತ್ನ ಮುಂದುವರಿದು ಪರಿಹಾರ ಸಿಗುವಂತಾಗಲಿ.

ಮಾತುಕತೆ ಮುರಿದುದಕ್ಕೆ ತಮಿಳುನಾಡು ಸಿಪಿಐ(ಎಂ) ಖೇದ

ಸಿಪಿಐ(ಎಂ) ತಮಿಳುನಾಡು ರಾಜ್ಯ ಕಾರ್ಯದರ್ಶಿ ಮಂಡಳಿ ಕೂಡಾ ಉಭಯ ರಾಜ್ಯಗಳ ಮುಖ್ಯಮಂತ್ರಿಗಳ ಮಾತುಕತೆ ಮುರಿದು ಬಿದ್ದ ಬಗ್ಗೆ ಖೇದ ವ್ಯಕ್ತಪಡಿಸಿದೆ. ಈಗಲೂ ಕೂಡಾ ನದಿ ನೀರು ವಿವಾದಗಳನ್ನು ಮಾತುಕತೆಗಳ ಮೂಲಕವಷ್ಟೇ ಪರಿಹರಿಸಲು ಸಾಧ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ ತಮಿಳುನಾಡು ಸಿಪಿಐ(ಎಂ) ಕಾರ್ಯದರ್ಶಿ ಎನ್.ಶಂಕರಯ್ಯನವರು ಕೂಡಾ "ಭಾರತ-ಬಾಂಗ್ಲಾ ದೇಶಗಳ ನಡುವೆ ಗಂಗಾ ನೀರು ವಿವಾದವನ್ನು ಪರಿಹರಿಸಲು ಸಾಧ್ಯವಾದರೆ ಎರಡು ರಾಜ್ಯಗಳ ನಡುವಿನ ಕಾವೇರಿ ವಿವಾದವನ್ನು ಪರಿಹರಿಸಲು ಕಷ್ಟವೇ?" ಎಂದು ಪ್ರಶ್ನಿಸಿದ್ದಾರೆ.

ಪಶ್ಚಿಮ ಬಂಗಾಳದ ಕಾಂಗ್ರೆಸ್(ಐ) ಸಂಕುಚಿತ ದೃಷ್ಟಿಕೋನದಿಂದ ಒತ್ತಡ ತಂದರೂ ಮುಖ್ಯಮಂತ್ರಿ ಜ್ಯೋತಿಬಸು ಈ ಒತ್ತಡಗಳನ್ನು ಮೀರಿ ನಿಂತದ್ದರಿಂದ ಗಂಗಾ ನೀರು ಒಪ್ಪಂದ ಸಾಧ್ಯವಾಯಿತು. ತಮಿಳುನಾಡು ಮತ್ತು ಕರ್ನಾಟಕದ ರಾಜಕೀಯಪಕ್ಷಗಳು ಕೂಡಾ ಇಂತಹುದೇ ವಿಶಾಲ ದೃಷ್ಟಿಕೋಣದಿಂದ ಪ್ರಯತ್ನಿಸಿದರೆ ಕಾವೇರಿ ವಿವಾದದ ಪರಿಹಾರ ಸಾಧ್ಯ ಎಂಬುದು ಸಿಪಿಐ(ಎಂ)ನ ಕರ್ನಾಟಕ ಘಟಕದಂತೆ ತಮಿಳುನಾಡು ಘಟಕದ್ದೂ ಸ್ಪಷ್ಟ ಅಭಿಪ್ರಾಯ. ಪ್ರಧಾನಮಂತ್ರಿಗಳು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಈ ವಿವಾದದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಬೇಕು ಎಂದು ಅದು ಆಗ್ರಹಿಸಿದೆ.

ತಮಿಳುನಾಡಿನ ಇತರ ಎಲ್ಲಾ ರಾಜಕೀಯ ಪಕ್ಷಗಳೂ ಸಂಕುಚಿತ ನಿಲುವು ತಳೆದು ಕರ್ನಾಟಕವನ್ನು ದೂರುತ್ತಿರುವಾಗ ಅದೇ ರಾಷ್ಟ್ರೀಯ ರಾಜಕೀಯ ಪಕ್ಷಗಳ ಕರ್ನಾಟಕದ ಘಟಕಗಳು ತದ್ವಿರುದ್ಧ ನಿಲುವು ತಳೆದಿರುವಾಗ ಸಿಪಿಐ(ಎಂ)ನ ಇಂತಹ ನಿಲುವನ್ನು ಗಮನಿಸಬೇಕು. ಡಿಎಂಕೆಯಿಂದ ಸಿಡಿದು ಹೊರ ಎಂಡಿಎಂಕೆಯೊಂದಿಗೆ ಇದುವರೆಗೆ ಇದ್ದ ಮೈತ್ರಿಯು ಈ ಕಾರಣದಿಂದ ಮುರಿದು ಹೋದರೂ ಲೆಕ್ಕಿಸದೆ ಸಿಪಿಐ(ಎಂ)ನ ತಮಿಳುನಾಡು ರಾಜ್ಯ ಸಮಿತಿ ತನ್ನ ಈ ತರ್ಕಬದ್ಧ ಜನಪರ ನಿಲುವನ್ನು ಮುಂದಿಟ್ಟಿದೆ. ಡಿಎಂಕೆ ಸರಕಾರ ತಮಿಳುನಾಡಿನ ಜನತೆಗೆ ವಿಶ್ವಾಸ ಘಾತಮಾಡಿದೆಎಂಬ ಎಂಡಿಎಂಕೆ ಮುಖಂಡ ಗೋಪಾಲಸ್ವಾಮಿಯವರ ಮಾತು ಸಂಕುಚಿತ ಭಾವನೆಗಳನ್ನು ಉದ್ರೇಕಿಸುವಂತದ್ದು ಇದರಿಂದ ಈ ಸಮಸ್ಯೆಗೆ ಪರಿಹಾರ ದೊರಕದು ಎಂದು ಸಿಪಿಐ(ಎಂ)ನ ತಮಿಳುನಾಡು ಕಾರ್ಯದರ್ಶಿ ಶಂಕರಯ್ಯ ಅಭಿಪ್ರಾಯಪಟ್ಟಿದ್ದಾರೆ.

ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಮಾತುಕತೆ ಆರಂಭಿಸಿದಾಗ ತಾನು ಅದನ್ನು ಸಂಪೂರ್ಣವಾಗಿ ಬೆಂಬಲಿಸಿದ್ದನ್ನು ನೆನಪಿಸಿರುವ ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿ "ಕರುಣಾನಿಧಿಯವರು ಈ ಮಾತುಕತೆಗಳ ನಿಲುವಿನ ಬಗ್ಗೆ ರಾಜಕೀಯ ಪಕ್ಷಗಳಿಗೆ ತಿಳಿಸಬಹುದಾಗಿತ್ತು ಎಂಬುದಕ್ಕೆ ನಮಗೆ ಖೇದ" ಎಂದಿದೆ.

ಪ್ರಧಾನಮಂತ್ರಿ ದೇವೇಗೌಡರು ಸಹಜವಾಗಿಯೇ ಕರ್ನಾಟಕದ ಬಗ್ಗೆ ಪಕ್ಷಪಾತ ಹೊಂದಿದ್ದಾರೆ ಎಂಬ ಎಂಡಿಎಂಕೆ ಗೋಪಾಲಸ್ವಾಮಿ ಹಾಗೂ ಇತರತಮಿಳುನಾಡು ಮುಖಂಡರ ಆಪಾದನೆಯೂ ಸರಿಯಲ್ಲ ಎಂದು ಕಾಂ.ಶಂಕರಯ್ಯ ಹೇಳಿದ್ದಾರೆ.

ಹೇಗಾದರೂ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದರಲ್ಲೇ ಮಗ್ನವಾಗಿರುವ ರಾಷ್ಟ್ರೀಯ ರಾಜಕೀಯ ಪಕ್ಷಗಳ ಉಭಯ ಘಟಕಗಳು ತದ್ವಿರುದ್ಧ ನಿಲುವು ತಳೆಯುತ್ತವೆ, ರಾಜ್ಯ ಮಟ್ಟದ ಪಕ್ಷಗಳು ಸಂಕುಚಿತ ನಿಲುವುಗಳನ್ನು ತಳೆಯುತ್ತವೆ. ಜನಸಾಮಾನ್ಯರ ಐಕ್ಯತೆಯಿಲ್ಲದೆ ಜನಸಾಮಾನ್ಯರ ಸಮಸ್ಯೆಗಳ ಪರಿಹಾರ ಸಾಧ್ಯವಿಲ್ಲ ಎಂದು ನಂಬಿರುವ ಸಿಪಿಐ(ಎಂ)ನಂತಹ ಜನಪರ ಧೋರಣೆಯ ಒಂದು ಪಕ್ಷ ಮಾತ್ರ ಇಂತಹ ಧೀರ ನಿಲುವು ತಳೆಯಲು ಸಾಧ್ಯ.

ಸಿಪಿಐ(ಎಂ)ನ ರಾಜ್ಯವ್ಯಾಪೀ ಪ್ರಚಾರಾಂದೋಲನ - ಜನವರಿ ೧೬-೩೦, ೧೯೯೭

ಮನೆ-ಮನೆ ಪ್ರಚಾರ · ಬೀದಿ ಬದಿ ಸಭೆಗಳು · ಹುತಾತ್ಮ ದಿನದಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಮೆರವಣಿಗೆಗಳು

ಬಸ್ಸು, ರೈಲು ತಡೆದು ಜವಳಿ ಕಾರ್ಮಿಕರ ಪ್ರತಿಭಟನೆ
ತಮ್ಮ ನ್ಯಾಯ ಬೇಡಿಕೆಗಳ ಈಡೇರಿಕೆಗೆ ಒತ್ತಾಯ

ಡಿಸೆಂಬರ್ 30ರಂದು ದೇಶಾದ್ಯಂತ ಜವಳಿ ಕಾರ್ಮಿಕರು ನಡೆಸಿದ ರಸ್ತೆ ತಡೆ ಹಾಗೂ ರೈಲು ತಡೆ ಕಾರ್ಯಕ್ರಮ ಯಶಸ್ವಿಯಾಗಿದೆ ಎಂದು ವರದಿಯಾಗಿದೆ. ಜವಳಿ ಕಾರ್ಮಿಕರ ಜಂಟಿ ಕಾರ್ಯಾಚರಣೆ ಸಮಿತಿಯ ಕರೆಯ ಮೇರೆಗೆ ಈ ಕಾರ್ಯಕ್ರಮ ನಡೆಯಿತು. ಎನ್.ಟಿ.ಸಿ. ಗಿರಣಿಗಳನ್ನು ಕೂಡಲೇ ಆಧುನೀಕರಿಸಬೇಕು, ಸಂಬಳ ಕೊಡಬೇಕು, ಖಾಸಗಿ ಹಾಗೂ ಸಹಕಾರಿ ವಲಯದಲ್ಲಿನ ಮುಚ್ಚಿದ ಗಿರಣಿಗಳನ್ನು ತೆರೆಯಬೇಕು ಮತ್ತು ಕೈ ಮಗ್ಗ ಮತ್ತು ಪವರ್‌ಲೂಂ ಕಾರ್ಮಿಕರಿಗೆ ಕನಿಷ್ಠ ಕೂಲಿ, ಸಾಮಾಜಿಕ ಭದ್ರತಾ ಸೌಲಭ್ಯಗಳು ಸಿಗುವಂತಾಗಬೇಕು ಎಂಬುದು ಜವಳಿ ಕಾರ್ಮಿಕರ ಪ್ರಮುಖ ಬೇಡಿಕೆಗಳಾಗಿವೆ.

ಇದುವರೆಗೆ ದೊರೆತ ಸುದ್ದಿಗಳ ಪ್ರಕಾರ ಕಾನ್‌ಪುರದಲ್ಲಿ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ಹಾಗೂ ಶತಾಬ್ದಿ ಎಕ್ಸ್‌ಪ್ರೆಸ್ ಸೇರಿದಂತೆ ಎಲ್ಲಾ ಪ್ರಮುಖ, ರೈಲುಗಳನ್ನು ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ತಡೆಯಲಾಯಿತು. ಎನ್.ಟಿ.ಸಿ. ಗಿರಣಿಗಳು ಹಾಗೂ ಖಾಸಗಿ ರೈಲು ಹಳಿಗಳ ಮೇಲೆ ಕಾರ್ಮಿಕರು ಧರಣಿ ಕೂತರು. ಸುಭಾಷಿಣಿ ಅಲಿ ಮತ್ತಿತರ ಮುಖಂಡರು ಸೇರಿದಂತೆ 150ಮಂದಿಯನ್ನು ಬಂಧಿಸಲಾಯಿತು. ನಗರಾದ್ಯಂತ ಪ್ರತಿಭಟನಾ ರ್‍ಯಾಲಿಗಳು, ಮೆರವಣಿಗೆಗಳು ನಡೆದವು.

ಬಂಗಾಳದಲ್ಲಿ ಮಧ್ಯಾಹ್ನ 12ರಿಂದ 2 ಗಂಟೆಯ ನಡುವೆ ಎಲ್ಲಾ ದೂರದ ರೈಲುಗಳನ್ನು ತಡೆದು ನಿಲ್ಲಿಸಲಾಯಿತು. ಸ್ಥಳೀಯ ರೈಲುಗಳನ್ನು ಅಲ್ಲಲ್ಲಿ ನಿಲ್ಲಿಸಲಾಯಿತು. ರಾಜ್ಯದ ವಿವಿಧ ಜವಳಿ ನಗರಗಳಲ್ಲಿಮೆರವಣಿಗೆಗಳು, ಪ್ರತಿಭಟನಾ ಸಭೆಗಳು ನಡೆದವು.

ಆಂಧ್ರಪ್ರದೇಶದಲ್ಲಿ ಹೈದರಾಬಾದ್ ಮತ್ತಿತರ ಕಡೆ ಹಲವೆಡೆ ರೈಲು-ರಸ್ತೆಸಂಚಾರ ಅಸ್ತವ್ಯಸ್ತಗೊಂಡಿತು. ತಮಿಳುನಾಡಿನ ಕೊಯಮತ್ತೂರಿನಲ್ಲಿಜವಳಿ ಕಾರ್ಮಿಕರ ಬೃಹತ್ ಮೆರವಣಿಗೆ ರೈಲು ನಿಲ್ದಾಣ ತಲುಪಿದಾಗ ಹಲವಾರು ಮಂದಿಯನ್ನು ಪೋಲೀಸರು ಬಂಧಿಸಿದರು. ಆದರೂ ಹಲವು ಗಂಟೆಗಳ ಕಾಲ ರೈಲು ಸಂಚಾರ ಅಸ್ತವ್ಯಸ್ತಗೊಂಡಿತು. ತಿರುಪ್ಪೂರ್‌ನಲ್ಲೂ, ಪಾಂಡಿಚೇರಿಯಲ್ಲೂ ಜವಳಿ ಕಾರ್ಮಿಕರ ಕಾರ್ಯಾಚರಣೆಯಿಂದ ರೈಲು-ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತು.

ಮಧ್ಯಪ್ರದೇಶದ ಗ್ವಾಲೇರ್, ಇಂದೂರು, ರತ್ಲಾಂ, ದೇವಾಸ್ ಮುಂತಾದೆಡೆ ಬೆಳಿಗ್ಗೆ ದೊಡ್ಡ ಮೆರವಣಿಗೆಗಳ ನಂತರ ಜವಳಿ ಕಾರ್ಮಿಕರುರಸ್ತೆಗಳಲ್ಲಿಧರಣಿಕೂತರು.

ನಾಗಪುರದಲ್ಲಿ ಎಲ್ಲಾ ಕಾರ್ಮಿಕ ಸಂಘಗಳು ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿ ರಸ್ತೆ ಸಂಚಾರವನ್ನು ನಿಲ್ಲಿಸಿದರು. ರಾಜಾಸ್ತಾನ, ಮುಂಬೈ, ಅಹಮದಾಬಾದಿನಲ್ಲಿ ಕಾರ್ಮಿಕರು ಪ್ರತಿಭಟನೆ ವ್ಯಕ್ತಪಡಿಸಿದರು.

ಸರಕಾರ ಈಗಲಾದರೂ ಜವಳಿ ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು ಎಂದು ಜಂಟಿ ಕ್ರಿಯಾ ಸಮಿತಿ ಆಗ್ರಹಪಡಿಸಿದೆ. ಇಲ್ಲವಾದರೆ ಹೋರಾಟವನ್ನು ಇನ್ನೂ ತೀವ್ರಗೊಳಿಸಬೇಕಾದೀತು ಎಂದು ಎಚ್ಚರಿಸಿದೆ.

ಜಂಟಿ ಕ್ರಿಯಾ ಸಮಿತಿಯಲ್ಲಿ ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಇಂಟಕ್, ಬಿಎಂಎಸ್, ಯುಟಿಯುಸಿ ಮತ್ತು ಟಿಯುಸಿಸಿ ಸೇರಿದ್ದು ಈ ಸಮಿತಿಯ ನೇತೃತ್ವದಲ್ಲಿ ಜವಳಿ ಕಾರ್ಮಿಕರು ಕಳೆದ ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದ್ದಾರೆ. ಡಿಸೆಂಬರ್ 5 ಹಾಗೂ 11ರಂದು ಪ್ರಧಾನಮಂತ್ರಿಗಳು ಎನ್.ಟಿ.ಸಿ. ಗಿರಣಿಗಳ ಆಧುನೀಕರಣದ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂಬ ಭರವಸೆ ನೀಡಿದರೂ ಕೊನೆಗೆ ಬಂದ ಸುದ್ದಿಯೆಂದರೆ 30-40 ಮಿಲ್ಲುಗಳನ್ನು ಮುಚ್ಚಲು ಸರಕಾರ ನಿರ್ಧರಿಸಿದೆಯೆಂದು. ಇದರಿಂದಾಗಿ ನವಂಬರ್‌ನಿಂದ ಸಂಬಳವನ್ನೇ ಪಡೆಯದಿರುವ 1.7 ಲಕ್ಷ ಎನ್.ಟಿ.ಸಿ. ಕಾರ್ಮಿಕರೊಂದಿಗೆ ಇನ್ನೂ ಒಂದು ಲಕ್ಷ ಕಾರ್ಮಿಕರು ಬೀದಿ ಪಾಲಾಗುವ ಸಂಭವವಿದೆ. ಈ ಅನ್ಯಾಯದ ವಿರುದ್ಧ ಜವಳಿ ಕಾರ್ಮಿಕರು ಈ ಕಾರ್ಯಾಚರಣೆಗಿಳಿದಿದ್ದರು.

(ಐಎನ್‌ಎನ್)

ಯುಜಿಸಿ ಪರೀಕ್ಷೆಯಲ್ಲೂ ಪ್ರಶ್ನೆ ಪತ್ರಿಕೆ ಬಯಲು!

ವಿಶ್ವವಿದ್ಯಾಲಯದ ಅನುದಾನ ಆಯೋಗ ಅಥವಾ ಯುಜಿಸಿ ನಡೆಸುತ್ತಿರುವ ರಾಷ್ಟ್ರೀಯ ಅರ್ಹತಾ ಪರೀಕ್ಷೆ(ಎನ್‌ಇಡಿ)ಯ ಡಿಸೆಂಬರ್ 29ರ ಪ್ರಶ್ನೆ ಪತ್ರಿಕೆ ಮೊದಲೇ ಬಯಲಾಗಿದೆಯೆಂದು ಎಸ್.ಎಫ್.ಐ. ಕೇಂದ್ರ ಕಾರ್ಯದರ್ಶಿ ಮಂಡಳಿ ಪ್ರತಿಭಟಿಸಿದೆ. ಆದ್ದರಿಂದ ಈ ಪತ್ರಿಕೆಯ ಮರು ಪರೀಕ್ಷೆಯಾಗಬೇಕೆಂದು ಒತ್ತಾಯಿಸಿದೆ.

ದೇಶದ ಅತ್ಯುನ್ನತ ಶಿಕ್ಷಣ ಸಂಸ್ಥೆಯ ಇಂತಹ ಒಂದು ಪ್ರಮುಖ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಬಯಲಾಗಿರುವುದು ಉನ್ನತ ಮಟ್ಟದಲ್ಲಿನ ಭ್ರಷ್ಟಾಚಾರಕ್ಕೆ ಹಿಡಿದ ಕೈಗನ್ನಡಿ ಎಂದಿರುವ ಎಸ್‌ಎಫ್‌ಐ ಈ ಘಟನೆಯ ನ್ಯಾಯಾಂಗ ತನಿಖೆ ನಡೆಸಬೇಕೆಂದು ಆಗ್ರಹಿಸಿದೆ.

ದಿಲ್ಲಿವಿಶ್ವವಿದ್ಯಾಲಯ ಆವರಣದಲ್ಲಿ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಕಾರ್ಯಾಚರಣೆಯನ್ನು ಕೂಡಾ ಎಸ್‌ಎಫ್‌ಐ ಖಂಡಿಸಿದೆ.

ಯುಜಿಸಿಯ ವ್ಯವಸ್ಥೆ ಈಗ ಅತ್ಯಂತ ಅಧಿಕಾರಶಾಹಿಯಾಗಿದ್ದು ಅದರ ಪ್ರಜಾಪ್ರಭುತ್ವೀಕರಣವಾಗಬೇಕಾಗಿದೆ ಎಂದಿರುವ ಎಸ್‌ಎಫ್‌ಐ ಈ ಪ್ರಶ್ನೆಯಲ್ಲಿ ಮಧ್ಯಪ್ರವೇಶಿಸಬೇಕು ಎಂದು ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳನ್ನು ಕೋರಿದೆ. (ಐಎನ್‌ಎನ್)

ಕೇಂದ್ರ ಸರಕಾರದ ನೀತಿಗಳಿಂದಾಗಿ
ಬೃಹತ್ ಔಷಧಿ ಕಂಪೆನಿಯಲ್ಲಿ ಬಿಕ್ಕಟ್ಟು

ತಕ್ಷಣ ಸಂಸ್ಥೆಗೆ ಬಂಡವಾಳ, ಕಾರ್ಮಿಕರಿಗೆ ಸಂಬಳ ನೀಡಬೇಕೆಂದು ಸಿಐಟಿಯು ಆಗ್ರಹ

ಸಾರ್ವಜನಿಕ ವಲಯದ ಔಷಧಿ ಸಂಸ್ಥೆ ಐಡಿಪಿಎಲ್‌ನ ಕಾರ್ಮಿಕರಿಗೆ ನವಂಬರ್ ತಿಂಗಳಿಂದ ಸಂಬಳ ನೀಡಿಲ್ಲ. ಇದನ್ನು ತಕ್ಷಣ ನೀಡಬೇಕು, ಐಡಿಪಿಎಲ್ ಕಂಪೆನಿಯ ಪುನರುಜ್ಜೀವನಕ್ಕೆ ಬಂಡವಾಳ ಒದಗಿಸಬೇಕು ಎಂದು ಸಿಐಟಿಯು ಒತ್ತಾಯಿಸಿದೆ.

ಐಡಿಪಿಎಲ್‌ನ ಕಾರ್ಮಿಕ ಪ್ರತಿನಿಧಿಗಳು ಹಾಗೂ ಸಂಸತ್ ಸದಸ್ಯರ ನಿಯೋಗವೊಂದು ಡಿಸೆಂಬರ್ 5ರಂದು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದಾಗ ಡಿಸೆಂಬರ್ 24ರಂದು ಈ ಬಗ್ಗೆ ನಿರ್ಣಯ ಕೈಗೊಳ್ಳುವುದಾಗಿ ತಿಳಿಸಲಾಗಿತ್ತು. ಆದರೆ ಜನವರಿ ತಿಂಗಳು ಬಂದರೂ ಏನೂ ಆಗಲಿಲ್ಲ. ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಐಡಿಬಿಐನಿಂದ ಈ ಕಂಪೆನಿಯ ಪುನರುಜ್ಜೀವನದ ಬಗ್ಗೆ ವರದಿ ಬರುವವರೆಗೆ ಈ ಬಗ್ಗೆ ಏನೂ ನಿರ್ಣಯ ಕೈಗೊಳ್ಳುವುದಿಲ್ಲ ಎಂದು ಈಗ ಕಾರ್ಮಿಕರಿಗೆ ತಿಳಿದು ಬಂದಿದೆ. ಐಡಿಪಿಎಲ್‌ನ ಪ್ರಧಾನ ಉತ್ಪಾದನಾ ಸ್ಥಾವರಗಳಿಂದ ಋಷಿಕೇಷ, ಹೈದರಾಬಾದ್ ಮತ್ತು ಗುರ್ಗಾವ್‌ನಲ್ಲಿ ಉತ್ಪಾದನೆ ನಿಂತೇ ಹೋಗಿದೆ.

ಐಡಿಬಿಐ ವರದಿ ಬರುವವರೆಗೆ ಈ ಕಂಪೆನಿಯನ್ನು ಮಾರ್ಚ್ 31, 1997ರವರೆಗೆ ನಡೆಸಲು ಸಾಧ್ಯವಾಗುವಂತೆ 38 ಕೋಟಿ ರೂ. ಕಾರ್ಯ ಬಂಡವಾಳವನ್ನು ಸರಕಾರ ಕೊಡಬೇಕು ಎಂದು ಕಾರ್ಮಿಕ ಪ್ರತಿನಿಧಿಗಳು ಮಾತ್ರವಲ್ಲ, ರಾಸಾಯನಿಕ ಮಂತ್ರಾಲಯವೂ ಕೇಳಿತ್ತು. ಈ ಬಗ್ಗೆ ಪ್ರಧಾನಮಂತ್ರಿಗಳು ಭರವಸೆಯನ್ನೂ ನೀಡಿದ್ದರು.

ಐಡಿಪಿಎಲ್ ಅಥವಾ ಇಂಡಿಯನ್ ಡ್ರಗ್ ಅಂಡ್ ಫಾರ್ಮಸೂಟಿಕಲ್ ಕಂಪನಿ ಕೇಂದ್ರ2 ಸಾರ್ವಜನಿಕ ವಲಯದಲ್ಲಿನ ಅತಿ ದೊಡ್ಡ ಔಷಧಿ ಕಂಪೆನಿ. ಏಶ್ಯಾದಲ್ಲೇ ಅತೀ ದೊಡ್ಡ ಸಾರ್ವಜನಿಕ ಸಂಸ್ಥೆ ಎಂಬ ಹೆಗ್ಗಳಿಕೆ ಹೊಂದಿ ಎಲ್ಲಾ ಅವಶ್ಯಕ ಹಾಗೂ ಜೀವವುಳಿಸುವ ಔಷಧಿಗಳ ಉತ್ಪಾದನೆಯನ್ನು ಎಲ್ಲಾ ಹಂತದಲ್ಲಿ ಮಾಡುತ್ತಿದ್ದ ಐಡಿಪಿಎಲ್ ಸಾರ್ವಜನಿಕ ವಲಯವನ್ನು ಕಳಚಿ ಹಾಕುವ ಕೇಂದ್ರ ಸರಕಾರದ ನೀತಿಯಿಂದಾಗಿ ಇಂತಹ ದುರ್ದಿನವನ್ನು ಕಾಣಬೇಕಾಗಿ ಬಂದಿದೆ. ನೌಕರರಿಗೆ ಸಂಬಳ ನೀಡದಂತಹ ಕಾನೂನುಬಾಹಿರ ಕೆಲಸ ಮಾಡುವ ಹೀನ ಮಟ್ಟಕ್ಕೆ ಇಳಿಯುವಂತಾಗಿದೆ.

ಸರಕಾರ ಕೂಡಲೇ ರಾಸಾಯನಿಕ ಮಂತ್ರಾಲಯ ಕೇಳಿರುವ ಹಣವನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿರುವ ಸಿಐಟಿಯು ಐಡಿಪಿಎಲ್ ಕಾರ್ಮಿಕರ ಈ ಬೇಡಿಕೆಯ ಈಡೇರಿಕೆಗೆ ತಮ್ಮ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಕರೆ ನೀಡಿದೆ.

ತ್ರಿಪುರಾದಲ್ಲಿ ಬಂಡುಕೋರತನ ಎದುರಿಸಲು ಸೇನೆಯ ನೆರವು-ಸಹಕಾರ ಸೇನಾಧಿಪತಿಗಳ ಭರವಸೆ

ತ್ರಿಪುರಾದ ಜನತೆಯನ್ನು ಹಿಂಸಾತ್ಮಕ ಉಗ್ರಗಾಮಿ ಧಾಳಿಗಳಿಂದ ರಕ್ಷಿಸಲು ಹಾಗೂ ಬಂಡುಕೋರತನವನ್ನು ಎದುರಿಸುವಲ್ಲಿ ತ್ರಿಪುರಾ ಸರಕಾರಕ್ಕೆ ನೆರವಾಗಲು ಸೇನೆ ಎಲ್ಲಾ ಸಹಾಯ-ಸಹಕಾರ ನೀಡುವುದಾಗಿ ಭಾರತದ ಸೇನಾಧಿಪತಿ ಜನರಲ್ ಶಂಕರ್‌ರಾಯ್ ಚೌಧುರಿ ಹೇಳಿದ್ದಾರೆ.

ತ್ರಿಪುರಾದ ಮುಖ್ಯಮಂತ್ರಿ, ಗೃಹಮಂತ್ರಿ ಹಾಗೂ ರಾಜ್ಯದ ಉನ್ನತ ಸರಕಾರಿ ಹಾಗೂ ಸೇನಾ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲು ಅಗರ್ತಲಾಕ್ಕೆ ಭೇಟಿ ನೀಡಿದ್ದ ಜನರಲ್ ರಾಯ್ ಚೌಧುರಿ ಒಂದು ಪತ್ರಿಕಾ ಸಮ್ಮೇಳನದಲ್ಲಿ ಈ ವಿಷಯ ತಿಳಿಸಿದರು. ಕಟ್ಟುನಿಟ್ಟಾಗಿ ರಾಜ್ಯ ಸರಕಾರದ ಅಗತ್ಯಗಳಿಗೆ ಅನುಗುಣವಾಗಿ ಹಾಗೂ ರಾಜ್ಯದ ಆಡಳಿತ ಯಂತ್ರದೊಂದಿಗೆ ಸಂಯೋಜನೆಯಿಂದ ಸೇನೆ ಕೆಲಸ ಮಾಡುತ್ತದೆ ಎಂದು ಅವರು ಹೇಳಿದ್ದಾರೆ.

ಬಂಡುಕೋರತನವನ್ನು ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಮುತುವರ್ಜಿಗಳಿಂದಲೇ ಎದುರಿಸಲು ಸಾಧ್ಯ, ಇದಕ್ಕೆ ಸೈನಿಕ ಪರಿಹಾರ ಸಾಧ್ಯವಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಜನರಲ್ ಚೌಧುರಿ ತ್ರಿಪುರಾದ ಬಂಡುಕೋರತನದ ಸಮಸ್ಯೆ ಇತರ ಇಂತಹ ರಾಜ್ಯಗಳಿಗಿಂತ ಭಿನ್ನವಾಗಿದೆ ಎಂದರು. ತ್ರಿಪುರಾ ಸರಕಾರದಂತಹ ಜನರಿಂದ ಆರಿಸಲ್ಪಟ್ಟ ಸರಕಾರವೇ ಹೇಗೆ ಬಂಡುಕೋರತನವನ್ನು ಎದುರಿಸುವುದು ಎಂದು ನಿರ್ಧರಿಸಬೇಕಾಗಿದೆ. ಸೇನೆ ಸಾರ್ವಜನಿಕ ವ್ಯವಸ್ಥೆಯನ್ನು ಕಾಪಾಡಲು ನೆರವಾಗಿ ಈ ಮೂಲಕ ಸರಕಾರ ದೀರ್ಘಕಾಲದ ಪರಿಹಾರದತ್ತ ಸಾಗುವಂತೆ ಮಾಡಬಹುದಷ್ಟೇ ಎಂದು ಜನರಲ್ ರಾಯ್ ಚೌಧುರಿ ಹೇಳಿದರು.

(ಐಎನ್‌ಎನ್)

ಸಕ್ಕರೆ ಮಿಲ್ ಮಾಲೀಕರು ಬಾಕಿ ತೆರುವಂತೆ ಮಾಡಿ

ಸರಕಾರಕ್ಕೆ ಎಐಕೆಎಸ್ ಒತ್ತಾಯ

ಉತ್ತರಪ್ರದೇಶ, ಹರ್‍ಯಾಣಾ, ಪಂಜಾಬ್, ಬಿಹಾರ್ ಇತ್ಯಾದಿ ರಾಜ್ಯಗಳಲ್ಲಿ ಸಕ್ಕರೆ ಮಿಲ್ ಮಾಲೀಕರು ರೈತರಿಂದ ಕಬ್ಬು ಖರೀದಿಸಲು ನಿರಾಕರಿಸುತ್ತಿದ್ದಾರೆ. ಇದರಿಂದಾಗಿ ಕಬ್ಬು ಬೆಳೆಗಾರರು ತಮ್ಮ ಬೆಳೆಯನ್ನು ಸುಟ್ಟು ಹಾಕುವ ಅಥವಾ ಅತಿ ಕಮ್ಮಿ ಬೆಲೆಯಲ್ಲಿ ಮೇವಾಗಿ ಮಾಡುವ ಪರಿಸ್ಥಿತಿ ಬಂದಿದೆ. ಇದರಿಂದ ಬಹಳಷ್ಟು ಹಾನಿ ಹಾಗೂ ಸಂಕಟಗಳು ಅವರ ಮೇಲೆ ಬಂದಿವೆ. ಅಲ್ಲದೆ ಸಕ್ಕರೆ ಮಿಲ್ ಮಾಲೀಕರು ಕಬ್ಬು ಬೆಳೆಗಾರರಿಗೆ ನೀಡಬೇಕಾದ ಕೋಟ್ಯಾಂತರ ರೂಪಾಯಿಗಳಷ್ಟು ಬಾಕಿ ಇಟ್ಟುಕೊಂಡಿದ್ದಾರೆ. ಆದ್ದರಿಂದ ಸರಕಾರ ತುರ್ತಾಗಿ ಮಧ್ಯಪ್ರವೇಶಿಸಿ ಬೆಳೆಗಾರರಿಂದ ಕಬ್ಬನ್ನು ಘೋಷಿತ ಬೆಲೆಯಲ್ಲಿ ಖರೀದಿಸುವಂತ ಹಾಗೂ ಅವರಿಗೆ ಬರಬೇಕಾದ ಬಾಕಿಯನ್ನು ನೀಡುವಂತೆ ಸೂಕ್ತಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಎಸ್.ರಾಮಚಂದ್ರನ್ ಪಿಳ್ಳೆಯವರು ಆಗ್ರಹಿಸಿದ್ದಾರೆ.

ಮತ್ತೊಮ್ಮೆ ಕಾರ್ಮಿಕ ಮಂತ್ರಿಗಳ ಸುಳ್ಳು ಹೇಳಿಕೆ

ಸಿಐಟಿಯು ಖಂಡನೆ


ಕಾರ್ಮಿಕ ಮಂತ್ರಿಗಳು ಕನಿಷ್ಠ ದಿನಗೂಲಿ 35 ರೂ. ಎಂದು ಇದ್ದಕ್ಕಿದ್ದಂತೆ ಸಾರಿದ್ದಾರೆ. ಇದು ರಾಷ್ಟ್ರೀಯ ಗ್ರಾಮೀಣ ಶ್ರಮಜೀವಿಗಳ ಕುರಿತಾದ ಆಯೋಗದ ಶಿಫಾರಸಿನ ಪ್ರಕಾರ ಎಂದು ಮಂತ್ರಿಗಳು ಈಶಾನ್ಯ ರಾಜ್ಯಗಳ ಕಾರ್ಮಿಕ ಮಂತ್ರಿಗಳ ಸಭೆಯ ನಂತರ ಹೇಳಿದ್ದಾರೆ. ಸಿಐಟಿಯು ಈ ಹೇಳಿಕೆಯನ್ನು ಬಲವಾಗಿಖಂಡಿಸಿದೆ.

ಈ ಹಿಂದೆ ಭಾರತ ಕಾರ್ಮಿಕ ಸಮ್ಮೇಳನದ 33ನೇ ಸಮ್ಮೇಳನದ ನಂತರ ಕೂಡಾ ಕಾರ್ಮಿಕ ಮಂತ್ರಿಗಳು ಇಂತಹುದೇ ಹೇಳಿಕೆ ನೀಡಿದ್ದು ಸಿಐಟಿಯು ಇದನ್ನು ಖಂಡಿಸಿತು. ವಾಸ್ತವವಾಗೀ 33ನೇ ಅಧಿವೇಶನದಲ್ಲಿ ಕಾರ್ಮಿಕ ಇಲಾಖೆ ಮಂಡಿಸಿದ ಅಜೆಂಡಾ ಟಿಪ್ಪಣಿಗಳಲ್ಲೇ ಕೃಷಿ ವಲಯದಲ್ಲಿ ಕನಿಷ್ಠ ದಿನ ಕೂಲಿಯನ್ನು ಪರಿಷ್ಕರಿಸಿ 12.8.92ರಿಂದ ರೂ. 56.09 ಎಂದು ಹೇಳಲಾಗಿದೆ.

ಆದ್ದರಿಂದ ಸರಕಾರ ತನ್ನ ಮಾತಿಗೆ ತಪ್ಪಿದೆ, 35 ರೂ. ಕನಿಷ್ಠ ಕೂಲಿಯೆಂಬುದಕ್ಕೆ ಏನೂ ಆಧಾರವಿಲ್ಲ ಎಂದಿರುವ ಸಿಐಟಿಯು ಇದು ರಾಷ್ಟ್ರೀಯ ಗ್ರಾಮೀಣ ಶ್ರಮಜೀವಿಗಳ ಕುರಿತಾದ ಆಯೋಗದ ಶಿಫಾರಸಿನ ಪ್ರಕಾರವೂ ಇಲ್ಲ, 1957ರಲ್ಲಿ 15ನೇ ಭಾರತ ಕಾರ್ಮಿಕ ಸಮ್ಮೇಳನ ಅಂಗೀಕರಿಸಿದ ಅಗತ್ಯ ಆಧಾರಿತ ಕೂಲಿಯ ಸೂತ್ರದಂತೆಯೂ ಇಲ್ಲ ಎಂದು ಸಿಐಟಿಯು ಹೇಳಿದೆ.

ಕಾರ್ಮಿಕ ಸಂಘಗಳು ಸರ್ವಾನುಮತದಿಂದ ಕೇಳಿರುವಂತೆ ತಳಮಟ್ಟದ ಕನಿಷ್ಠ ಕೂಲಿ 1300 ಪಾಯಿಂಟುಗಳಲ್ಲಿ 50 ರೂ. ಇದ್ದು ಪಾಯಿಂಟಿಗೆ 2 ರೂ.ನಂತೆ ತುಟ್ಟಿಭತ್ಯೆ ಇರಬೇಕು. ಇದನ್ನು ಜ್ಯಾರಿಗೆ ತರಬೇಕು ಎಂದು ಸಿಐಟಿಯು ಒತ್ತಾಯಿಸಿದೆ. ಕಾರ್ಮಿಕ ಮಂತ್ರಿಗಳ ಈ ಪ್ರತಿಗಾಮಿ ಹೇಳಿಕೆಯನ್ನು ಪ್ರತಿಭಟಿಸಬೇಕು ಎಂದು ಎಲ್ಲಾ ಕಾರ್ಮಿಕ ಸಂಘಗಳಿಗೆ ಅದು ಕರೆ ನೀಡಿದೆ.

ಮೈಕೋ, ಐ.ಟಿ.ಸಿ. ಕಾರ್ಮಿಕರಿಂದ ಆಂಧ್ರ ಚಂಡಮಾರುತ ಪರಿಹಾರ ನಿಧಿಗೆ 30 ಲಕ್ಷ ರೂ.



ಬೆಂಗಳೂರಿನ ಮೈಕೋ ಕಾರ್ಮಿಕರ ಸಂಘದ ಮುತುವರ್ಜಿಯಿಂದ ಮೈಕೋ ಕಾರ್ಮಿಕರು ಆಂಧ್ರಪ್ರದೇಶದಲ್ಲಿ ಇತ್ತೀಚೆಗೆ ಬೀಸಿದ ಭೀಕರ ಚಂಡಮಾರುತದಿಂದ ಪೀಡಿತರಾದವರ ನೆರವಿಗೆಂದು ತಮ್ಮ ಒಂದು ದಿನದ ವೇತನವನ್ನು ನೀಡಿದ್ದಾರೆ. ಇದಕ್ಕೆ ಪ್ರತಿಯಾಗಿ ಮೈಕೋ ಆಡಳಿತವೂ ಪ್ರತಿಯೊಬ್ಬ ಕಾರ್ಮಿಕನ ಪರವಾಗಿ ಅಷ್ಟೇ ಹಣವನ್ನು ನೀಡಿದೆ. ಈ ರೀತಿ ಸಂಗ್ರಹವಾದ ಒಟ್ಟು ಹಣ ರೂ. 27,36,355.00.

ಬೆಂಗಳೂರಿನ ಇನ್ನೊಂದು ದೊಡ್ಡ ಉದ್ದಿಮೆಯಾದ ಐ.ಟಿ.ಸಿ. ಕಾರ್ಮಿಕರೂ ತಮ್ಮ ಕಾರ್ಮಿಕ ಸಂಘದ ಕರೆಯ ಮೇರೆಗೆ ರೂ.2,56,000 ಸಂಗ್ರಹಿಸಿದ್ದಾರೆ.

ಈ ಎರಡೂ ಮೊತ್ತಗಳ ಡ್ರಾಫ್ಟ್‌ಗಳನ್ನು ಈ ಎರಡೂ ಕಾರ್ಮಿಕ ಸಂಘಟನೆಗಳ ಅಧ್ಯಕ್ಷರಾದ ಹಾಗೂ ಸಿಐಟಿಯು ರಾಜ್ಯಅಧ್ಯಕ್ಷರೂ ಆದ ಎಸ್.ಸೂರ್ಯನಾರಾಯಣರಾವ್ ಇದೇ ಜನವರಿ 4ರಂದು ಹೈದರಾಬಾದಿನಲ್ಲಿ ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರಿಗೆ ನೀಡಿದರು.

ಪೌರಸೇವಾ ನೌಕರರ ಮುಷ್ಕರ - ಕಲಿಯತಕ್ಕ ಪಾಠ

ಎಸ್.ಕೆ.ಉಪಾಧ್ಯಾಯ

ತಮ್ಮನ್ನು ಸರಕಾರಿ ನೌಕರರೆಂದು ಪರಿಗಣಿಸಿ ತಮಗೆ ಸರಕಾರಿ ಖಜಾನೆಯಿಂದಲೇ ಸಂಬಳ ಸಿಗಬೇಕೆಂಬ ಬೇಡಿಕೆಯನ್ನು ಒತ್ತಾಯಿಸಿ ನಗರಸಭೆ ನೌಕರರು ಡಿಸೆಂಬರ್ 21ರಿಂದ ಮುಷ್ಕರ ಪ್ರಾರಂಭಿಸಿ ಜನವರಿ 6ರಂದು ಮುಕ್ತಾಯಗೊಳಿಸಿದ್ದಾರೆ. ಉಪಮುಖ್ಯಮಂತ್ರಿ ಸಿದ್ರಾಮಯ್ಯನವರ ಜೊತೆಯಲ್ಲಿ ನಡೆದ ಚರ್ಚೆಯಲ್ಲಿ ಈ ಎರಡೂ ಬೇಡಿಕೆಗಳಿಗೆ ಸರಕಾರದಿಂದ ಒಪ್ಪಿಗೆ ಸಿಗಲಿಲ್ಲ. ನೌಕರರಿಗೆ ಸರಿಯಾಗಿಸಂಬಳ ವಿತರಣೆ ಮಾಡಲು ಅನುಕೂಲವಾಗುವಂತೆ ಡಾ.ತಿಮ್ಮಯ್ಯ ಸಮಿತಿಯ ಶಿಫಾರಸಿನಂತೆ ಹೆಚ್ಚಿಗೆ ಗ್ಯಾರಂಟಿ ನೀಡಲು ಇದುವರೆಗೆ ಬಾಕಿ ಇರುವ ವೇತನ ಪಾವತಿ ಮಾಡಲು 15 ಕೋಟಿ ರೂಪಾಯಿಯನ್ನು ಫೆಬ್ರವರಿ ತಿಂಗಳಲ್ಲೇ ಬಿಡುಗಡೆ ಮಾಡಲು ಜಂಟಿ ಮಾತುಕತೆಯಲ್ಲಿ ಒಪ್ಪಲಾಯಿತು.

ಅಕ್ಟ್ರಾಯ್ ವಸೂಲಿ ಮಾಡುವ ಪದ್ಧತಿಯನ್ನು ರದ್ದು ಮಾಡಿದಂದಿನಿಂದಲೂ ನಗರ ಸಭೆ ನೌಕರರ ವೇತನ ವಿತರಣೆಯ ಪ್ರಶ್ನೆ ಬಹಳಷ್ಟು ನಗರಸಭೆಗಳನ್ನು ಕಾಡುತ್ತಿದೆ.(ಅಕ್ಟ್ರಾಯ್ ಇಲ್ಲದ ದಕ್ಷಿಣ ಕನ್ನಡ ಜಿಲ್ಲೆಯ ನಗರಸಭೆಗಳು ಯಾವ ತೊಂದರೆ ಇಲ್ಲದೆ ತಮ್ಮ ನೌಕರರಿಗೆ ವೇತನ ಪಾವತಿ ಮಾಡುತ್ತಿದ್ದಾರೆ. ಬಹುತೇಕ ಅವರೆಲ್ಲ ತಂತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡಿರಬೇಕು) ಅಕ್ಟ್ರಾಯ್ ರದ್ದಾದ ನಂತರ ನಗರಸಭೆಗಳಿಗೆ ಅಕ್ಟ್ರಾಯ್ ಬದಲಾಗಿ ಕೊಡಮಾಡುತ್ತಿದ್ದ ಅತಿ ಕಡಿಮೆಯಾದ ಗ್ರ್ಯಾಂಟ್ ಕೂಡ ಸಕಾಲಿಕವಾಗಿ ಬಿಡುಗಡೆಯಾಗುತ್ತಿರಲಿಲ್ಲ. ಸ್ಥಳೀಯವಾಗಿಯೂ ರಾಜ್ಯಮಟ್ಟದಲ್ಲಿಯೂ ಚಳುವಳಿಗಳು ನಡೆದು ಹೋದ ವರ್ಷ ಆರ್ಥಿಕ ತಜ್ಞ ಡಾ। ತಿಮ್ಮಯ್ಯ ಸಮಿತಿ ನೇಮಿಸಲ್ಪಟ್ಟು ಅದರ ಶಿಫಾರಸ್ಸು ಸರಕಾರದಿಂದ ಒಪ್ಪಿಗೆ ಪಡೆದು ಜಾರಿಯಾಗಬೇಕಾಗಿದೆ. ಅದರಿಂದ ಸ್ವಲ್ಪ ಪರಿಹಾರ ಸಿಗಬಹುದು. ಆಸ್ತಿಕರ ಹೆಚ್ಚಿಸಿ ಸರಿ ಯಾಗಿ ವಸೂಲಿ ಮಾಡದಿದ್ದರೆ ಪರಿ ಹಾರ ಸಿಗುವುದು ಕಷ್ಟ.

ಹಿಂದೆ ಸಿಐಟಿಯು ಸಂಯೋಜಿತ ಕೆಂಬಾವುಟದ ಮುನಿಸಿಪಲ್ ಮತ್ತು ಲೋಕಲ್ ಬಾಡಿ ಎಂಪ್ಲಾಯೀಸ್ ಫೆಡರೇಷನ್ ಹಲವಾರು ಹೋರಾಟಗಳನ್ನು ನಡೆಸಿ ಸರಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಕರ್ಯಗಳನ್ನು ನಗರ ಸಭೆ ನೌಕರರಿಗೆ ಕೊಡಿಸಿದೆ. ಸರಕಾರಿ ನೌಕರರ ಕೆ.ಸಿ.ಎಸ್.ಆರ್. ಕೂಡ ಅವರಿಗೆ ಅನು ಸರಿಸುವಂತೆ ಮಾಡಿದೆ. ಪೆನ್ಷನ್ ಕೂಡಾ ಸಿಗುವಂತೆ ಮಾಡಿದೆ. ಆದ್ದರಿಂದ ಪೌರಸೇವಾ ನೌಕರರನ್ನು ಸರಕಾರಿ ನೌಕರರೆಂದು ಪರಿಗಣಿಸಬೇಕೆಂದು ಸಂಪು ಹೂಡುವುದರಲ್ಲಿ ಅರ್ಥವಿಲ್ಲ. ಕೆಂಬಾವುಟ ನೇತೃತ್ವದ ಕೆಲಸಗಾರರಿಗೆ ಈ ವಿಷಯ ಗೊತ್ತು.

ಹೆಚ್ಚಿನ ನಗರಸಭೆಗಳಲ್ಲಿರುವ ಕೆಲಸಗಾರರಿಗೆ ಈ ವಿಷಯ ತಿಳಿಯದಿರುವುದರಿಂದ ಅವರಿಗೆಲ್ಲ ಸರಿಯಾಗಿ ಸಂಬಳ ಸಿಗದೆ ಕಷ್ಟದಲ್ಲಿರುವುದರಿಂದ ತಮ್ಮನ್ನೆಲ್ಲ ಸರಕಾರಿ ನೌಕರರೆಂದು ಪರಿಗಣಿಸಿದರೆ ಏನೂ ತೊಂದರೆ ಇಲ್ಲದೆ ಪ್ರತಿತಿಂಗಳು ಸಂಬಳ ಸಿಗುತ್ತದೆಂಬ ಭಾವನೆಯಿಂದ ಮುಷ್ಕರ ಯಶಸ್ವಿಯಾಗಿ ನಡೆದಿದೆ. ಕಾರ್ಮಿಕರಲ್ಲಿ ಒಗ್ಗಟ್ಟು ಇರಬೇಕೆಂಬ ಕಾರಣದಿಂದ ಕೆಂಬಾವುಟದ ನೇತೃತ್ವ ದಲ್ಲಿರುವ ಕಾರ್ಮಿಕರಿಗೂ ಮುಷ್ಕರದಲ್ಲಿ ಭಾಗವಹಿಸುವಂತೆ ತಿಳಿಸಲಾಗಿತ್ತು, ಭಾಗವಹಿಸಿದ್ದರು.

ಸರಕಾರದಿಂದ ಬಿಡುಗಡೆ ಮಾಡುವ ಗ್ರ್ಯಾಂಟನ್ನು ನಗರಸಭೆಗಳ ಪೌರ ಕಾರ್ಮಿಕರ ಸಂಬಳದ ಸಲುವಾಗಿಯೇ ಪ್ರತ್ಯೇಕ ವಾಗಿಯೇ ಜಿಲ್ಲಾಧಿಕಾರಿಗಳ ಮತ್ತು ಮುನಿಸಿಪಲ್ ಕಮಿಶನರ ಜಂಟಿ ಖಾತೆ ಯಲ್ಲಿ ಇಡಬೇಕೆಂದು ಹೋದವರ್ಷಸಂಪು ಹೂಡುವ ಮುಂಚೆಯೇ ನಮಗೂ, ಪೌರ ಸೇವಾ ನೌಕರ ಪದಾಧಿಕಾರಿಗಳಿಗೂ ಮಂತ್ರಿಗಳು ತಿಳಿಸಿದರು. ಆಗ ಕೂಡ 8 ದಿವಸ ಮುಷ್ಕರ ಮಾಡಿ ಕೊನೆಗೆ ಏನೂ ಲಭಿಸಲಿಲ್ಲ.

ಮೈಸೂರು, ಬೆಂಗಳೂರು, ಹುಬ್ಬಳ್ಳಿ, ಧಾರವಾಡ ಮೊದಲಾದ ಕೆಲವು ಮಹಾ ನಗರಸಭೆಗಳ ನೌಕರರು ಇದರಲ್ಲಿ ಭಾಗ ವಹಿಸಿರಲಿಲ್ಲ.

ಸರಕಾರಿ ನೌಕರರಾಗುತ್ತೇವೆಂಬ ಭಾವನೆ ಪೌರಕಾರ್ಮಿಕರಲ್ಲಿದೆ. ಅದು ನೌಕರರನ್ನೂ, ಕೆಳದರ್ಜೆಯ ಕಾವು ಗಾರರನ್ನೂ ಒಗ್ಗಟ್ಟಾಗುವಂತೆ ಮಾಡಿದೆ. ಅದು ಸ್ವಾಗತಾರ್ಹ. ನಗರಸಭೆ ನೌಕರರು ಮತ್ತ ಪೌರಕಾರ್ಮಿಕರಲ್ಲಿ ರಾಜಕೀಯ ಜಾಗೃತಿ ಉಂಟುಮಾಡುವುದರಲ್ಲಿ, ಇತರ ಕಾರ್ಮಿಕರ ಜೊತೆಯಲ್ಲಿ ಅವರೂ ಸಮಾಜ ಬದಲಾವಣೆಯ ಮಹಾಕಾರ್ಯದಲ್ಲಿ ಭಾಗವಹಿಸು ವಂತಾದರೆ ಈ ಐಕ್ಯತೆ ಸಫಲವಾಗಬಹುದು.

ಹತ್ತಿ ಬೆಳೆಗಾರರ ಸಮಾವೇಶ

"ಹತ್ತಿ ಬೆಳೆದು ಬತ್ತಲಾದೆವು?"

ಪಿ.ಜಗನ್ನಾಥ್

ಹೊಸ ಆರ್ಥಿಕ ನೀತಿ ದೇಶದೊಳಗೆ ಬಂದಮೇಲೆ ಹೊಸಕೃಷಿ ನೀತಿಯು ಬರಲೇ ಬೇಕಲ್ಲವೇ? ಹಾಗೆಯೇ ಬಂದೇ ಬಂತು. ಅದರ ಅಂಗವಾಗಿ ಕರ್ನಾಟಕ ಕೃಷಿ ಸಚಿವರು ಇನ್ನು ಕರ್ನಾಟಕ ರೈತರು ಬಡತನ ಮರೆಯಬಹುದು. ಜೊತೆಯಲ್ಲಿ ಶ್ರೀಮಂತರು ಆಗಬಹುದು ಅದಕ್ಕನುಗುಣವಾಗಿ ಎಲ್ಲರು ವಾಣಿಜ್ಯ ಬೆಳೆ ಬೆಳೆದು ವಿದೇಶಗಳಿಗೆ ರಫ್ತುಮಾಡಿ ಎಂಬ ಕೂಗು ಹಾಕಿದರು. ಹಾಗೆಯೇ ಉತ್ತರ ಕರ್ನಾಟಕದ ರೈತರು ಇವರ ನೀತಿಯನ್ನು, ಇವರ ಕೂಗನ್ನು ನಂಬಿ ದಿಢೀರ್ ಶ್ರೀಮಂತರಾಗಲು ಹೋಗಿ ಹತ್ತಿ ಬೆಳೆದು ಬೆತ್ತಲಾದರು.

ಹೊಸ ಆರ್ಥಿಕ ನೀತಿ, ಹೊಸ ಕೃಷಿ ನೀತಿ ಬಂದಾಗಿನಿಂದಲೂ ಅದರ ದುಷ್ಪರಿಣಾಮಗಳ ಬಗ್ಗೆ ರೈತರನ್ನು ಎಚ್ಚರಿಸುತ್ತಿದ್ದ ಕರ್ನಾಟಕ ಪ್ರಾಂತ ರೈತ ಸಂಘ ಜನವರಿ 5ರಂದು ರಾಯಚೂರಿನ ಕಲ್ಮಲದಲ್ಲಿ ರಾಜ್ಯ ಹತ್ತಿ ಬೆಳೆಗಾರರ ಸಮಾವೇಶವನ್ನು ಹಮ್ಮಿಕ್ಕೊಂಡಿತ್ತು. ರೈತ ಸಂಘದ ಉಪಾಧ್ಯಕ್ಷರಾದ ಕಾ।। ಚಂದ್ರಶೇಖರ ಬಾಳೆಯುವರ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ ಹತ್ತಿ ಬೆಳೆಯ ಸಮಸ್ಯೆಗಳಿಂದ ಕುಂದಿದ ನೂರಾರು ರೈತರು ಅತ್ಯುತ್ಸಾಹದಿಂದಲೇ ಪಾಲ್ಗೊಂಡಿದ್ದರು.

ರೈತರ ಪರ ಎಂದು ಕೊಚ್ಚಿಕೊಂಡರೆ ಸಾಲದು

ಹತ್ತಿ ಬೆಳೆಯುವ ರೈತರ ಹತ್ತು ಹಲವಾರು ಸಮಸ್ಯೆಗಳನ್ನು ಉಪಶಮನಗೊಳಿಸಬೇಕಾದರೆ ಕೇವಲ ರೈತ ಸರಕಾರ ಎಂದು ಜಂಭ ಕೊಚ್ಚಿಕೊಂಡರೆ ಸಾಲದು. ಬದಲಿಗೆ ರೈತರಿಂದ ಸರಕಾರವೇ ತಕ್ಕ ಬೆಲೆ ನೀಡಿ ಹತ್ತಿ ಖರೀದಿಸಿ ನಂತರ ಸರಕಾರವೇ ಹತ್ತಿ ಗಿರಣಿಗಳಿಗೆ ಸರಬರಾಜು ಮಾಡಬೇಕು ಹಾಗೂ ರೈತ ಬೆಳೆದ ಬೆಳೆಗೆ ರಕ್ಷಣಾತ್ಮಕ ಬೆಲೆ ನೀಡುವ ನಿರ್ದಿಷ್ಟ ಕಾನೂನನ್ನು ಜಾರಿಗೆ ತರಬೇಕು.

ಕೈಗಾರಿಕೆಯಷ್ಟೇ ಪ್ರಾಮುಖ್ಯತೆಯನ್ನು ಕೃಷಿ ವಲಯಕ್ಕೂ ನೀಡಬೇಕು. ಉತ್ತಮ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳನ್ನು ಸರಕಾರ ರೈತರಿಗೆ ಒದಗಿಸಿ ಅವರನ್ನು ಕೃಷಿ ಉತ್ಪಾದನೆಯಲ್ಲಿ ತೊಡಗುವಂತೆ ಉತ್ತೇಜನ ನೀಡಬೇಕು. ಇದರಿಂದ ಹತ್ತಿ ಬೆಳೆವ ರೈತರೇ ಇರಲಿ ಅಥವಾ ಇನ್ನಾವುದೇ ರೈತರಿರಲಿ ಅವರಿಗೆ ಭದ್ರತೆಯ ನೆರವು ನೀಡಬೇಕೇ ಹೊರತು ಕೇವಲ ರೈತರ ಸರಕಾರ ಎಂದು ಜಂಭಕೊಚ್ಚಿಕೊಂಡರೆ ಸಾಲದು ಎಂಬುದು ಸಮಾವೇಶವನ್ನು ಉದ್ಘಾಟಿಸಿದ ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರ ಅಂತರಾಳದ ಅನಿಸಿಕೆ ಹಾಗೂ ರೈತರು ಇಷ್ಟನ್ನು ಪಡೆಯಬೇಕಾದರೆ ಯಾವಾಗಲೂ ಸಂಘಟಿತರಾಗಿರಬೇಕು ಎನ್ನುವುದು ರೈತರಿಗೆ ಅವರ ಸಲಹೆ ಕೂಡ.

ಹತ್ತಿಮಂಡಲಿ ಅಗತ್ಯ

ಕಾಫಿ ಬೆಳೆಗಾರರ ಸಮಸ್ಯೆಗಳಿಗೆ, ಮಾರುಕಟ್ಟೆಯ ಸಮಸ್ಯೆಗಳ ಪರಿಹಾರಕ್ಕೆ ಹೇಗೆ ಕಾಫಿ ಬೆಳೆಗಾರರ ಮಂಡಳಿ ಹೇಗೋ ಹಾಗೇಯೇ ಹತ್ತಿ ಬೆಳೆಗಾರರ ಮಂಡಳಿಯ ಅವಶ್ಯಕತೆ ಇದೆ ಎಂಬುದು ಸಮಾವೇಶದಲ್ಲಿ ಪಾಲ್ಗೊಂಡಿದ್ದ ರಾಯಚೂರು ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ರಾದ ಸುರೇಶ್ ರೆಡ್ಡಿ ಯವರ ಅಭಿಪ್ರಾಯದ ಜೊತೆಗೆ ಸರಕಾರಕ್ಕೆ ಆಗ್ರಹ. ಹತ್ತಿ ಬೆಳೆಗಾರರ ಹಿತಕ್ಕಾಗಿ ಪ್ರಾದೇಶಿಕವಾಗಿ ಹತ್ತಿ ಸಂಶೋಧನಾ ಕೇಂದ್ರವನ್ನು ಹತ್ತಿಯನ್ನು ಹೆಚ್ಚು ಬೆಳೆಯುವ ಹೈದ್ರಾಬಾದ್ ಕರ್ನಾಟಕದಲ್ಲಿ ಸ್ಥಾಪಿಸುವುದು ಅವಶ್ಯಕ ಎಂದು ಸರಕಾರವನ್ನು ಸಮಾವೇಶ ಒತ್ತಾಯಿಸಬೇಕೆಂದು ಅವರ ಸಲಹೆ.

ಹತ್ತಿ ಬೆಳೆದು ಬೆತ್ತಲಾದೆವು

ಚರ್ಚೆಯಲ್ಲಿ ಪಾಲ್ಗೊಂಡು ನಿರ್ಣಯಗಳಲ್ಲಿ ಬೆಂಬಲಿಸಿ ಮಾತನಾಡಿದ ರೈತರಾದ ಕಲ್ಲೂರು ಲಿಂಗಯ್ಯಸ್ವಾಮಿ, ಭೀಮನಗೌಡ, ಹರಿಬಾಬು, ರೈತ ಸಂಘದ ವೀರಣ್ಣ ಗೌಡರ ಅನುಭವ 'ನಾವು ಸರಕಾರದ ಮಾತು ನಂಬಿ ಇದ್ದಬದ್ದ ಜಮೀನಿನಲ್ಲಿ ಹತ್ತಿ ಬೆಳೆದು ಒಂದು ವಾರದಲ್ಲಿ ಇದ್ದ ಬೆಲೆ ಇನ್ನೊಂದು ವಾರದಲ್ಲಿ ಇಲ್ಲದೆ ಹತ್ತಿ ಬೆಳೆದು ಬೆತ್ತಲಾದೆವು' ಎಂಬ ಒಡಲಾಳದ ಅಳಲು.

ಬಾಯಿಮಾತಿನ ಬೆನ್ನಲುಬು...

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಚಂದ್ರಶೇಖರ ಬಾಳೆಯವರ ಅಭಿಪ್ರಾಯದಲ್ಲಿ ಕೇಂದ್ರ ಸರಕಾರವೇ ಆಗಲಿ, ರಾಜ್ಯ ಸರಕಾರವೇ ಆಗಲಿ, ಕೃಷಿ ರಂಗವನ್ನು ಅಲಕ್ಷಿಸಿದಷ್ಟು ಬೇರೆ ಯಾವ ರಂಗವನ್ನು ಅಲಕ್ಷಿಲಿಲ್ಲವೆಂಬುದು, ಸರಕಾರ ಹೊಸ ಕೃಷಿ ನೀತಿಯನ್ನು ಘೋಷಿಸಿದ ನಂತರ ವಿದೇಶಗಳಿಗೆ ನಮ್ಮ ಬೆಳೆಗಳನ್ನು ರಫ್ತು ಮಾಡಬಹುದು ಎಂದು ತಿಳಿಸಿತು. ಅದರ ಬದಲಿಗೆ ವಿದೇಶಗಳಿಂದಲೇ ಎಲ್ಲಾ ಆಮದು ಆಗುವಂತೆ ಆಗಿದೆ. ಇದರಿಂದಾಗಿಯೇ, ಕಳೆದ ವರ್ಷ ಕಬ್ಬು ಬೆಳೆದ ರೈತರು ತೀವ್ರವಾದ ಸಂಕಷ್ಟಕ್ಕೆ ಒಳಗಾಗಬೇಕಾಯಿತು. ಅದೇ ರೀತಿ ಹತ್ತಿ ಬೆಳೆಗಾರರು, ವಿದೇಶದಿಂದ ಹತ್ತಿ ನಮ್ಮ ದೇಶಕ್ಕೆ ಬಂದ ಮೇಲೆ ಕಷ್ಟಕ್ಕೆ ಒಳಗಾಗಬೇಕಾಯಿತು. ಈಗ ಹತ್ತಿ ಮಾರುಕಟ್ಟೆಯಲ್ಲಿ ಒಂದು ವಾರದಿಂದ ಒಂದು ವಾರಕ್ಕೆ ಹತ್ತಿಯ ಬೆಲೆ 3 ಸಾವಿರದಿಂದ 1400 ರೂಗಳಿಗೆ ದಿಢೀರ್ ಕುಸಿಯುತ್ತಿದೆ. ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ಇರುವುದು ಕೂಡ ಇದಕ್ಕೆ ಕಾರಣವಾಗಿದೆ. ಇವೆಲ್ಲವನ್ನು ಸರಿಮಾಡದೆ ಕೇವಲ ಬರಿಬಾಯಿ ಮಾತಿನಲ್ಲಿ 'ರೈತ ದೇಶದ ಬೆನ್ನಲುಬು' ಎಂಬುದು ಲಜ್ಜೆಗೇಡಿತನ ಎನ್ನುತ್ತಾರೆ.

ಎಲ್ಲಾ ಬೆಳೆಗಾರರ ಸಮಾವೇಶಗಳು

ಸಮಾವೇಶದಲ್ಲಿ ಮಾತನಾಡಿದ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥರವರು ಸಮಾವೇಶದಲ್ಲಿ ಭಾಗವಹಿಸಿದ ಎಲ್ಲಾ ರೈತರನ್ನು ಅಭಿನಂದಿಸಿದ ಅವರು ಇಂದು ಯಾವ ಬೆಳೆ ಬೆಳೆಯುವ ರೈತರೇ ಆಗಲಿ ಇಂದು ತೊಂದರೆಗೆ ಒಳಗಾಗಿದ್ದಾರೆ. ಇಂದು ಒಂದೆಡೆ ರೈತರು ವಾಣಿಜ್ಯ ಬೆಳೆ ಬೆಳೆಯಲು ಉತ್ತೇಜನದ ಮಾತನಾಡುವ ಸರಕಾರ ರೈತರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸದೆ, ಅಲ್ಪಸ್ವಲ್ಪ ಬೆಳೆದ ಬೆಳೆಗೆ ಸರಿಯಾದ ಮಾರುಕಟ್ಟೆ ಕಲ್ಪಿಸದೆ, ಯೋಗ್ಯ ಬೆಲೆ ನೀಡದೆ ಎಲ್ಲಾ ರೈತರನ್ನು ಶೋಷಿಸುತ್ತಾರೆ ಇದನ್ನು ಸಮರ್ಪಕವಾಗಿ ಎದುರಿಸಲು ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ತೀರ್ಮಾನದಂತೆ ಜನವರಿ 17 ರಂದು ಮುಖ್ಯ ಮಂತ್ರಿಗಳ ಮನೆಯ ಮುಂದೆ ಸಮರ್ಪಕ ವಿದ್ಯುತ್ ಪೂರೈಕೆಗೆ ಒತ್ತಾಯಿಸಿ ಧರಣಿ ಸತ್ಯಾಗ್ರಹ ಕಾರ್ಯಕ್ರಮ ಕೈಗೊಂಡಿದೆ.

ಇದೇ ಸಂದರ್ಭದಲ್ಲಿ ರೈತ ಸಂಘ 60ನೇ ವಾರ್ಷಿಕೋತ್ಸವದ ಅಂಗವಾಗಿ ರಾಜ್ಯದ ಪ್ರಮುಖ ಬೆಳೆಗಳಾದ ಕಬ್ಬು, ಭತ್ತ, ರೇಷ್ಮೆ ತೊಗರಿ, ಜೋಳ, ರಾಗಿ ಹೀಗೆ ಎಲ್ಲಾ ಬೆಳೆಗಾರರ ಸಮಾವೇಶವನ್ನು ಸಂಘಟಿಸಲಾಗಿದೆ ಎಂದು ತಿಳಿಸಿದರು.

75 ಹಳ್ಳಿಗಳಲ್ಲಿ ಪ್ರಚಾರ

ಹತ್ತಿ ಬೆಳೆಗಾರರ ಸಮಾವೇಶದ ಪೂರ್ವಭಾವಿಯಾಗಿ ಜಿಲ್ಲೆಯ 75 ಹಳ್ಳಿಗಳಲ್ಲಿ 25 ದಿನಗಳ ಕಾಲ ಕೃಷಿ ಕೂಲಿಕಾರರ ಹಾಗೂ ರೈತ ಸಂಘದ ಮುಖಂಡರಾದ ಕರಿಯಪ್ಪ, ಯಲ್ಲಪ್ಪ, ಹಿಪ್ಪಗಿ ಶಾಕೂದಿ ಹಾಗೂ ಇತರ ಸಂಗಾತಿಗಳು ಜೀಪ್ ಜಾಥ ನಡೆಸಿ ಸಮಾವೇಶ ಯಶಸ್ವಿಗೊಳಿಸಲು ಪ್ರಚಾರ ಕೈಗೊಂಡಿದ್ದು ವಿಶಿಷ್ಟವಾಗಿತ್ತು. ಸಮಾವೇಶದಲ್ಲಿ ಬೇವಿನ ಬೂದಪ್ಪ, ತ್ರಿಮೂರ್ತಿ, ರೈತ ಸಂಘದ ಆರ್.ಕೆ.ದೇಸಾಯಿ, ಮಲ್ಲಯ್ಯ ಜಾಲಹಳ್ಳಿ ಎಸ್.ಎಫ್.ಐ.ನ ಎಸ್.ಮಾರುತಿ ಮುಂತಾದವರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಸಮಾವೇಶವು ಹತ್ತಿ ಬೆಳೆಗಾರರ ಸಮಸ್ಯೆಗಳಿಗೆ ರಾಜ್ಯ ಹಾಗೂ ಕೇಂದ್ರ ಸರಕಾರವನ್ನು ಒತ್ತಾಯಿಸಿ ಎರಡು ಹಂತದ ಕಾರ್ಯಕ್ರಮ ರೂಪಿಸಿದೆ. ಈ ಕೆಳಕಂಡ ಗೊತ್ತುವಳಿಯನ್ನು ಅಂಗೀಕರಿಸಿದೆ.

ನಿರ್ಣಯಗಳು

1. ಈ ಕೂಡಲೇ ರಾಜ್ಯ ಹಾಗೂ ಕೇಂದ್ರ ಸರಕಾರ ಸಿಸಿಐ ಇಲ್ಲವೆ ಇತರ ಸಂಸ್ಥೆಗಳ ಮುಖಾಂತರ ಪ್ರತಿ ಕ್ವಿಂಟಾಲ್ ಹತ್ತಿಗೆ 2000 ರೂ ದಿಂದ 2500 ರೂ ಬೆಲೆಗೆ ಖರೀದಿಸುವ ಮುಖಾಂತರ ಹತ್ತಿ ಬೆಳೆಗಾರರು ದಿವಾಳಿಯಾಗದಂತೆ ತಡೆಯಬೇಕು.

2. ಶಾಶ್ವತ ಪರಿಹಾರವಾಗಿ ಹತ್ತಿ ಬೆಳೆಗಾರರ ಹಿತಾಸಕ್ತಿಯಲ್ಲಿ ಕೇಂದ್ರ ಸರಕಾರ ಒಂದು ಹತ್ತಿ ಧೋರಣೆಯನ್ನು ರೂಪಿಸುವಂತಾಗಬೇಕು. ದೇಶದ ಬಟ್ಟೆ ಗಿರಣಿ ಹಾಗೂ ಸಹಕಾರಿ ರಂಗಕ್ಕೆ ಬೇಕಾಗುವ ಹತ್ತಿಯ ಅವಶ್ಯಕತೆಯನ್ನು ಘೋಷಿಸಿ, ಲಾಭದಾಯಕ ಬೆಲೆಯನ್ನು ಮುಂಚಿತವಾಗಿ ಘೋಷಿಸಿ ಹತ್ತಿ ನಿಗಮವನ್ನು ರಚಿಸಿ, ಹತ್ತಿ ಖರೀದಿಸುವಂತಾಗಬೇಕು.

ಅತಿಯಾದ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸಲು ಕ್ರಮ.

ರಾಜ್ಯ ಸರಕಾರ ಪ್ರಾದೇಶಿಕ ಸಂಶೋಧನಾ ಕೇಂದ್ರಗಳನ್ನು ರಚಿಸುವುದು, ರಾಜ್ಯದಲ್ಲಿ ಹತ್ತಿ ಬೆಳೆಯುವ ಪ್ರದೇಶದಲ್ಲಿ ಬಟ್ಟೆ ಗಿರಣಿಗಳನ್ನು ಸ್ಥಾಪಿಸುವ ಮುಖಾಂತರ ರಾಜ್ಯದ ಹತ್ತಿಯನ್ನು ಬಳಸುವಂತಾಗಬೇಕು.

ಹತ್ತಿಯೇತರ ವಿದೇಶಿ ಬಟ್ಟೆಗಳನ್ನು ಆಮದು ಮಾಡುವಂತಾಗಲು, ಹತ್ತಿಯನ್ನು ಆಮದು ರಫ್ತು ಮಾಡುವಾಗಲು, ಹತ್ತಿ ಗಿರಣಿಗಳ, ವ್ಯಾಪಾರಿಗಳ ಹಿತಾಸಕ್ತಿಯ ಧೋರಣೆ ತಾಳದೆ ಹತ್ತಿ ಬೆಳೆಗಾರರ ಹಾಗೂ ಬಳಕೆದಾರರ ಹಿತದಲ್ಲಿ ಧೋರಣೆ ರೂಪಿಸುವಂತಾಗಬೇಕು. □





ಕರ್ನಾಟಕದಲ್ಲಿ ಕಳೆದ ವಾರ

ಜನವರಿ 3

- ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರ ಏರಿಸಲು ಸಂಪುಟ ಉಪ ಸಮಿತಿ ಶಿಫಾರಸು. ವಿಧಾನಮಂಡಲದ ಅಧಿವೇಶನದ ನಂತರ ಏರಿಸುವ ನಿರೀಕ್ಷೆ.
- ಪ್ರತಿ ವರ್ಷ ವಿದ್ಯುತ್ ದರಗಳನ್ನು ಪರಿಷ್ಕರಿಸಬೇಕೆಂಬ ಸಲಹೆಗೆ ರಾಜ್ಯ ಸಚಿವ ಸಂಪುಟದ ತಾತ್ವಿಕ ಒಪ್ಪಿಗೆ.

ಜನವರಿ 4

- ರಾಜ್ಯ ಸರಕಾರಿ ನೌಕರರಿಗೆ ಬೋನಸ್ ಇಲ್ಲ ಎಂದು ಮುಖ್ಯಮಂತ್ರಿಗಳು. ರಾಜ್ಯ ಸರಕಾರಿ ನೌಕರರಿಗೆ ಬೋನಸ್ ಬಗ್ಗೆ ಏಕ ರೂಪ ನೀತಿಗೆ ಎಲ್ಲಾ ಮುಖ್ಯಮಂತ್ರಿಗಳ ಸಭೆ ಕರೆಯುವುದಾಗಿ ಪ್ರಧಾನಿ.

ಜನವರಿ 5

- ಕಾವೇರಿ ಜಲ ವಿವಾದ ಮಾತುಕತೆ ವಿಫಲ. ಪ್ರಧಾನಿ ಮಧ್ಯಸ್ಥಿಕೆಗೆ ಕರ್ನಾಟಕದ ಮಂತ್ರಿಗಳ ಮನವಿ.
- ಯೋಜನಾ ವೆಚ್ಚದಲ್ಲಿ ಕಡಿತದಿಂದಾಗಿ ಕನ್ನಡ-ಸಂಸ್ಕೃತಿಗೆ ಅನುದಾನದಲ್ಲಿ ಎರಡೂವರೆ ಕೋಟಿ ರೂ. ಕಡಿತದ ಬಗ್ಗೆ ಸಚಿವೆಯ ಅತೃಪ್ತಿ.

ಜನವರಿ 6

- ಪೌರಸೇವಾ ನೌಕರರ ಮುಷ್ಕರ ಅಂತ್ಯ.

ಜನವರಿ 7

- ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿಸಲು 217 ಕೋಟಿ ರೂ. ಒದಗಿಸಲು ರಾಜ್ಯ ಸರಕಾರದ ನಿರ್ಧಾರ. ರಾಯಚೂರು ತಾಪ ವಿದ್ಯುತ್ ಸ್ಥಾವರದಿಂದ ವಿದ್ಯುತ್ ಉತ್ಪಾದನಾ ಪ್ರಮಾಣವನ್ನು 14 ಮಿಲಿಯ ಯೂನಿಟ್‌ಗಳಿಂದ 19 ಮಿಲಿಯಕ್ಕೇರಿಸಲು ತೀರ್ಮಾನ.

ಜನವರಿ 8

- ತನ್ನ ಪಕ್ಷದ ಉದಯವನ್ನು ಜನವರಿ 26ರ ಬದಲು ಮತ್ತೆ ಒಂದು ತಿಂಗಳ ಕಾಲ ಮುಂದೂಡುವುದಾಗಿ ರಾಮಕೃಷ್ಣ ಹೆಗಡೆಯವರು.

ಜನವರಿ 9

- ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ನೀಡ ಲಾಗುತ್ತಿರುವ ಪೌಷ್ಟಿಕ ಆಹಾರದ ಖರೀದಿ ಮತ್ತು ವಿತರಣೆಯಲ್ಲಿ ಭಾರೀ ಅವ್ಯವಹಾರ ನಡೆದು ಸರಕಾರಕ್ಕೆ ಕನಿಷ್ಠ 25 ಕೋಟಿ ರೂ. ನಷ್ಟವಾಗಿವೆ ಎಂದು ವಿಧಾನಮಂಡಲಿಯ ವಿಷಯ ಸಮಿತಿ.

1996 : ಒಂದು ಮಹತ್ವಪೂರ್ಣ ವರ್ಷ

ಪ್ರತಿ ವರ್ಷದ ಘಟನೆಗಳು ಇತಿಹಾಸವನ್ನು ಶ್ರೀಮಂತಗೊಳಿಸುತ್ತವಾದರೂ 1996 ಕೆಲವು ಅಂಶಗಳಲ್ಲಿ ವಿಶಿಷ್ಟವಾಗಿತ್ತು ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳಾದ ಹರ್ಕಿಶನ್‌ಸಿಂಗ್ ಸುರ್ಜಿತ್. ವಿಶ್ವರಂಗದಲ್ಲಿನ ಹಲವು ಬದಲಾವಣೆಗಳು, ವಿಜ್ಞಾನ-ತಂತ್ರಜ್ಞಾನದಲ್ಲಿ, ರಾಜಕೀಯದಲ್ಲಿ, ಆರ್ಥಿಕದಲ್ಲಿ ಕಂಡುಬಂದ ಬದಲಾವಣೆಗಳ ಪ್ರಭಾವ ಒಂದೇ ದೇಶಕ್ಕೆ ಸೀಮಿತಗೊಂದಿಲ್ಲ, ಇಡೀ ಭೂಗೋಳವನ್ನು ವ್ಯಾಪಿಸಿದೆ ಎಂದು ಅವರು ನೆನಪಿಸಿದ್ದಾರೆ. ಅಂತರಾಷ್ಟ್ರೀಯ ರಂಗದಲ್ಲಿ ಅಮೆರಿಕಾ ವಿಶ್ವದ ಮೇಲೆ ತನ್ನ ಯಜಮಾನಿಕೆ ಸ್ಥಾಪಿಸಲು ಮತ್ತೆ-ಮತ್ತೆ ಹೊಸ-ಹೊಸ ಪ್ರಯತ್ನ ನಡೆಸಿತು. ಇದಕ್ಕೆ ಮತ್ತೆ-ಮತ್ತೆ ಪ್ರತಿರೋಧಗಳನ್ನು ಅದು ಎದುರಿಸಬೇಕಾಗಿ ಬಂದಿದೆ. ಈ ಬಗ್ಗೆ 'ಐಕ್ಯರಂಗ'ದ ಹಿಂದಿನ ಸಂಚಿಕೆಯಲ್ಲಿ ನೋಡಿರುವಿರಿ.



"1996 ಕಮ್ಯುನಿಸ್ಟರು ಹಾಗೂ ಇತರ ಎಡಶಕ್ತಿಗಳು ಮತ್ತೆ ಒಂದುಗೂಡುತ್ತಿರುವ ವರ್ಷ ಎಂದು, ಜನಗಳ ಬದುಕು ಮತ್ತು ಕಲ್ಯಾಣದ ಮೇಲೆ ಬೂರ್ಜ್ವಾ-ಸಾಮ್ರಾಜ್ಯಶಾಹಿ ಧಾಳಿಗಳಿಗೆ ಬಲವಾದ ಪ್ರತಿರೋಧ ವ್ಯಕ್ತಗೊಂಡ ವರ್ಷ ಎಂದು ಇತಿಹಾಸದಲ್ಲಿ ದಾಖಲಾಗುತ್ತದೆ" ಎಂದು ಸುರ್ಜಿತ್ ವರ್ಣಿಸಿದ್ದಾರೆ.

ಇನ್ನೂ ರಾಷ್ಟ್ರೀಯ ರಂಗದಲ್ಲಿ 1996 ಒಂದು ಮಹತ್ವಪೂರ್ಣ ತಿರುವು ತಂದ ವರ್ಷ ಎಂದು ಅವರು ಹೇಳುತ್ತಾರೆ. 1996 ಆರಂಭವಾಗುವ ವೇಳೆಗೆ ಭಾರತ ನಾಲ್ಕು ಪ್ರಧಾನ ಸಮಸ್ಯೆಗಳನ್ನು ಎದುರಿಸುತ್ತಿತ್ತು. ನರಸಿಂಹರಾಯರ ನೇತೃತ್ವದ ಕಾಂಗ್ರೆಸ್(ಐ) ಸರಕಾರ ಐಎಂಎಫ್-ವಿಶ್ವಬ್ಯಾಂಕ್ ಹೇರಿದ ಆರ್ಥಿಕ ನೀತಿಗಳನ್ನು ಅನುಸರಿಸಿದ್ದರಿಂದ ನಮ್ಮ ಆರ್ಥಿಕ ಸಾರ್ವಭೌಮತೆಗೆ ಸಂಚಕಾರ, ಹೆಚ್ಚುತ್ತಿದ್ದ ಕೋಮುವಾದಿ ಅಪಾಯ ಹಾಗೂ ಕಾಂಗ್ರೆಸ್ ಸರಕಾರ ಆ ಬಗ್ಗೆ ತಳೆಯುತ್ತಿದ್ದ ರಾಜಿ ನೀತಿ ಕಾಶ್ಮೀರ ಮತ್ತು ಈಶಾನ್ಯ ಭಾರತದಲ್ಲಿನ ಉಗ್ರಗಾಮಿ ಚಟುವಟಿಕೆಗಳಿಂದಾಗಿ ದೇಶದ ಸಮಗ್ರತೆಗೆ ಅಪಾಯ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಗಳ ನಂಬಿಕೆಯನ್ನೇ ಅಲುಗಾಡಿಸುವ ರೀತಿಯಲ್ಲಿ ಭ್ರಷ್ಟಾಚಾರ ಹೆಚ್ಚಳ.

ಈ ನಾಲ್ಕು ಪ್ರಶ್ನೆಗಳ ಹಿನ್ನೆಲೆಯಲ್ಲಿ ನಡೆದ 11ನೇ ಲೋಕಸಭಾ ಚುನಾವಣೆ ದೇಶದ ರಾಜಕೀಯದಲ್ಲಿ ಮಹತ್ವಪೂರ್ಣ ಬದಲಾವಣೆಗಳನ್ನು ತಂದಿತು. ಕಾಂಗ್ರೆಸ್(ಐ) ತನ್ನ ನೀತಿಗಳಿಗೆ ತಕ್ಕ ಪ್ರತಿಫಲ ಪಡೆದು ಮೂರನೇ ಸ್ಥಾನಕ್ಕಿಳಿಯಿತು.

ಬಿಜೆಪಿ ಕಾಂಗ್ರೆಸ್(ಐ) ಬಗ್ಗೆ ಉಂಟಾದ ಅತೃಪ್ತಿಯ ಲಾಭ ಪಡೆದು ಲೋಕಸಭೆಯಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ ದೇಶವನ್ನಾಳುವ ಅದರ ಬಹುದಿನದ ಕನಸು 13 ದಿನಗಳ ಅಲ್ಪಕಾಲದ 'ಆಡಳಿತ'ದ ನಂತರ ನುಚ್ಚುನೂರಾಯಿತಷ್ಟೇ ಅಲ್ಲ ಅದರ ಅಧಿಕಾರ ದಾಹ ಎಂತದೆಂಬುದು ಬಯಲಿಗೆ ಬಂತು. ನಂತರ ಗುಜರಾತಿನಲ್ಲಿನ ಘಟನೆಗಳು, ಮಹಾರಾಷ್ಟ್ರದಲ್ಲಿನ ಘಟನೆಗಳು ಹಾಗೂ 1997 ರಲ್ಲಿ ಸ್ಪಷ್ಟ ರೂಪ ಪಡೆಯುತ್ತಿರುವ ರಾಜಸ್ತಾನದ ಘಟನೆಗಳು ಅದರ ನಿಜ ಹೂರಣವನ್ನು, ಅದೂ ಒಂದು ಕಾಂಗ್ರೆಸ್ಸಿನಂತಹ ಬಂಡವಾಳಶಾಹಿ-ಭೂಮಾಲಕ ಪಕ್ಷ ಎಂಬುದನ್ನು ಜಗಜ್ಜಾಹೀರುಗೊಳಿಸಿದವು.

11ನೇ ಸಾರ್ವತ್ರಿಕ ಚುನಾವಣೆಗಳ ನಂತರ ಉಂಟಾದ ಪರಿಸ್ಥಿತಿ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಪಕ್ಷಗಳಿಗೊಂದು ದೊಡ್ಡ ಸವಾಲಾಗಿತ್ತು. ಈ ಶಕ್ತಿಗಳನ್ನು ಒಂದುಗೂಡಿಸಿ ಒಂದು ತೃತೀಯ ರಂಗವನ್ನು ರಚಿಸುವ ಎಡಶಕ್ತಿಗಳ ಪ್ರಯತ್ನ ಚುನಾವಣೆಗಳ ಮೊದಲು ಸಫಲವಾಗದಿದ್ದರೂ ಚುನಾವಣೆಗಳ ನಂತರ ಎಡಶಕ್ತಿಗಳ ಮುತುವರ್ಜಿಯಿಂದ ಸಂಯುಕ್ತರಂಗ ರಚನೆಗೊಂಡಿತು. ಈ ರಂಗ ಒಂದು 'ಸಮಾನ ಕನಿಷ್ಟ ಕಾರ್ಯಕ್ರಮ'ವನ್ನು ಅಂಗೀಕರಿಸಿ ಇದರ ಆಧಾರದ ಮೇಲೆ ಕೆಲಸ ಮಾಡುವ ಕೇಂದ್ರದಲ್ಲಿ ಒಂದು ಸಮ್ಮಿಶ್ರ ಸರಕಾರ ರಚನೆಗೊಳ್ಳುವಂತಾಯಿತು. ಆದರೆ ಒಂದು ಜನಪರ ನೀತಿಗಳಿಗಾಗಿ ಹೋರಾಟ ಇನ್ನೂ ಮುಂದುವರಿಸಲೇಬೇಕಾಗಿದೆ. ಜನಸಾಮಾನ್ಯರ ಸಾಮೂಹಿಕ ಸಂಘಟನೆಗಳು ಈ ನಿಟ್ಟಿನಲ್ಲಿ ಆಗಲೇ ಮುನ್ನಡೆ ಸಾಧಿಸಿದೆ.

ಭಾರತದಲ್ಲಿ 1996ರ ಇನ್ನೊಂದು ವಿಶಿಷ್ಟತೆಯೆಂದರೆ ಹಿಂದೆಂದೂ ಕಾಣದಷ್ಟು ಸಂಖ್ಯೆಯಲ್ಲಿ ಭ್ರಷ್ಟಾಚಾರ ಹಗರಣಗಳು ಬಯಲಾದದ್ದು, ಇದರಲ್ಲಿ ನ್ಯಾಯಾಂಗ ವಹಿಸಿದ ಶ್ಲಾಘನೀಯ ಪಾತ್ರ, ಇದರಿಂದಾಗಿ ಕಾಂಗ್ರೆಸ್(ಐ) ಪಕ್ಷದಲ್ಲಿ ತೀವ್ರಗೊಂಡ ಬಿಕ್ಕಟ್ಟು.

ಇದು ಕಳೆದುಹೋದ ವರ್ಷದ ಒಂದು ಚಿತ್ರ. ಈ ಮುಂದೆ 1996ರ ಬೆಳವಣಿಗೆಗಳ ಒಂದು ಸ್ಥೂಲ ನೋಟವನ್ನು ನೀಡಲಾಗಿದೆ.

ರಾಜಕೀಯ ವಲಯದ ಬೆಳವಣಿಗೆಗಳು

- ಕಾಂಗ್ರೆಸ್ಸೇತರ, ಬಿಜೆಪಿಯೇತರ ಜಾತ್ಯಾತೀತ ಪಕ್ಷಗಳ ಜನಪರವಾದ ಮೂರನೇ ಪರ್ಯಾಯ ರಚಿಸಲು ಎಡಪಕ್ಷಗಳ ಪ್ರಯತ್ನ.
- ಮುಂಬೈಯಲ್ಲಿ ಎಡಪಕ್ಷಗಳ ಬೃಹತ್ ರ‍್ಯಾಲಿ.
- ತ್ರಿಪುರಾ ಮುನಿಸಿಪಲ್ ಚುನಾವಣೆಗಳಲ್ಲಿ ಎಡರಂಗಕ್ಕೆ ಭಾರೀ ಜಯ.
- ಕೋಮುವಾದ, ಜಾತೀವಾದ, ಭ್ರಷ್ಟಾಚಾರ ಮತ್ತು ಅಪರಾಧೀಕರಣ ನಾವು ಎದುರಿಸಿ ನಿಲ್ಲಬೇಕಾದ ದುಷ್ಟಶಕ್ತಿಗಳು ಎಂದ ಪ್ರಜಾಪ್ರಭುತ್ವ ದಿನಾಚರಣೆಯ ಸಂದರ್ಭದ ರಾಷ್ಟ್ರಪತಿ ಭಾಷಣ.
- ಹವಾಲಾ ಹಗರಣದ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳು ರಾಜೀನಾಮೆ ನೀಡಬೇಕು ಎಂದು ಸಿಪಿಐ(ಎಂ) ಒತ್ತಾಯ.
- ಅಡ್ವಾಣಿಯವರ ಮತ್ತೊಂದು ರಥಯಾತ್ರೆ - ಜನಸ್ಪಂದನ ಗಳಿಸುವಲ್ಲಿ ವಿಫಲ. ಲೋಕಸಭಾ ಚುನಾವಣೆಗೆ ವಿಹೆಚ್‌ಪಿಯ 'ಹಿಂದೂ ಅಜೆಂಡಾ' - ದೇಶಕ್ಕೆ ಸಾವಿನ ಕರೆಯಾಗುವ ಕಾರ್ಯಕ್ರಮ.
- ಪುರುಲಿಯಾ ಶಸ್ತ್ರಾಸ್ತ್ರ ಉದುರಿಸಿದ ಪ್ರಕರಣದಲ್ಲಿ 'ಆನಂದ ಮಾರ್ಗ'ದ ಪಾತ್ರ ಬಯಲು.
- ಕೇಂದ್ರ ಸರಕಾರದ ಬಜೆಟ್ ಅಂಕಿಂಗಳ ಕಸರತ್ತಿನ ಚುನಾವಣಾ ಭಾಷಣವಾದ ಬಜೆಟ್ ಮಂಡನೆ.
- ತಮಿಳುನಾಡಿನಲ್ಲಿ ಎಐಡಿಎಂಕೆಯೊಡನೆ ಮೈತ್ರಿ ಮಾಡಿಕೊಳ್ಳುವ ನಿರ್ಧಾರದಿಂದ ಕಾಂಗ್ರೆಸ್(ಐ)ನಲ್ಲಿ ಒಡಕು-ಕೊನೆಗೆ ಟಿಎಂಸಿ ಪಕ್ಷದ ರಚನೆ.
- ಜೂನ್‌ವರೆಗೆ ಮುಂದೂಡಲು ರಾವ್ ಸರಕಾರದ ಪ್ರಯತ್ನ ವಿಫಲವಾಗಿ 11ನೇ ಲೋಕಸಭಾ ಚುನಾವಣೆಗಳು-ಹವಾಲಾ ಕಾಂಗ್ರೆಸ್ಸನ್ನು ಸೋಲಿಸಲು, ಬಿಜೆಪಿಯನ್ನು ಸೋಲಿಸಲು ಮೂರನೇ ಪರ್ಯಾಯವನ್ನು ಗೆಲ್ಲಿಸಲು ಕರೆ.
- ಚುನಾವಣಾ ಫಲಿತಾಂಶ - ಕಾಂಗ್ರೆಸ್‌ಗೆ ಸಂಪೂರ್ಣ ತಿರಸ್ಕಾರ, ಬಿಜೆಪಿಯ ಅಬ್ಬರಕ್ಕೆ ಕಡಿವಾಣ - ಆದರೂ ಅತ್ಯಂತ ದೊಡ್ಡ ಏಕಪಕ್ಷವಾಗಿ ಹೊರಹೊಮ್ಮಿತು.
- ಕಾಂಗ್ರೆಸ್ಸೇತರ ಜಾತ್ಯಾತೀತ ಸಮ್ಮಿಶ್ರ ಸರಕಾರ ರಚಿಸಲು ಸಿದ್ಧತೆ. ತಾನೇ ಅತಿ ದೊಡ್ಡ ಪಕ್ಷವಾದ್ದರಿಂದ ಬಹುಮತಕ್ಕೆ 100ರಷ್ಟು ಸ್ಥಾನಗಳು ಕಮ್ಮಿಯಿದ್ದರೂ ಸರಕಾರ ರಚಿಸಲು ಆಹ್ವಾನ ನೀಡಬೇಕೆಂದು ಬಿಜೆಪಿ-ಶಿವಸೇನೆಯ ಬೆಂಬಲ, ಸಮತಾ ಪಕ್ಷದ 'ಪ್ರಶ್ನೆಯಾಧಾರಿತ' ಬೆಂಬಲ. ಟಿಎಂಸಿ, ಡಿಎಂಕೆ, ತೆಲುಗುದೇಶಂ ಮನ ಒಲಿಸುವ ಬಿಜೆಪಿ ಪ್ರಯತ್ನ ವಿಫಲ. ಕೇವಲ ಅಕಾಲಿ ದಳದ ಬೆಂಬಲ.
- ಕಾಂಗ್ರೆಸ್ಸೇತರ, ಬಿಜೆಪಿಯೇತರ ಪಕ್ಷಗಳ ಮೂರನೇ ರಂಗದ ಮುಖಂಡತ್ವ ವಹಿಸಲು ಜ್ಯೋತಿ ಬಸುರವರಿಗೆ ಕೋರಿಕೆ. ಕಾಂಗ್ರೆಯೇತರ ಜಾತ್ಯಾತೀತ ಸರಕಾರ ರಚನೆಗೆ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಲೇ ಸರಕಾರಕ್ಕೆ ಸೇರದಿರಲು ಸಿಪಿಐ(ಎಂ) ನಿರ್ಧಾರ. ದೇವೇಗೌಡರು ನಾಯಕರಾಗಿ ಆಯ್ಕೆ, ದೇವೇಗೌಡರ ನೇತೃತ್ವಕ್ಕೆ ಬೇಷರತ್ ಬೆಂಬಲಿಸಲು ಕಾಂಗ್ರೆಸ್(ಐ) ನಿರ್ಧಾರ. ಆದರೆ ಈ ನಿರ್ಧಾರವನ್ನೂ ರಾಷ್ಟ್ರಪತಿಗಳಿಗೆ ತಿಳಿಸುವಲ್ಲಿ ವಿಳಂಬ.
- ವಾಜಪೇಯಿಯವರಿಗೆ ರಾಷ್ಟ್ರಪತಿ ಆಹ್ವಾನ. 13 ದಿನಗಳ ಸರಕಾರ ವಿಶ್ವಾಸಮತ ಎದುರಿಸಲಾಗದೆ ಬಿಜೆಪಿ ಸರಕಾರ ಪತನ. ದೇವೇಗೌಡರ ನೇತೃತ್ವದಲ್ಲಿ ಸಂಯುಕ್ತ ರಂಗ ಸರಕಾರ ರಚನೆ.
- ಸಂಯುಕ್ತ ರಂಗ ಸಮಾನ ಕನಿಷ್ಟ ಕಾರ್ಯಕ್ರಮ ಬಿಡುಗಡೆ, ಸಂಯುಕ್ತ ರಂಗ ಸರಕಾರಕ್ಕೆ ಲೋಕಸಭೆಯಲ್ಲಿ ವಿಶ್ವಾಸಮತ.
- ಸಂಯುಕ್ತ ರಂಗ ಸರಕಾರದಿಂದ ಪೆಟ್ರೋಲಿಯಂ ಬೆಲೆಗಳ ಏರಿಕೆ - ಸಿಪಿಐ(ಎಂ) ಖಂಡನೆ. ಆದರೆ ಕೇಂದ್ರ-ರಾಜ್ಯ ಸಂಬಂಧಗಳನ್ನು ಸುಧಾರಿಸುವತ್ತ, ಜನಸಾಮಾನ್ಯರ ಕನಿಷ್ಟ ಅಗತ್ಯಗಳತ್ತ ಗಮನ ಹರಿಸುವ ಪ್ರಯತ್ನಕ್ಕೆ ಬೆಂಬಲ. ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹಾಕದ ರೈಲ್ವೇ ಬಜೆಟ್ ಬಂತು. ನಂತರ ಬಂತು ಮಾತಿಗೂ ಕೃತಿಗೂ ಅಪಾರ ಅಂತರವಿದ್ದ, ಜನಪರವಾದ ಪರ್ಯಾಯ ಅಭಿವೃದ್ಧಿ ಮಾರ್ಗವನ್ನು ಸೂಚಿಸದ, ಸುಮಾರು ರಾವ್ ಸರಕಾರದ ಹಾದಿಯಲ್ಲೇ ಇದ್ದ ಚಿದಂಬರಂ ಬಜೆಟ್. ಐ.ಎಂ.ಎಫ್-ವಿಶ್ವಬ್ಯಾಂಕ್ ಚೌಕಟ್ಟಿನಿಂದ ಹೊರಬರಲಾಗದ ಹಣಕಾಸು ಮಂತ್ರಿಗಳು, ಲಾಭದಾಯಕ ಸಾರ್ವಜನಿಕ ವಲಯದ ಘಟಕಗಳ ಶೇರುಗಳನ್ನು ಮಾರಿ 5000 ಕೋಟಿ ರೂ. ಎತ್ತಲು ಚಿದಂಬರಂ ಪ್ರಯತ್ನ, ವಿಮಾ ವಲಯವನ್ನು ದೇಶೀ-ವಿದೇಶೀ ಖಾಸಗಿಯವರಿಗೆ ತೆರೆಯಲು ಪ್ರಯತ್ನ. ಸಿಪಿಐ(ಎಂ)ನ ಬಲವಾದ ವಿರೋಧ.
- ಸ್ವಾತಂತ್ರ್ಯ ದಿನದ ಭಾಷಣದಿಂದ ಉತ್ತರಾಖಂಡ ರಾಜ್ಯ ರಚಿಸುವ ಪ್ರಯತ್ನಗಳ ಭರವಸೆಯಿಂದ ಹಲವಾರು ಪ್ರತ್ಯೇಕ ಸಣ್ಣ ರಾಜ್ಯಗಳ ರಚನೆಯ ಬೇಡಿಕೆಗಳಲ್ಲಿ ಹೆಚ್ಚಳ.
- ಉತ್ತರ ಪ್ರದೇಶ, ಜಮ್ಮು-ಕಾಶ್ಮೀರಗಳಲ್ಲಿ ಚುನಾವಣೆ. ಜಮ್ಮು-ಕಾಶ್ಮೀರದಲ್ಲಿ ಕೊನೆಗೂ ಡಾ.ಫರೂಕ್ ಅಬ್ದುಲ್ಲಾರ ನೇತೃತ್ವದಲ್ಲಿ ಜನಪ್ರಿಯ ಸರಕಾರ ರಚನೆ. ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ನಿರೀಕ್ಷಿತ ವಿಜಯ ಸಿಗದಂತೆ ಮಾಡುವಲ್ಲಿ ಜಾತ್ಯಾತೀತ ಶಕ್ತಿಗಳ ಯಶಸ್ಸು. ಸರಕಾರ ರಚಿಸುವ ಪ್ರಯತ್ನದಲ್ಲಿ ಬಿ.ಎಸ್.ಪಿ. ಮತ್ತು ಬಿಜೆಪಿಯ ಹೊಲಸು ಸಮಯಸಾಧಕತನದ ಪ್ರದರ್ಶನ. ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಮುಂದುವರಿದಿದೆ. ಇದು ತಪ್ಪುಎಂದು ಲಕ್ನೌ ಹೈಕೋರ್ಟ್. ಈ ತೀರ್ಪಿಗೆ ಸುಪ್ರೀಂಕೋರ್ಟ್ ತಡೆಯಾಜ್ಞೆ. ಬಿಎಸ್‌ಪಿ, ಬಿಜೆಪಿಗಳ ಸಮಯಸಾಧಕತನ -ಕಾಂಗ್ರೆಸ್‌ನ ವಿಫಲತೆ ಇನ್ನಷ್ಟು ಪ್ರಯತ್ನಗಳು.
- ಪ್ರಧಾನಮಂತ್ರಿಗಳು ಭರವಸೆಯಿತ್ತರೂ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ. 33 ಮೀಸಲಾತಿ ಮಸೂದೆ ಪಾಸಾಗದಂತೆ ಹಲವು ಬಂಡವಾಳಶಾಹಿ ರಾಜಕಾರಣಿಗಳ ಪ್ರಯತ್ನ. ಕೃಷಿ ಕೂಲಿಕಾರರಿಗೆ ಸಮಗ್ರ ಶಾಸನ ರಚಿಸುವ ಭರವಸೆಯೂ ಈಡೇರಲಿಲ್ಲ.
- ಅಂತರ್ರಾಷ್ಟ್ರೀಯರಂಗದಲ್ಲಿ ಪಾಶ್ಚಿಮಾತ್ಯ ದೇಶಗಳು ಬಯಸಿದಂತೆ ಸಿಟಿಬಿಟಿ ಸಂಧಿಗೆ ಸಹಿ ಹಾಕಲು ನಿರಾಕರಿಸಿದರೂ, ಡಬ್ಲ್ಯುಟಿಓನಲ್ಲಿ ಇಂತಹುದೇ ದೃಢ ನಿಲುವಿನ ಅಭಾವ.
- ಚೀಣಾದೊಂದಿಗೆ ಸಂಬಂಧಗಳನ್ನು ಸುಧಾರಿಸುವಲ್ಲಿ ಸಂಯುಕ್ತ ರಂಗ ಸರಕಾರದ ಮತ್ತೊಂದು ಹೆಜ್ಜೆ- ಭಾರತಕ್ಕೆ ಚೀಣೀ ಅಧ್ಯಕ್ಷರ ಮಹತ್ವಪೂರ್ಣ ಭೇಟಿ. ಬಾಂಗ್ಲಾದೇಶದೊಂದಿಗೆ ಗಂಗಾ ನದಿ ನೀರು ಕುರಿತಂತೆ ಒಂದುಸಂಧಿ- ಉಭಯ ದೇಶಗಳಲ್ಲಿ ಮೂಲಭೂತವಾದಿಗಳು ಮತ್ತು ಕೋಮುವಾದಿಗಳನ್ನು ಬಿಟ್ಟು ಮತ್ತೆಲ್ಲರ ಸ್ವಾಗತ. ಭಾರತಕ್ಕೆ ಬಾಂಗ್ಲಾ ದೇಶದ ಪ್ರಧಾನಿಗಳ ಭೇಟಿ. ವರ್ಷಾಂತ್ಯದಲ್ಲಿ ಬಾಂಗ್ಲಾದೇಶಕ್ಕೆ ಭಾರತದ ಪ್ರಧಾನಿಗಳ ಭೇಟಿ.


ಹಗರಣಗಳ ವರ್ಷ

- ಹವಾಲಾ ಹಗರಣದಲ್ಲಿ ಕಂತು ಕಂತುಗಳಾಗಿ ಕಾಂಗ್ರೆಸ್, ಬಿಜೆಪಿ ಮತ್ತು ಇತರ ಬಂಡವಾಳಶಾಹಿ ಪಕ್ಷಗಳ ಮುಖಂಡರುಗಳ ಹೆಸರುಗಳು ಬಯಲು. ಸ್ವತಃ ಪ್ರಧಾನಿ ನರಸಿಂಹರಾಯರ ಮೇಲೂ ಸಂದೇಹ.
- ರಾಯರ ನಿಕಟವರ್ತಿ ಚಂದ್ರಾಸ್ವಾಮಿ ಬಂಧನ. ಹಲವಾರು ಮೊಕದ್ದಮೆಗಳು.
- ತನ್ನ ಸರಕಾರದ ಮೇಲಿಟ್ಟ ಅವಿಶ್ವಾಸ ಠರಾವನ್ನು ಸೋಲಿಸಲು ಜಾರ್ಖಂಡ್ ಮುಕ್ತಿ ಮೋರ್ಚಾದ ಸಂಸತ್ ಸದಸ್ಯರಿಗೆ ಲಂಚ ನೀಡಿದ ಪ್ರಕರಣದಲ್ಲಿ, ಮಾಜಿ ಪ್ರಧಾನಿ ವಿ.ಪಿ.ಸಿಂಗ್‌ರ ಹೆಸರು ಕೆಡಿಸಲು ಸ್ಯೆಂಟ್ ಕಿಟ್ಸ್ ಫೋರ್ಜರಿ ಹಗರಣದಲ್ಲಿ ಹಾಗೂ ಲಕ್ಕೂಭಾಯಿ ಪಾಠಕ್ ಎಂಬ ಅನಿವಾಸಿ ಭಾರತೀಯ ಉದ್ಯಮಿಗೆ ವಂಚನೆ ಮಾಡಿದ ಮೊಕದ್ದಮೆಗಳಲ್ಲಿ ಮಾಜಿ ಪ್ರಧಾನಿ ನರಸಿಂಹರಾವ್ ಹೆಸರು, ಜಾಮೀನುಗಳನ್ನು ಪಡೆಯಲು ಸತತ ಪ್ರಯತ್ನ. ಕೊನೆಗೂ ಕ್ರಿಮಿನಲ್ ಮೊಕದ್ದಮೆಯಲ್ಲಿ ಮಾಜಿ ಪ್ರಧಾನಿ ಕಟಿಕಟೆಯಲ್ಲಿ.
- ಟೆಲಿಕಾಂ ಹಗರಣದಲ್ಲಿ ನರಸಿಂಹರಾವ್ ಸರಕಾರದ ಮಂತ್ರಿ ಸುಖ್‌ರಾಂ ಅಕೃತ್ಯಗಳು ಒಂದೊಂದಾಗಿ ಬಯಲು-ಬಂಧನ. ದೇಶಕ್ಕೆ ಅಧಿಕೃತವಾಗಿಯೇ 1200 ಕೋಟಿ ರೂ.ನಷ್ಟು ನಷ್ಟ.
- ಯೂರಿಯಾ ಹಗರಣದಲ್ಲಿ ಮಾಜಿ ಪ್ರಧಾನಿಗಳ ಬಂಧುಗಳು ಮತ್ತು ಇತರರಿಂದ ಸರಕಾರಕ್ಕೆ 135 ಕೋಟಿ ರೂ. ವಂಚನೆ.
- 1000 ಕೋಟಿ ರೂ.ಗಳ ವೈದ್ಯಕೀಯ ಉಪಕರಣಗಳ ಹಗರಣದಲ್ಲಿ ರಾವ್ ಸರಕಾರದ ಇನ್ನೊಬ್ಬ ಮಂತ್ರಿ ಶಂಕರಾನಂದರ ಪಾತ್ರ ಬಯಲು.
- ಸರಕಾರೀ ವಸತಿಗಳ ವಿಲೇವಾರಿಯ ಹಗರಣದಲ್ಲಿ ಇನ್ನಿಬ್ಬರು ಮಂತ್ರಿಗಳಾದ ಕಾಂಗ್ರೆ ಮಂತ್ರಿ ಶೀಲಾ ಕೌಲ್, ಪಿ.ಕೆ.ತುಂಗನ್ ಪಾತ್ರ ಬಯಲು. ರಾಜ್ಯಪಾಲ ಹುದ್ದೆಗೆ ರಾಜೀನಾಮೆ.
- ಪೆಟ್ರೋಲ್ ಬಂಕ್‌ಗಳ ವಿತರಣೆಯ ಹಗರಣದಲ್ಲಿ ಮತ್ತೊಬ್ಬ ಮಾಜಿ ಕಾಂಗ್ರೆ ಮಂತ್ರಿ ಕ್ಯಾಪ್ಟನ್ ಸತೀಶ್ ಶರ್ಮಾ ಆರೋಪಿ.
- ಎಲ್ಲಕ್ಕೂ ಮುಕುಟವಿಟ್ಟಂತೆ ಮಾಜಿ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ 8 ಮೊಕದ್ದಮೆಗಳಲ್ಲಿ ಜಾಮೀನು ಪ್ರಯತ್ನ. ಕೊನೆಗೂ ಟಿ.ವಿ. ಖರೀದಿ ಹಗರಣದಲ್ಲಿ ಬಂಧನ. ಕೋಟ್ಯಾಂತರ ರೂಪಾಯಿಗಳ ಅಕ್ರಮ ಗಳಿಕೆ ಬಯಲಿಗೆ-ಹಣ, ಆಭರಣಗಳ, ಬಟ್ಟೆಗಳು, ಚಪ್ಪಲಿಗಳು, ಸ್ಥಿರಾಸ್ತಿಗಳು ಇತ್ಯಾದಿ - 'ಭಾರತದ ಇಮೆಲ್ಡಾ ಮಾರ್ಕೋಸ್' ಎಂಬ ಬಿರುದಿಗೆ ಪಾತ್ರ.
- ಬಿಹಾರದಲ್ಲಿ ಅಷ್ಟೇ ಹೊಲಸಾದ ಸಾವಿರಾರು ಕೋಟಿ ರೂ.ಗಳ ಮೇವು ಹಗರಣ ಪತ್ತೆ. ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್‌ರ ವಿಚಾರಣೆ ಇತ್ತೀಚೆಗೆ ಮುಗಿಯಿತು.
- ಹಗರಣಗಳ ಸರಿಯಾದ ತನಿಖೆ ನಡೆಯುವಲ್ಲಿ ನ್ಯಾಯಾಂಗದ ಪ್ರಶಂಸಾರ್ಹ ಪಾತ್ರ. ಇದರಿಂದ ಕುಪಿತರಾದ ಕಾಂಗ್ರೆಸ್(ಐ), ಬಿಜೆಪಿ, ಶಿವಸೇನಾ ಮತ್ತಿತರ ಪಕ್ಷಗಳಿಂದ ನ್ಯಾಯಾಲಯಗಳ ಸಕ್ರಿಯತೆ ಬಗ್ಗೆ ದೂಷಣೆ.
- ಸಂಯುಕ್ತ ರಂಗ ಸರಕಾರ ಸಿಬಿಐ ವಿಚಾರಣೆ ಕೆಲಸ ಮಾಡಲು ಅಡ್ಡಿ ಪಡಿಸುವಂತೆ ಪ್ರಭಾವ ಬೀರುವ ಪ್ರಯತ್ನ - ಅದಕ್ಕೆ ಪ್ರತಿಭಟನೆ. ಈ ಬಗ್ಗೆ ಸರಿಯಾದ ನಿಲುವು ತಳೆಯದಿದ್ದರೆ ಜನಗಳಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೊರಟು ಹೋಗುತ್ತದೆ ಎಂದು ಪ್ರಜಾಪ್ರಭುತ್ವವಾದಿಗಳ ಎಚ್ಚರಿಕೆ.

ಕಾಂಗ್ರೆಸ್ಸಿನ ದುಸ್ಥಿತಿ

- ಅಧಿಕಾರ ಕಳೆದುಕೊಂಡು ಪಕ್ಷದ ಅತ್ಯುನ್ನತ ಮುಖಂಡನೇ ಹಲವಾರು ಹಗರಣಗಳಲ್ಲಿ ಶಾಮೀಲಾಗಿ ಜಾಮೀನುಗಳಿಗೆ ಪರದಾಡುವ ಸ್ಥಿತಿಯಲ್ಲಿ ಅಂತರಿಕ ತಿಕ್ಕಾಟಗಳು ತೀವ್ರ.
- ನರಸಿಂಹರಾವ್ ಕಾಂಗ್ರೆಸ್ ಅಧ್ಯಕ್ಷ ಪದವಿ ಬಿಡುವಂತೆ ಒತ್ತಾಯ. ಕೊನೆಗೂ ಸೀತಾರಾಂ ಕೇಸರಿ ಅಧ್ಯಕ್ಷರು.
- ನಂತರ ಕಾಂಗ್ರೆಸ್ ಪಾರ್ಲಿಮೆಂಟರೀ ಪಕ್ಷದ ನಾಯಕನ ಸ್ಥಾನವನ್ನು ಬಿಡುವಂತೆ ವಿಪರೀತ ಒತ್ತಾಯ. ರಾವ್ ನಕಾರ. ಕೊನೆಗೂ ಪಕ್ಷ ಹಾಕಿದ ಸಮಯ ಮಿತಿಯೊಳಗೆ ಆ ಹುದ್ದೆಗೂ ರಾವ್ ರಾಜೀನಾಮೆ.
- ಹೊಸ ನಾಯಕನ ಆಯ್ಕೆಯಲ್ಲಿ ಭಾರೀ ಎಳೆದಾಟ. ರಾಜೇಶ್ ಪೈಲಟ್, ಶರದ್ ಪವಾರ್ ಸವಾಲು. ರಾವ್ ಬೆಂಬಲಿಗರ ಸತತ ಪ್ರಯತ್ನ. ಕೊನೆಗೆ ಕಾಂಗ್ರೆಸ್ ಅಧ್ಯಕ್ಷರೇ ಮತ್ತೆ ಸಂಸದೀಯ ಪಕ್ಷದ ನಾಯಕರೂ ಆಗಿ "ಸರ್ವ ಸಮ್ಮತಿ"ಯ ಆಯ್ಕೆ.

ಪುಟ 5 ಕ್ಕೆ



ಬಾಣದ ತುದಿಗೆ ಕಟ್ಟಲ್ಪಟ್ಟ ಬೆಲೆಗಳು

ಬೆಲೆಗಳು ಬಾಣದ ತುದಿಗೆ ಕಟ್ಟಲ್ಪಟ್ಟು ಆ ಬಾಣವನ್ನು ಆಕಾಶಕ್ಕೆ ಬಿಟ್ಟಂತೆ ತೋರುತ್ತದೆ. ಯಾರು ಈ ಬಾಣ ಬಿಟ್ಟರು? ಉದಾರೀಕರಣವೆಂಬ ಮಹಾಸ್ತ್ರವನ್ನು ನಮ್ಮ ಬೂರ್ಷ್ವಾ ಆಳುವ ವರ್ಗ ಆಕಾಶಕ್ಕೆ ಬಿಟ್ಟಿದೆ. ಇಲ್ಲಿ ಹೇಳುವುದೇನೂ ಇಲ್ಲ. ಬೆಲೆಗಳು ಏರುತ್ತಲೇ ಇವೆ. ಪತ್ರಿಕೆಗಳಿಗೆ ಬೆಲೆಗಳು ನಿಂತಿರುವ ವಿಷಯ ಬರೆವ ಪ್ರಮೇಯವೇ ಇಲ್ಲ. ಬೆಲೆಗಳು ಯಾವ ವೇಗದಲ್ಲಿ ಏರುತ್ತಿವೆ ಎಂಬುದು ಮಾತ್ರ ಅವರು ಬರೆಯಬೇಕಾದ ಸುದ್ದಿ.

ಆದರೂ ಕಳೆದ ಚುನಾವಣೆಯ ಮೇಲೆ ಕಣ್ಣಿಟ್ಟು ಹಿಂದಿನ ನರಸಿಂಹರಾಯರ ಸರಕಾರ ಬೆಲೆಗಳು ಏರುವ ವೇಗವನ್ನು ಸ್ವಲ್ಪ ಹಿಡಿತದಲ್ಲಿಟ್ಟಿತ್ತು. ಆದರೆ ಒಳಗೇ ಬೆಲೆಗಳ ಏರಿಕೆಯ ಸಿದ್ಧತೆಯೂ ನಡೆದಿತ್ತು. ಸಂಯುಕ್ತರಂಗ ಸರಕಾರ ಅಧಿಕಾರಕ್ಕೆ ಬಂದನಂತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಅಗಾಧವಾಗಿ ಏರಿಸುವುದರ ಜೊತೆಗೆ ಬೆಲೆಗಳು ಮತ್ತೆ ವೇಗವಾಗಿ ಏರತೊಡಗಿದವು. ಈಗ ಹಣದುಬ್ಬರದ ದರ ಬೆಳೆಯುತ್ತಲೇ ಇದೆ. ಈಗ ಹಣದುಬ್ಬರದ ದರ ಶೇ 7.02 ಕ್ಕೇರಿದೆ.

ಡಿಸೆಂಬರ್ 14 ಕ್ಕೆ ಕೊನೆಗೊಂಡ ವಾರದಲ್ಲಿ ಹಣದುಬ್ಬರದ ಪ್ರಮಾಣ ಶೇ 0.2 ರಷ್ಟು ಏರಿದೆ. ಇದಕ್ಕೆ ಮುಖ್ಯ ಕಾರಣ ಹಣ್ಣುಗಳು, ತರಕಾರಿ, ಜೋಳ, ಮೆಕ್ಕೆಜೋಳ, ಉದ್ದು, ಸೆಣಬು, ಕಡಲೇಕಾಯಿ ಬೀಜ, ರಬ್ಬರ್, ಚರ್ಮ ಇತ್ಯಾದಿಗಳ ಬೆಲೆಗಳು ಏರಿದ್ದು, ಈ ಪಟ್ಟಿಯನ್ನು ನೋಡಿದರೆ ಆಹಾರ ಪದಾರ್ಥಗಳೇ ಇದರಲ್ಲಿ ಹೆಚ್ಚಾಗಿವೆ. ಆದ್ದರಿಂದಲೇ ಇದು ಈ ಪದಾರ್ಥಗಳನ್ನು ಬಳಸುವವರನ್ನು ತಟ್ಟುತ್ತದೆ. ಆಹಾರ ಪದಾರ್ಥಗಳನ್ನು ಎಲ್ಲರೂ ಬಳಸುತ್ತಾರಲ್ಲವೇ? ಶ್ರೀಮಂತರ ಆದಾಯವು ಹೆಚ್ಚುತ್ತದೆ (ಉದಾಹರಣೆ ವ್ಯಾಪಾರಿಗಳು, ಉದ್ಯಮಿಗಳು ಇತ್ಯಾದಿ) ದುಡಿವ ಜನ ಮತ್ತು ಜನಸಾಮಾನ್ಯರ ಆದಾಯ ಹೆಚ್ಚದೇ ಇರುವುದರಿಂದ ಇವರೇ ಹೆಚ್ಚು ನೋವನ್ನನುಭವಿಸಬೇಕಾಗುತ್ತದೆ. ಅಂದರೆ ಉಪವಾಸ. ಆದರಿಂದಾಗುವ ಪೌಷ್ಟಿಕಾಂಶದ ಕೊರತೆ, ದುರ್ಬಲತೆಯಿಂದ ಬರುವ ರೋಗಗಳು ಇತ್ಯಾದಿಗಳಿಂದ ಬಳಲುವುದು. ಈ ಕಾರಣಕ್ಕಾಗಿಯೇ ಜನಪರ ಸರಕಾರ ದೇಶದ ಜನರ ಕನಿಷ್ಟ ಅವಶ್ಯಕತೆಯ ವಸ್ತುಗಳಾದ ಆಹಾರ, ಬಟ್ಟೆ, ಔಷಧಿ ಇತ್ಯಾದಿಗಳು ಸುಲಭ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಬೇಕೆನ್ನುವುದು.

ಉದಾರೀಕರಣ ಇವೆಲ್ಲವಕ್ಕೆ ವಿರುದ್ಧವಾದುದು ಎಂಬುದು ಸ್ಪಷ್ಟ. ಆದ್ದರಿಂದಲೇ ಉದಾರೀಕರಣ ಜನವಿರೋಧಿಯೆನ್ನುವುದು.

ವಾರದ ಆರ್ಥಿಕ ಟಿಪ್ಪಣಿಗಳು

ಡಿ.ಎಸ್.ಮಣಿ

ಮುಂದಿನ ಬಜೆಟ್ಟಿಗೆ ಈಗಲೇ ಗಾಳಿ

ಈಗಲೇ ಬಂಡವಾಳಿಗರು ಮುಂದಿನ ಬಜೆಟ್ಟಿಗೆ ಗಾಳಿ ಹಾಕುತ್ತಿದ್ದಾರೆ. ಕನಿಷ್ಟ ಸಮಾನ ಕಾರ್ಯಕ್ರಮವೆಂಬ ಸಂಯುಕ್ತರಂಗ ಸರಕಾರದ ಆರ್ಥಿಕ ಕಾರ್ಯಕ್ರಮ ಹಲವು ಜನಪರವಾದ ಕಾರ್ಯಕ್ರಮಗಳನ್ನು ಒಳಗೊಂಡಿದೆ ಎಂಬುದರಲ್ಲಿ ಸಂಶಯವೇ ಇಲ್ಲ. ಆದರೆ ಅದನ್ನು ಅನುಷ್ಠಾನಕ್ಕೆ ತರಬೇಕಾದ ಕೇಂದ್ರ ಹಣಕಾಸು ಮಂತ್ರಿ ಮಹಾಶಯರು ಮಹಾ ಉದಾರೀಕರಣವಾದಿ. ಆದರೆ ಆತ ಈಗ ಸಂಯುಕ್ತರಂಗದ ಹಣಕಾಸು ಮಂತ್ರಿ ಈತ ಈ ಕನಿಷ್ಠ ಸಮಾನ ಕಾರ್ಯಕ್ರಮವನ್ನು ಎಷ್ಟೇ ಉದಾರೀಕರಣದ ಪರವಾಗಿ ಅರ್ಥೈಸಿ ಜಾರಿಗೆ ತಂದರೂ ಅದಕ್ಕೊಂದು ಮಿತಿಯಿದೆ. ಆದ್ದರಿಂದಲೇ ಸಂಯುಕ್ತರಂಗ ಸರಕಾರ ಜನಸಾಮಾನ್ಯರ ಕಷ್ಟಗಳಿಗೆ ಬೆನ್ನು ತೋರಿ ಕುಳಿತುಕೊಳ್ಳಲು ಸಾಧ್ಯವಿಲ್ಲ.

ಇದರಿಂದಾಗಿಯೇ MAT ಅಂದರೆ ಕನಿಷ್ಟ ಪರ್ಯಾಯ ತೆರಿಗೆಯಂತಹ ತೆರಿಗೆ ಬಂತು. ಆದರೆ ಇದರಿಂದ ನಮ್ಮ ಬಂಡವಾಳಿಗರು ಕಂಗಾಲಾಗಿದ್ದಾರೆ. ಇಂತಹ ಜನಪರ ನೀತಿಗಳೆಂದರೆ ಬಂಡವಾಳಿಗರಿಗೆ ಅನ್ಯಾಯ ಮಾಡಲು ಮುಕ್ತ ಅವಕಾಶ ನೀಡುವುದಿಲ್ಲ. ಆರ್ಥಿಕ ಸುಧಾರಣೆಗಳು ಇನ್ನೂ ತೀವ್ರ ಗತಿಯಲ್ಲಿ ಆಗಬೇಕು, ಮ್ಯಾಟ್‌ನಂತಹ ತೆರಿಗೆ ರದ್ದಾಗಬೇಕು, ಆಮದು ಮತ್ತು ರಫ್ತು ಇನ್ನೂ ಹೆಚ್ಚು ಉದಾರವಾಗಬೇಕು ಎಂಬಂತಹ ಹತ್ತು ಹಲವು ಬೇಡಿಕೆಗಳನ್ನು ಈ ಬಂಡವಾಳಿಗರು ಸರಕಾರದ ಮುಂದಿಟ್ಟು ಒತ್ತಡ ಹೇರತೊಡಗಿದ್ದಾರೆ. ಈ ಕ್ರಮಗಳನ್ನು ಕೈಗೊಳ್ಳದೆ ಹೋದರೆ ದೇಶದ ಔದ್ಯಮಿಕ ಬೆಳವಣಿಗೆ ಹೆಚ್ಚಾಗುವುದಿಲ್ಲ ಮತ್ತು ಆ ಮೂಲಕ ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ ಎಂದು ಅವರು ಹೇಳುತ್ತಿದ್ದಾರೆ.

ಈಗ ಕಾಂಗ್ರೆಸ್ ಪಕ್ಷ ಸೀತಾರಾಂ ಕೇಸರಿಯ ನೇತೃತ್ವದಡಿ ಬಂದಿರುವುದರಿಂದ ಉದಾರೀಕರಣದ ನೀತಿಗಳ ಮೇಲೆ ಹೆಚ್ಚು ಒತ್ತು ನೀಡುವಂತೆ ಸಂಯುಕ್ತರಂಗ ಸರಕಾರದ ಮೇಲೆ ಒತ್ತಡ ಹೇರಲು ಅದು ತೊಡಗಿದೆ.

ಇಂತಹ ಹಿನ್ನೆಲೆಯಲ್ಲಿ ಬಂಡವಾಳಿಗರು, ಕಾಂಗ್ರೆಸ್ ಪಕ್ಷ(ಈಗ ಆಂತರಿಕ ಒಗ್ಗಟ್ಟು ಹೆಚ್ಚಾಗಿರಬಹುದಾದ್ದರಿಂದ)ಗಳ ಒತ್ತಡ ಮತ್ತು ಕೇಂದ್ರ ಹಣಕಾಸು ಮಂತ್ರಿ, ಆತನ ಪಕ್ಷ ಮತ್ತು ಸಂಯುಕ್ತರಂಗದಲ್ಲೇ ಇರುವ ಉದಾರೀಕರಣದ ಪರವಾಗಿರುವ ಪಕ್ಷಗಳ ಒಳಗಿನ ಒತ್ತಡ ಇವೆಲ್ಲ ಸೇರಿ ಮುಂದಿನ ಬಜೆಟ್ಟು ಹೆಚ್ಚು ಉದಾರೀಕರಣದ ಪರ ಆಗಬಹುದೆಂಬ ನಿರೀಕ್ಷೆ ಇದೆ.

ಎಡ ಪಕ್ಷಗಳ ಜವಾಬ್ದಾರಿ ಇದರಿಂದ ತೀವ್ರ ಹೆಚ್ಚಾಗುತ್ತದೆ. ಸಂಯುಕ್ತರಂಗ ಸರಕಾರ ಜನಪರವಾದ ಆರ್ಥಿಕ ನೀತಿಗಳನ್ನು ಜಾರಿಗೆ ತರುವಂತೆ ಮಾಡುವ ಜವಾಬ್ದಾರಿ ಈ ಎಡಪಕ್ಷಗಳ ಮೇಲೆ ಇದೆ. ಉದಾರೀಕರಣದ ಪರವಾದ ಗಾಳಿಯನ್ನು ತಡೆಯಬೇಕಾಗಿದೆ.

ಹೊಲಸೆದ್ದು ಹೋಗಿರುವ ಶೇರು ಮಾರುಕಟ್ಟೆ

ಉದಾರೀಕರಣದ ಹೊಸ್ತಿಲಲ್ಲೇ ಶೇರು ಹಗರಣ ನಡೆದು ಈ ಶೇರು ವ್ಯವಹಾರದಲ್ಲಿ ಎಂತೆಂತಹ ಹೊಲಸು ನಡೆಯುತ್ತದೆ ಎಂಬುದು ಎಲ್ಲರಿಗೂ ಗೊತ್ತಾಗುವಂತಾಯಿತು. ಆದರೆ ಉದಾರೀಕರಣ ನಿಲ್ಲಲಿಲ್ಲ. ಶೇರು ಮಾರುಕಟ್ಟೆಯಲ್ಲಿ ಉದಾರೀಕರಣದ ಕ್ರಮಗಳು ಬಂದವು. ಉದಾರೀಕರಣದ ಜೊತೆಗೇ ಹಲವು ಅಕ್ರಮಗಳು ನಡೆಯ ತೊಡಗಿದವು.

ಈಗಂತೂ ಶೇರು ಮಾರುಕಟ್ಟೆ ನೆಲ ನೋಡುತ್ತಿದೆ. ಈ ಶೇರು ಮಾರುಕಟ್ಟೆ ನೆಲ ನೋಡುವುದು ಅಥವಾ ಆಕಾಶ ನೋಡುವುದು ಅದರ ಸ್ವಂತ ದೌರ್ಬಲ್ಯ ಅಥವಾ ಶಕ್ತಿಯಿಂದಲ್ಲ, ಬದಲಿಗೆ ಈ ಮಾರುಕಟ್ಟೆಯಲ್ಲಿ ನಡೆಯುವ ಜೂಜಿನಿಂದಾಗಿ.

ಆದ್ದರಿಂದಲೇ ಹಲವು ಪುಟ್ಟ ಪುಟ್ಟ ಕಂಪನಿಗಳು, ಬೇನಾಮಿ ಕಂಪನಿಗಳು ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿಕೊಂಡು ಶೇರು ಮಾರುಕಟ್ಟೆಯಲ್ಲಿ ಹಣ ಎತ್ತತೊಡಗಿದವು. ಮಧ್ಯಮ ವರ್ಗದ ಹೂಡಿಕೆದಾರರು ಕನಸು ಕಂಡರು. ಆದರೆ ಈ ಕಂಪನಿಗಳು ಮಾಡಿರುವ ಅನ್ಯಾಯ ಅಕ್ರಮಗಳಿಗೆ ಲೆಕ್ಕವೇ ಇಲ್ಲ. ದಿನನಿತ್ಯ ಹಣಕಾಸು ದಿನಪತ್ರಿಕೆಗಳಲ್ಲಿ ಈ ಬಗ್ಗೆ ಸುದ್ದಿಗಳು ಬರುತ್ತಲೇ ಇವೆ.

ಈಗಿನ ಅಂದಾಜಿನ ಪ್ರಕಾರ ಶೇ 86 ರಷ್ಟು ಕಂಪನಿಗಳ ಶೇರುಗಳು ಅವುಗಳ ಮುಖಬೆಲೆಗಿಂತ ಕಡಿಮೆ ದರದಲ್ಲೇ ಮಾರಾಟವಾಗುತ್ತಿವೆಯಂತೆ. ಅಂದರೆ ಹೂಡಿಕೆದಾರನಿಗೆ ಪಂಗನಾಮ. ಕಂಪನಿಗಳು ಬಡ ಜನಸಾಮಾನ್ಯರ ಹಣ ತೆಗೆದುಕೊಂಡು ತಮ್ಮ ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಈ ಹಣದಿಂದಾಗಿ ಉತ್ಪಾದಕತೆ ಹೆಚ್ಚಿಲ್ಲ ಎಂಬುದು ಔದ್ಯಮಿಕ ಹಿಂಜರಿತದಲ್ಲಿ ಕಾಣುತ್ತಿದೆ.

ಒಂದು ಅಧ್ಯಯನದ ಪ್ರಕಾರ

○ ಉದಾರೀಕರಣದ ಏಪ್ರಿಲ್ 1994 ರಿಂದ ಮಾರ್ಚ್ 1996 ರ ವರೆಗೆ 1450 ಕಂಪನಿಗಳು ಶೇರು ಮಾರುಕಟ್ಟೆಯಿಂದ ಹಣ ಎತ್ತಿದವು. ಇವುಗಳಲ್ಲಿ 903 ಕಂಪನಿಗಳ ಶೇರುಗಳು ಮುಖಬೆಲೆಯ ಅರ್ಧಕ್ಕಿಂತ ಕಡಿಮೆ ಬೆಲೆಗೆ ಮಾರಾಟವಾಗುತ್ತಿವೆ.

○ ಇದರಿಂದಾಗಿ ಹೂಡಿಕೆದಾರರಿಗೆ ಆಗಿರುವ ನಷ್ಟ 4000 ಕೋಟಿ ರೂಪಾಯಿಗಳು. ಒಟ್ಟು ಹಾನಿ 8400 ಕೋಟಿ ರೂಪಾಯಿಗಳು.

ನೋವು ನೇಯುವ ಕೈಮಗ್ಗಗಳು

ಕೈಮಗ್ಗಗಳು ಬಟ್ಟೆ ನೇಯುತ್ತವೆ. ಆದರೆ ಈ ಉದ್ಯಮ ಸರಿಯಾಗಿ ನಡೆಯದೇ ಇರುವಾಗ ಇವು ನೇಯುವವರಿಗೆ ನೋವನ್ನು ನೇಯುತ್ತವೆ. ಇದು ಹೀಗಾಗಬೇಕಿರಲಿಲ್ಲ, ಜನಪರವಾದ ಸರಕಾರವಿದ್ದರೆ. ಆದರೆ ಬೂರ್ಷ್ವಾ ಭೂಮಾಲಕ ಸರಕಾರಗಳ ನೀತಿಗಳಿಂದಾಗಿ ಇದು ಹೀಗಾಗಿದೆ.

ಜವಳಿ ಉದ್ಯಮದಲ್ಲಿ ಮಹತ್ತರ ತಾಂತ್ರಿಕ ಅವಿಷ್ಕಾರಗಳು ಆಗಿವೆ. ವಿದ್ಯುತ್ ಮಗ್ಗಗಳು ಬಂದಿವೆ. ಹಲವು ತರಹದ ಯಂತ್ರಗಳು ಬಂದಿವೆ. ಹಲವು ತರಹದ ನೂಲುಗಳೂ ಬಂದಿವೆ. ಆದ್ದರಿಂದ ಕೈಮಗ್ಗಗಳಿಗೆ ಹಿಂದೆ ಇದ್ದ ಪ್ರಾಮುಖ್ಯತೆ ಇಲ್ಲ. ಜವಳಿ ಉದ್ಯಮದಲ್ಲಿ ಶೇ 40 ರಷ್ಟು ಪಾಲು ಕೈ ಮಗ್ಗಕ್ಕೆ ಇತ್ತು. ಇಂದು ಈ ಪಾಲು ಶೇ 22 ಕ್ಕೆ ಇಳಿದಿದೆ. ಈ ಕೈ ಮಗ್ಗಗಳನ್ನೇ ಅವಲಂಬಿಸಿ ಸುಮಾರು 1.20 ಕೋಟಿ ಜನರಿದ್ದಾರೆ. ಈ ಜನರ ಬದುಕು ಅತಂತ್ರಸ್ಥಿತಿಗೆ ಇಳಿದಿದೆ. ಪ್ರತಿ ಒಂದು ವಿದ್ಯುತ್ ಮಗ್ಗ ಆರು ಕೈ ಮಗ್ಗಗಳ ಕೆಲಸವನ್ನು ನುಂಗಿಹಾಕುತ್ತದಂತೆ. ಇದರಿಂದ 14 ಜನರು ಉದ್ಯೋಗ ಕಳೆದುಕೊಳ್ಳುತ್ತಾರಂತೆ.

ಜವಳಿ ಉದ್ಯಮದಲ್ಲಿ 22 ತರಹದ ಉತ್ಪನ್ನಗಳನ್ನು ಕೈ ಮಗ್ಗಗಳಿಗಾಗಿ ಮೀಸಲಿಡಲಾಗಿತ್ತು. ಇತ್ತೀಚೆಗೆ ಇವುಗಳಲ್ಲಿ ನಾಲ್ಕನ್ನು ಆ ಮೀಸಲು ಪಟ್ಟಿಯಿಂದ ತೆಗೆಯಲಾಗಿದೆ. ಇದಲ್ಲದೆ ಈ ಪಟ್ಟಿಯಲ್ಲಿರುವ ಉಳಿದ ಉತ್ಪನ್ನಗಳನ್ನು ವಿದ್ಯುತ್ ಮಗ್ಗಗಳಲ್ಲಿ ಕದ್ದು ಉತ್ಪಾದಿಸುತ್ತವೆ.

ಇವೆಲ್ಲವುಗಳ ಪರಿಣಾಮ ಕೈ ಮಗ್ಗಗಳ ಮೇಲೆ ಅವಲಂಬಿತವಾಗಿರುವ ಜನರ ಬದುಕು ದುರ್ಬರವಾಗಿರುವುದು. ಉದ್ಯಮಗಳಲ್ಲಿ ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಬದಲಾವಣೆ ಆಗುವುದು ಸಹಜ. ಆದರೆ ಈ ಬದಲಾವಣೆಯಿಂದ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕಾದದ್ದು ಸರಕಾರದ ಕರ್ತವ್ಯ.

ತಂತ್ರಜ್ಞಾನದ ಬೆಳವಣಿಗೆಯಿಂದ ಅಪಾರ ಲಾಭ ಹೊಂದುವವರು ಮತ್ತು ಸರಕಾರ ಎರಡೂ ಈ ಜವಾಬ್ದಾರಿಯನ್ನು ಹೊರಬೇಕು. ಹಾಗೆ ಈ ಬೆಳವಣಿಗೆಗಳ ಲಾಭ ಪಡೆದವರ ಮೇಲೆ ತೆರಿಗೆ ಹೇರಿ ನಿರುದ್ಯೋಗಿಗಳಾಗುವವರನ್ನು ಬೇರೆಡೆ ಉದ್ಯೋಗದಲ್ಲಿ ತೊಡಗಿಸಬೇಕಾಗಿತ್ತು. ಆದರೆ ಮಾರುಕಟ್ಟೆ ನೀತಿಗಳ ಮೇಲೆ ನಡೆವ ಆರ್ಥಿಕಗಳಲ್ಲಿ ಇಂತಹ ಕಾಳಜಿಯಿರಲು ಸಾಧ್ಯವಿಲ್ಲ. ಭಾರತದ ಆರ್ಥಿಕದ ಉದಾರೀಕರಣ ಎನ್ನುವುದು ದಿನದಿಂದ ದಿನಕ್ಕೆ ಇಂತಹ ಕಾಳಜಿಗಳನ್ನು ಕಡಿತಗೊಳಿಸುತ್ತಲೇ ಬಂದಿದೆ.

ಪುಟ 4ರಿಂದ

● ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ.ಯೊಂದಿಗೆ ಮೈತ್ರಿಯಿಂದ ಪೀಕಲಾಟ. ಬಿ.ಎಸ್.ಪಿ.-ಬಿ.ಜೆ.ಪಿ. ಸಲ್ಲಾಪ ಕಂಡೂ ಜಾತ್ಯಾತೀತ ಸರಕಾರದ ರಚನೆಗೆ ನೆರವಾಗದ ಅನೀತಿಯುತ ನಿಲುವಿನಿಂದಾಗಿ ಅಲ್ಲಿ ಅತಂತ್ರ ಸ್ಥಿತಿಗೆ ಕಾರಣ.

ಬಿಜೆಪಿ ಪೀಕಲಾಟ

● ಅಧಿಕಾರಕ್ಕಾಗಿ ಕಾಯುತ್ತಿರುವ ಪಕ್ಷ ಬಿಜೆಪಿ ಲೋಕಸಭೆಯಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ 13 ದಿನಗಳಲ್ಲೇ ಅಧಿಕಾರ ಬಿಡಬೇಕಾದ ಪರಿಸ್ಥಿತಿಯ ನಂತರ ಆ ಪಕ್ಷದ ಬಗ್ಗೆ ಹಲವರಲ್ಲಿ ಭ್ರಮ ನಿರಸನ.

● ಗುಜರಾತ್‌ನಲ್ಲಿ ಹಿರಿಯ ಮುಖಂಡ ವಾಘೇಲಾ ಬಂಡಾಯ, ಬಿಜೆಪಿ ಕಾರ್ಯಕರ್ತರ, ಮುಖಂಡರ ಅತ್ಯಂತ ನಾಚಿಕೆಗೇಡಿನ ವರ್ತನೆ. ಭಾರೀಬಹುಮತದಿಂದಆರಿಸಿಬಂದ ಸರಕಾರ ಕೆಲವೇ ತಿಂಗಳೊಳಗೆ ಪತನ.

● ಮಹಾರಾಷ್ಟ್ರದಲ್ಲಿ ಎನ್ರೋನ್ ಯೋಜನೆಯ ಬಗ್ಗೆ ತಿಪ್ಪರಲಾಗ. ಕಾಂಗ್ರೆಸ್ ಸರಕಾರದ ಮೋಸವನ್ನು ಮೀರಿದ ಒಂದು ಒಪ್ಪಂದಕ್ಕೆ ಸಹಿ. ಮುಂಬೈ ಗಲಭೆಗಳ ತನಿಖೆ ನಡೆಸುತ್ತಿದ್ದ ಶ್ರೀಕೃಷ್ಣ ಆಯೋಗ ರದ್ದತಿಗೆ ಭಾರೀ ಪ್ರತಿಭಟನೆ. ವರ್ಷವಿಡೀ ಶಿವಸೇನೆ, ಆದರ ಮುಖಂಡ ಬಾಳ ಠಾಕ್ರೆಯವರು ನಿರ್ಮಿಸಿದ ಹೊಲಸು ವಿವಾದಗಳನ್ನು ಸಮರ್ಥಿಸಿಕೊಳ್ಳಬೇಕಾದ ಪರಿಸ್ಥಿತಿ. ವರ್ಷಾಂತ್ಯದ ವೇಳೆಗೆ ಬಿಜೆಪಿಯ ಉಪ ಮುಖ್ಯಮಂತ್ರಿ ಗೋಪಿನಾಥ್ ಮುಂಡೆ ಮತ್ತಿತರ ಮುಖಂಡರ ಮೇಲೆ ಆಪಾದನೆಗಳು.



● ಉತ್ತರ ಪ್ರದೇಶದಲ್ಲಿ ನಿರೀಕ್ಷಿತ ಸಫಲತೆ ದೊರಕದೆ ಬಿಎಸ್‌ಪಿಯೊಂದಿಗೆ ಅನೀತಿಯುತ ವ್ಯವಹಾರ ಕುದುರಿಸಲು ಪ್ರಯತ್ನ. ಅದರಲ್ಲೂ ವಿಫಲತೆ. ಈ ಪ್ರಯತ್ನದಲ್ಲಿ ಪಕ್ಷದೊಳಗೇ ವಿಪರೀತ ಒಡಕು.

● ರಾಜಾಸ್ತಾನದಲ್ಲೂ ಆಂತರಿಕ ಕಿತ್ತಾಟ ಉಲ್ಬಣ - ಇನ್ನೊಂದು ಬಿಜೆಪಿ ಸರಕಾರ ಅಸ್ತಿತ್ವದ ಮೇಲೂ ಪ್ರಶ್ನೆ ಚಿಹ್ನೆ.

ಎಡಶಕ್ತಿಗಳ ಮುನ್ನಡೆ

● 1996 ಭಾರತದ ರಾಜಕಾರಣದಲ್ಲಿ ಸಂಖ್ಯಾಬಲದಲ್ಲಿ ಬಹಳ ಸಣ್ಣದಾದರೂ ಪ್ರಭಾವದ ದೃಷ್ಟಿಯಿಂದ ಬಹಳ ಮಹತ್ವ ಗಳಿಸಿದ ವರ್ಷ.

● ಈ ವರ್ಷದಆರಂಭದಿಂದಲೇ ಕಾಂಗ್ರೆಸ್ಸೇತರ, ಬಿಜೆಪಿಯೇತರ ಪ್ರಜಾಪ್ರಭುತ್ವವಾದೀ ಪಕ್ಷಗಳ ಪರ್ಯಾಯ ರಂಗ ಕಟ್ಟಲು ಎಡಪಕ್ಷಗಳ ಮುಂಚೂಣಿ. ಕಲ್ಕತ್ತೆಯಲ್ಲಿ ಒಂದು ಭಾರೀ ರ್‍ಯಾಲಿಯೊಂದಿಗೆ ಈ ಪ್ರಯತ್ನಕ್ಕೆ ಇನ್ನಷ್ಟು ಚಾಲನೆ.

● ಲೋಕಸಭಾ ಹಾಗೂ ಕೆಲವು ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಜಾತ್ಯಾತೀತ, ಪ್ರಜಾಪ್ರಭುತ್ವವಾದೀ ಶಕ್ತಿಗಳ ಸಹಯೋಗಕ್ಕೆ ಅವಿರತ ಪ್ರಯತ್ನ.

● ಚುನಾವಣೆಗಳ ನಂತರ 13 ಪಕ್ಷಗಳ ಮೂರನೇ ರಂಗ ರಚಿಸಿ ಅದು ಸಂಯುಕ್ತ ರಂಗವಾಗಿ ರೂಪುಗೊಳ್ಳುವಲ್ಲಿ ಕೊಡುಗೆ ನೇತೃತ್ವದ ಆಹ್ವಾನ ಬಂದರೂ ಒಪ್ಪದೆ ಹೊರಗಿನಿಂದ ಬೆಂಬಲಕ್ಕೆ ನಿರ್ಧಾರ.

● ಪಶ್ಚಿಮ ಬಂಗಾಳದಲ್ಲಿ ಸತತ ಐದನೇ ಬಾರಿಗೆ ಎಡರಂಗದ ವಿಜಯ. ಜ್ಯೋತಿ ಬಸು ಮುಖ್ಯಮಂತ್ರಿಯಾಗಿ ಪುನರಾಯ್ಕೆ. ಭಾರತದ ರಾಜಕಾರಣದಲ್ಲೇ ಅಪೂರ್ವ ದಾಖಲೆ.

● ಕೇರಳದಲ್ಲಿ ಮತ್ತೆ ಎಲ್.ಡಿ.ಎಫ್. ಸರಕಾರ. 9ನೇ ಪಂಚವಾರ್ಷಿಕ ಯೋಜನೆಯನ್ನು ಒಂದು ಜನಾಂದೋಲನವಾಗಿ ಮಾಡುವ ಅಭೂತಪೂರ್ವ ಪ್ರಯತ್ನ.

● ತ್ರಿಪುರಾದಲ್ಲಿ ಮುನಿಸಿಪಲ್ ಚುನಾವಣೆಗಳಲ್ಲಿ ಎಡರಂಗಕ್ಕೆ ಭಾರೀ ಜಯ. ಜನಾಂಗೀಯ ಸೌಹಾರ್ದವನ್ನು ಕೆಡಿಸುವ ಸತತ ಪ್ರಯತ್ನಗಳು, ಅವನ್ನು ಎದುರಿಸಲು ಕ್ರಮ.

● ಹಗರಣಗಳ ವರ್ಷದಲ್ಲಿ ಯಾವುದೇ ಹಗರಣದಲ್ಲಿ ಎಡಪಕ್ಷಗಳ ಮುಖಂಡರ ಹೆಸರುಗಳು ಈ ವರ್ಷಗಳ ಶತ್ರುಗಳಿಗೂ ಸಿಗಲಿಲ್ಲ. ಆದರೂ ಬಂಡವಾಳಶಾಹೀ ಪಾರ್ಲಿಮೆಂಟರೀ ಭ್ರಷ್ಟಾಚಾರದಿಂದ ಪಕ್ಷವನ್ನು ಮುಕ್ತವಾಗಿಡಲು ಸಿಪಿಐ(ಎಂ)ನ ಪ್ರಜ್ಞಾಪೂರ್ವಕ ಪ್ರಯತ್ನ. ಆಂತರಿಕ ಸರಿಪಡಿಕೆ ಆಂದೋಲನ.

ಶ್ರಮಜೀವಿ ಜನ ಸಮೂಹಗಳ ನಿಲ್ಲದ ಹೋರಾಟ

● ವರ್ಷದ ಆರಂಭದಲ್ಲಿದ್ದ ಕಾಂಗ್ರೆಸ್(ಐ) ಸರಕಾರ ಹೇರಿದ ಮೋಸದ ಪೆನ್ಶನ್ ಯೋಜನೆಯ ವಿರುದ್ಧ ವ್ಯಾಪಕ ಪ್ರತಿಭಟನೆ. ಫೆಬ್ರವರಿ 23ರಂದು ಅಖಿಲ ಭಾರತ ಮುಷ್ಕರ.

● ಸಂಯುಕ್ತ ರಂಗ ಸರಕಾರ ಈ ವಂಚನೆಯನ್ನು ಸರಿಪಡಿಸದೆ ಅದನ್ನು ಮುಂದುವರೆಸುತ್ತಿರುವುದರ ವಿರುದ್ಧ ಆಗಸ್ಟ್ 26ರಂದು ಅಖಿಲ ಭಾರತ ಪ್ರತಿಭಟನಾ ದಿನ.

● ರೈತರಿಂದ ಆಗಸ್ಟ್ 26ರಂದು ಭೂ ಸುಧಾರಣಾದಿನ.

● ರಾವ್ ಸರಕಾರದ ಆರ್ಥಿಕ ನೀತಿಗಳ ಮುಂದುವರಿಕೆ ವಿರುದ್ಧ ಕಾರ್ಮಿಕ ಸಂಘಗಳ ಅಸಂತೋಷ. ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ಕರೆಯ ಮೇರೆಗೆ ಸೆಪ್ಟೆಂಬರ್ 27ರಂದು ಅಖಿಲ ಭಾರತ ಬೇಡಿಕೆ ದಿನಾಚರಣೆ.

● ಬೆಂಗಳೂರಿನಲ್ಲಿ ವಿಶ್ವ ಸುಂದರಿ ಸ್ಪರ್ಧೆಗೆ ವ್ಯಾಪಕ ವಿರೋಧ. ಪ್ರತಿಭಟನೆಗಳನ್ನು ಕಡೆಗಣಿಸಿ ಅದನ್ನು ನಡೆಸಿಯೇ ನಡೆಸಬೇಕೆಂದು ಕರ್ನಾಟಕ ರಾಜ್ಯ ಸರಕಾರದ ದಮನ ಕ್ರಮಗಳನ್ನು ವಿರೋಧಿಸಿ ಅಕ್ಟೋಬರ್ 31ರಂದು ರಾಷ್ಟ್ರೀಯ ಪ್ರತಿಭಟನೆ. ನವಂಬರ್ 8ರಂದು ಭಾರೀ ಪ್ರಮಾಣದ 'ಬೆಂಗಳೂರು ಚಲೋ'- ಅಖಿಲ ಭಾರತ ಪ್ರಜಾಪ್ರಭುತ್ವವಾದೀ ಮಹಿಳಾ ಸಂಘಟನೆಯ ಮುತುವರ್ಜಿ.

● ಬೋನಸ್ ಅರ್ಹತೆ ಮಿತಿ ತೆಗೆಯಲು ಅಕ್ಟೋಬರ್ 23ರಂದು ದೂರಸಂಪರ್ಕ ನೌಕರರ ಏಳು ದಿನಗಳ ಯಶಸ್ವಿ ಮುಷ್ಕರ.

● ಪಾಟ್ನಾದಲ್ಲಿ ಭ್ರಷ್ಟಾಚಾರ, ದುರಾಡಳಿತದ ವಿರುದ್ಧ ಎಡಪಕ್ಷಗಳ ಬೃಹತ್ ರ್‍ಯಾಲಿ- ನವಂಬರ್ 7ರಂದು.

● ಸಂಯುಕ್ತ ರಂಗ ಸರಕಾರ ತನ್ನ ಸಮಾನ ಕನಿಷ್ಟ ಕಾರ್ಯಕ್ರಮದ ಜನ-ಪರ ಅಂಶಗಳನ್ನು ಜ್ಯಾರಿ ಮಾಡಲು ಮುತುವರ್ಜಿ ವಹಿಸುವಂತೆ ಒತ್ತಾಯಿಸಿ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ನವಂಬರ್ 27ರಂದು ರಾಷ್ಟ್ರೀಯ ಪ್ರತಿಭಟನಾ ದಿನ. ಇತರ ಕಾರ್ಯಾಚರಣೆಗಳನ್ನು ನಡೆಸಿ ಪಾರ್ಲಿಮೆಂಟ್ ಚಲೋ ಹಾಗೂ ಅಖಿಲ ಬಾರತ ಮುಷ್ಕರಕ್ಕೆ ಸಿದ್ಧತೆ.

● ವಿಮಾ ರಂಗವನ್ನು ದೇಶೀ-ವಿದೇಶೀ ಖಾಸಗಿಯವರಿಗೆ ತೆರೆಯುವ ಸಂಯುಕ್ತ ರಂಗ ಸರಕಾರದ ಹುನ್ನಾರದ ವಿರುದ್ಧ ವಿಮಾ ನೌಕರರ ಅಖಿಲ ಭಾರತ ಮುಷ್ಕರ.

● ಡಿಸೆಂಬರ್ 16 : "ಆರ್ಥಿಕ ಸುಧಾರಣೆ"ಗಳ ವಿರುದ್ಧ ರಾಷ್ಟ್ರೀಯ ಸಮಾವೇಶ - ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಆಶ್ರಯದಲ್ಲಿ.

● ಸಾರ್ವಜನಿಕ ವಲಯದ ರಕ್ಷಣೆಗೆ ಕಾರ್ಯಾಚರಣೆ ನಡೆಸಲು ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿಯ ನಿರ್ಧಾರ.

● ಡಿಸೆಂಬರ್ 30. ಜವಳಿ ಕಾರ್ಮಿಕರಿಂದ "ರಸ್ತೆ ತಡೆ-ರೈಲು ತಡೆ" ಪ್ರತಿಭಟನೆ. ಎನ್.ಟಿ.ಸಿ. ಮತ್ತಿತರ ಗಿರಣಿಗಳ ಆಧುನೀಕರಣಕ್ಕೆ, ಮುಚ್ಚಿದ ಗಿರಣಿಗಳನ್ನು ತೆರೆಯಲು ಒತ್ತಾಯ.

ಕನಿಷ್ಟ ಕೂಲಿ ಕೂಡಲೇ ಜ್ಯಾರಿಗೊಳಿಸಲು ಬೀಡಿ ಕಾರ್ಮಿಕರ ಸಮಾವೇಶದ ಒತ್ತಾಯ

ಜನವರಿ 16ರಂದು ಧರಣಿ: ಫೆಬ್ರವರಿ 20ರಿಂದ ಮುಷ್ಕರ

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡೆರೇಶನ್ ನೇತೃತ್ವದಲ್ಲಿ ಡಿಸೆಂಬರ್ 31, 96ರಂದು ಮಂಗಳೂರಿನ ಟೌನ್‌ಹಾಲ್‌ನಲ್ಲಿ ಜಿಲ್ಲಾ ಮಟ್ಟದ ಬೀಡಿ ಕಾರ್ಮಿಕರ ಸಮಾವೇಶ ನಡೆಯಿತು. ಸುಮಾರು 1500ಕ್ಕೂ ಹೆಚ್ಚು ಬೀಡಿ ಕಾರ್ಮಿಕ ಪ್ರತಿನಿಧಿಗಳು ಭಾಗವಹಿಸಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ಸಿಐಟಿಯುವಿನ ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಹಾಗೂ ಫೆಡರೇಶನ್ ಅಧ್ಯಕ್ಷರಾದ ಕೆ.ಮೂಸಬ್ಬನವರು ವಹಿಸಿದ್ದರು. ಆರಂಭದಲ್ಲಿ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ಕಾರ್ಯದರ್ಶಿಯವರಾದ ಜೆ.ಬಾಲಕೃಷ್ಣ ಶೆಟ್ಟಿಯವರು ಸ್ವಾಗತ ಮಾಡಿ ಬೀಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಹಾಗೂ ಕನಿಷ್ಟ ಕೂಲಿಯ ಬಗ್ಗೆ ವಿವರಣೆ ನೀಡಿದರು.

ಸಮಾವೇಶದ ಮುಖ್ಯ ಅತಿಥಿ ಸಿಐಟಿಯುವಿನ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರೂ ಆದ ವಿ.ಜೆ.ಕೆ.ನಾಯರ್‌ರವರು ಮಾತನಾಡಿ ಅಖಿಲ ಭಾರತ ಮಟ್ಟದಲ್ಲಿ ಬೀಡಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ವಿವರಿಸುತ್ತಾ, ಕರ್ನಾಟಕದಲ್ಲಿ ಕನಿಷ್ಟ ಕೂಲಿಗಾಗಿ ಬೀಡಿ ಕಾರ್ಮಿಕರ ಸಂಘಟಿತ ಹೋರಾಟದ ಪರಿಣಾಮವಾಗಿ ಸರಕಾರ ನಿಗದಿ ಮಾಡಿದ ಕನಿಷ್ಟ ಕೂಲಿಯನ್ನು ಸರಕಾರ ಜ್ಯಾರಿಗೊಳಿಸಲು ವಿಳಂಬ ಮಾಡುತ್ತಿರುವುದು ಹಾಗೂ ಮಾಲಕರ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು. ರಾಜ್ಯವ್ಯಾಪಿ ಬೀಡಿ ಕಾರ್ಮಿಕರು ಪುನಃಸಂಘಟಿತ ಹೋರಾಟವನ್ನು ಮಾಲಕರು ಮತ್ತು ಸರಕಾರದ ವಿರುದ್ಧ ನಡೆಸಲು ಮುಂದಾಗಬೇಕೆಂದರು.

ಕೇರಳ ರಾಜ್ಯದ ಬೀಡಿ ಕಾರ್ಮಿಕರ ಮುಂದಾಳು ಕಾಂ.ಗಂಗಾಧರನ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿ ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರು ಹಾಗೂ ಕೇರಳ ರಾಜ್ಯದ ಕಾಸರಗೋಡು ಮತ್ತು ಕಣ್ಣಾನೂರು ಪ್ರದೇಶಗಳ ಬೀಡಿ ಕಾರ್ಮಿಕರು ಜತೆಯಾಗಿ ತಮ್ಮ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ತೀವ್ರ ಹೋರಾಟದ ಕಾರ್ಯಕ್ರಮ ಹಾಕಬೇಕೆಂದು ಹೇಳಿದರು.

ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಶಂಕರ್‌ರವರು ಬೀಡಿ ಕಾರ್ಮಿಕರು ಕನಿಷ್ಟ ಕೂಲಿಗಾಗಿ ಕಳೆದೆರಡು ವರ್ಷಗಳಿಂದ ನಡೆಸಿದ ಹೋರಾಟ, ಸರಕಾರ ಕನಿಷ್ಟ ಕೂಲಿಯನ್ನು ನಿಗದಿ ಮಾಡಿ ಜ್ಯಾರಿಗೊಳಿಸದೇ ಮಾಲಕ ವರ್ಗಕ್ಕೆ ಸಹಾಯ ಮಾಡುವ ನೀತಿಯ ಬಗ್ಗೆ ವಿವರಿಸುತ್ತಾ ಕೂಲಿಗಾಗಿ ಸರಕಾರ ಮತ್ತು ಮಾಲಕ ವರ್ಗವನ್ನು ಒತ್ತಾಯಿಸಲು ಜನವರಿ 16ರಂದು ರಾಜ್ಯವ್ಯಾಪಿ ಸರಕಾರಿ ಕಛೇರಿಗಳ ಎದುರು ಧರಣಿ ಮತ್ತು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸುವ ಬಗ್ಗೆ ನಿರ್ಣಯ ಮಂಡಿಸಿದರು. ಸರಕಾರ ಕನಿಷ್ಟ ಕೂಲಿಯನ್ನು ಜ್ಯಾರಿಮಾಡಲು ಈ ಮೇಲೂ ವಿಳಂಬ ಮಾಡಿದ್ದಲ್ಲಿ ರಾಜ್ಯವ್ಯಾಪಿ ಫೆಬ್ರವರಿ 20ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ಮತ್ತು ತೀವ್ರ ರೀತಿಯ ಹೋರಾಟ ನಡೆಸುವ ನಿರ್ಣಯವನ್ನು ಕೂಡಾ ಅಂಗೀಕರಿಸಲಾಯಿತು.

ಹೋರಾಟದ ನಿರ್ಣಯಗಳನ್ನು ಬೆಂಬಲಿಸಿ ಮಹಾಬಲ, ಕೆ.ಸುಕುಮಾರ್, ರಮಣಿ ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯವರಾದ ಕೆ.ಆರ್.ಶ್ರೀಯಾನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕೊನೆಗೆ ಬಾಬು ದೇವಾಡಿಗರವರು ಧನ್ಯವಾದವನ್ನು ಅರ್ಪಿಸಿದರು.



ಕಳೆದ ವಾರ ವಳ್ಳಿಯಪ್ಪ ಮಿಲ್ ಕಾರ್ಮಿಕರ ದೀರ್ಘ ಹೋರಾಟದ ವರದಿಯು ಕಣ್ತಪ್ಪಿನಿಂದ ಅಪೂರ್ಣಗೊಂಡಿತ್ತು. ಮುಂದುವರಿದ ವರದಿಯನ್ನು ಈ ವಾರ ಪ್ರಕಟಿಸುತ್ತಿದ್ದೇವೆ.

ತೀವ್ರಗೊಳ್ಳುತ್ತಿರುವ ವಳ್ಳಿಯಪ್ಪ ಮಿಲ್ ಕಾರ್ಮಿಕರ ಹೋರಾಟ


ಓವರ್ ಟೈಂ ವೇತನ ಕೊಡಲು ನಿರಾಕರಿಸಿದ್ದರೂ, ವಿದ್ಯುಚ್ಛಕ್ತಿ ಸರಬರಾಜು ನಿಂತಾಗ ಉತ್ಪಾದನೆಗೆ ಧಕ್ಕೆಯಾಗಬಾರದೆಂಬ ಉದ್ದೇಶದಿಂದ ಸಂಬಂಧಪಟ್ಟ ಕಾರ್ಮಿಕ ರಜಾ ಹಾಕಿದಾಗ ಹಿಂದಿನ ಪಾಳಿಯ ಜನರೇಟರ್ ಆಪರೇಟರ್ ಕೆಲಸ ಮುಂದುವರಿಸಿದ್ದಕ್ಕಾಗಿ ಅಪ್ಪಣೆ ಇಲ್ಲದೆ ಯಾಕೆ ಕೆಲಸ ಮಾಡಿದೆ ಎಂಬ 'ಶೋಕಾಸ್' ನೋಟೀಸ್ ಕೊಟ್ಟಾಗ ಕಾರ್ಮಿಕರು ಪ್ರತಿಭಟಿಸಿದ್ದರು. ನಂತರ ಈ ರೀತಿ ಕೆಲಸ ಸ್ಥಗಿತಗೊಂಡ ಸಮಯಕ್ಕೆ ಆ ಪಾಳಿಯ ಕಾರ್ಮಿಕರ ಸಂಬಳವನ್ನು ಅಕ್ಟೋಬರ್ ತಿಂಗಳ ವೇತನದಿಂದ ಕಡಿತ ಮಾಡಿದಾಗ ಸಂಬಳ ಪಡೆದುಕೊಳ್ಳದೆ ಪ್ರತಿಭಟಿಸಿದರು. ನಂತರ ಫ್ಯಾಕ್ಟರಿ ಇನ್ಸ್‌ಪೆಕ್ಟರರ ಮಧ್ಯಪ್ರವೇಶದಿಂದ ಪ್ರತಿಭಟನೆಯ ಮೂಲಕ ಸಂಬಳ ತೆಗೆದುಕೊಂಡರು.

ಆದರೆ, ಸಂಬಳ ಕಡಿತ ಕಾನೂನು ವಿರೋಧವಾದ್ದರಿಂದ ವಾಪಾಸ್ ಮಾಡಬೇಕೆಂದು ಅವರು ಕೊಟ್ಟ ನೋಟೀಸಿಗೂ ಬೆಲೆಕೊಡದೆ ಕಾರ್ಮಿಕ ಆಯುಕ್ತರ ಸಲಹೆಯನ್ನು ತಿರಸ್ಕರಿಸಿ ನವಂಬರ್ ತಿಂಗಳ ಸಂಬಳದಲ್ಲೂ ಇದೇ ರೀತಿ ಅಕ್ರಮ ಕಡಿತ ಮಾಡಿದಾಗ ಕಾರ್ಮಿಕರು ಕಡಿತ ಮಾಡದೆ ಸಂಬಳ ಕೊಡಬೇಕೆಂದು ಒತ್ತಾಯಿಸಿ ಸಂಬಳ ತೆಗೆದುಕೊಳ್ಳದೆ ಹೋರಾಡುತ್ತಿದ್ದಾರೆ. ಇದರಿಂದಾಗಿ ಕಾರ್ಖಾನೆಯಲ್ಲಿ ಡಿ. 7ರಿಂದ ಕೆಲಸ ಸ್ಥಗಿತಗೊಂಡಿದೆ.

ಶ್ರೀ ಸಿ.ವಳ್ಳಿಯಪ್ಪನವರು ಕರ್ನಾಟಕ ಟೆಕ್ಸ್‌ಟೈಲ್ಸ್ ಮಿಲ್ ಅಸೋಸಿಯೇಶನಿನ 'ಚೇರ್‌ಮ್ಯಾನ್' ಆಗಿರುತ್ತಾರೆ. ಕಳೆದ ವರ್ಷ ಗ್ರೇಟರ್ ಮೈಸೂರು ಚೇಂಬರ್ ಆಫ್ ಇಂಡಸ್ಟ್ರೀಸ್‌ನ ಅಧ್ಯಕ್ಷರಾಗಿದ್ದರು. ಹೀಗಿದ್ದರೂ ತಮ್ಮ ಕಾರ್ಖಾನೆಯಲ್ಲಿ ಕಾರ್ಮಿಕರು ಸಿಐಟಿಯುನ ನೇತೃತ್ವದಲ್ಲಿ ಸಂಘಟಿತರಾಗಿರುವುದನ್ನು ಸಹಿಸುತ್ತಿಲ್ಲ.

ಕಾರ್ಖಾನೆಯಲ್ಲಿ ಒಂದೇ ಸಂಘವಿದ್ದು ಎಲ್ಲಾ ಕಾರ್ಮಿಕರು ಸದಸ್ಯರಾಗಿದ್ದರೂ ಕೂಡಾ ಸಂಘಕ್ಕೆ ಮಾನ್ಯತೆ ಕೊಟ್ಟು ಮುಖಂಡರೊಡನೆ ಮಾತುಕತೆ ನಡೆಸಿ ಸಮಸ್ಯೆಗಳನ್ನು ಬಗೆಹರಿಸಲು ಒಪ್ಪುತ್ತಿಲ್ಲ. ಹಿಂದೆ ಎರಡು ಬಾರಿ ಕಾರ್ಮಿಕ ಆಯುಕ್ತರ ಮುಂದೆ ಬೀಗಮುದ್ರೆ ತೆರವು ಮಾಡಲು ಮಾಡಿಕೊಂಡ ಒಪ್ಪಂದದ ಶರತ್ತುಗಳನ್ನು ಪಾಲಿಸಿಲ್ಲ. ಆದುದರಿಂದ ಕಾರ್ಮಿಕರು, ಈ ಬಾರಿ ಅಂತಿಮವಾಗಿ ತೀರ್ಮಾನವಾಗಬೇಕು, ಸಂಘಕ್ಕೆ ಮಾನ್ಯತೆ ಕೊಡಲೇಬೇಕು ಎಂಬ ಛಲದಿಂದ ಹೋರಾಡುತ್ತಿದ್ದಾರೆ. ಅಕ್ಕ ಪಕ್ಕದ ಗ್ರಾಮಸ್ಥರು ಮತ್ತು ಕುಂಬಳಗೋಡು ಪ್ರದೇಶದ ಕಾರ್ಮಿಕರು ಸೌಹಾರ್ದ ಬೆಂಬಲ ಕೊಡುತ್ತಿದ್ದಾರೆ. ಹೆಜ್ಜಾಲದಿಂದ 2 ಕಿ.ಮಿ. ದೂರದ ಬಿಲ್ಲಕೆಂಪನಹಳ್ಳಿಯ ಎರಡು ವಳ್ಳಿಯಪ್ಪ ಕಾರ್ಖಾನೆಗಳ ಕಾರ್ಮಿಕರೂ ಸಿಐಟಿಯು ಸಂಘಕ್ಕೆ ಸೇರಿ ಹೋರಾಟದಲ್ಲಿ ಸಕ್ರಿಯವಾಗಿ ಪಾಲುಕೊಳ್ಳುತ್ತಿದ್ದಾರೆ.

ಡಿಸೆಂಬರ್ 26ರಂದು ಕಾರ್ಖಾನೆಯ ಮುಂಭಾಗದಲ್ಲಿ ಸಂಘದ ಅಧ್ಯಕ್ಷರಾದ ಕಾಂ. ಎಂ.ರಾಜಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯಾಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್, ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ಸಂಘಧ ಕಾನೂನು ಸಲಹೆಗಾರರಾದ ಕಾ.ಕೆ.ಎಸ್ ಸುಬ್ರಹ್ಮಣ್ಯ ಮತ್ತು ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯಾದ ಕಾಂ. ವರಲಕ್ಷ್ಮಿಯವರು ಮಾತನಾಡಿ ಕಾರ್ಮಿಕರಿಗೆ ಸ್ಫೂರ್ತಿ ತುಂಬಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.



ಡಿಸೆಂಬರ್ 30ರಂದು ವಳ್ಳಿಯಪ್ಪನವರ ಮೂರು ಕಾರ್ಖಾನೆಗಳ 500 ಮಂದಿ ಕಾರ್ಮಿಕರು ಒಟ್ಟಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರ ಮನೆಗಳ ಮುಂದೆ ಧರಣಿ ಮಾಡಿರುತ್ತಾರೆ. ಸರಕಾರ ಮಧ್ಯೆಪ್ರವೇಶಿಸಿ ಕೂಡಲೇ ಕಾರ್ಮಿಕರ ಸಮಸ್ಯೆಗಳನ್ನು ತೃಪ್ತಿಕರವಾಗಿ ಬಗೆಹರಿಸಬೇಕೆಂದು ಮನವಿ ಮಾಡಿರುತ್ತಾರೆ. ಹಾಗೂ ಮಿಲ್ಲರ್ ರಸ್ತೆಯಲ್ಲಿರುವ ಶ್ರೀ ವಳ್ಳಿಯಪ್ಪನವರ ಕಛೇರಿಯ ಮುಂದೆ ಪ್ರತಿಭಟನಾ ಪ್ರದರ್ಶನದೊಂದಿಗೆ ಸಿಐಟಿಯು ಸಂಘಕ್ಕೆ ಮಾನ್ಯತೆಯನ್ನು ಕೊಟ್ಟು ಬೇಡಿಕೆಗಳ ಬಗ್ಗೆ ಒಪ್ಪಂದಕ್ಕೆ ಬರಲು ಆಡಳಿತ ಮಂಡಳಿಯನ್ನು ಒತ್ತಾಯಿಸಿರುತ್ತಾರೆ.

ಒಂದು ವಾರದೊಳಗೆ ಸಮಸ್ಯೆಗಳು ಬಗೆಹರಿಯದಿದ್ದಲ್ಲಿ ಚಳುವಳಿಯ ತೀವ್ರಗೊಳಿಸಲು ಕುಂಬಳಗೋಡು ಹೆಜ್ಜಾಲ ಪ್ರದೇಶದಲ್ಲಿ ಕೈಗಾರಿಕಾ ಮುಷ್ಕರ ರಸ್ತೆ ಚಳುವಳಿ ಇತ್ಯಾದಿ ಕಾರ್ಯಕ್ರಮಗಳಿಗೆ ಕಾರ್ಮಿಕರು ಸಜ್ಜಾಗುತ್ತಿದ್ದಾರೆ. ಬೆಂಗಳೂರು ಜಿಲ್ಲಾ ಕಾರ್ಮಿಕರು ಈ ಹೋರಾಟಕ್ಕೆ ಸೌಹಾರ್ದ ಬೆಂಬಲ ಕೊಡಬೇಕೆಂದು ಸಿಐಟಿಯು ಕರೆಕೊಟ್ಟಿದೆ. □

ವಿಮಾ ಉದ್ದಿಮೆಯನ್ನು ತೆರೆಯಲು ಬ್ರಿಟಿಶ್ ಒತ್ತಡ

ಕರ್ನಾಟಕದ ವಿಮಾ ನೌಕರರ ಪ್ರತಿಭಟನೆ

ಇದು ನಿಮಗೆ ಗೊತ್ತೆ? ಭಾರತದ ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆಯಬೇಕೆಂದು ಬ್ರಿಟನ್ನಿನ ಪಾರ್ಲಿಮೆಂಟು ಒಂದು ನಿರ್ಣಯ ಅಂಗೀಕರಿಸಿದೆಯಂತೆ! ಈ ನಿರ್ಣಯದಿಂದ ಸಜ್ಜಿತರಾಗಿ ಬ್ರಿಟನ್ನಿನ ಪ್ರಧಾನಿ ಮೇಜರ್ ಅಲ್ಲಿನ ವಿಮಾ ಉದ್ದಿಮೆದಾರರೊಂದಿಗೆ ಭಾರತದ ಭೇಟಿಯ ಭಾಗವಾಗಿ ಬೆಂಗಳೂರಿಗೆ ಆಗಮಿಸಿದಾಗ ಜನವರಿ 10ರಂದು ರಾಜ್ಯಾದ್ಯಂತ ವಿಮಾ ನೌಕರರು ಮತ ಪ್ರದರ್ಶನ ಮಾಡಿ ಈ ನವವಸಾಹತುಶಾಹೀ ನಿಲುವಿಗೆ ತಮ್ಮ ಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಆರ್ಥಿಕವನ್ನು ಹೇಗೆ ನೋಡಿಕೊಳ್ಳಬೇಕು ಎಂಬುದು ನಮ್ಮ ಕೆಲಸ, ಅದರಲ್ಲಿ ಬ್ರಿಟನ್ನಿನ ಸಂಸತ್ತಾಗಲೀ, ಉದ್ದಿಮೆದಾರರಾಗಲೀ ಏಕೆ ತಲೆ ಹಾಕಬೇಕು. ಇದು ನಮ್ಮ ಆರ್ಥಿಕ ಸಾರ್ವಭೌಮತೆಯ ಮೇಲೆ ಮಾಡಿರುವ ಧಾಳಿ ಎಂದು ಅಖಿಲ ಭಾರತ ವಿಮಾ ನೌಕರರ ಸಂಘದ ರಾಜ್ಯದಲ್ಲಿನ ವಿವಿಧ ವಿಭಾಗಗಳ ಘಟಕಗಳು ಖಂಡಿಸಿವೆ.

ಭಾರತದ ವಿಮಾ ಉದ್ದಿಮೆ ಚೆನ್ನಾಗಿ ಕೆಲಸ ಮಾಡುತ್ತಿದೆ, ಅಲ್ಲದೆ ಖಾಸಗಿಯವರು ಆರ್ಥಿಕದ ಮೂಲಭೂತ ಸೌಲಭ್ಯಗಳನ್ನು ಕಟ್ಟಿ ಬೆಳೆಸಲು ಈ ಹಿಂದೆಯೂ ಏನೂ ಮಾಡಿಲ್ಲ, ಜನರು ಬೆವರು ಸುರಿಸಿ ಗಳಿಸಿದ ಹಣವನ್ನು ಅವರ ಬಳಿ ದೀರ್ಘ ಕಾಲ ಇಡುವಷ್ಟು ಆ ಉದ್ಯಮಿಗಳು ನಂಬಿಕಸ್ಥರಲ್ಲ ಎಂದಿರುವ ವಿಮಾ ನೌಕರರ ಸಂಘಗಳು ಇಂತಹ ವಿದೇಶೀ ಒತ್ತಡಗಳಿಗೆ ಭಾರತ ಸರಕಾರ ತಲೆಬಾಗಬಾರದು ಎಂದು ಆಗ್ರಹಿಸಿದೆ.

ಈ ಬಗ್ಗೆ ಪ್ರಧಾನಮಂತ್ರಿಗಳಿಗೆ ಒಂದು ಪತ್ರ ಬರೆದಿರುವ ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟ ಬ್ರಿಟನ್ನಿನ ಪಾರ್ಲಿಮೆಂಟು ಈ ನಿರ್ಣಯದ ಮೂಲಕ ಆರ್ಥಿಕ ಸಾರ್ವಭೌಮತೆಯ ಮೇಲಿನ ಧಾಳಿ ಮಾಡಿದ್ದನ್ನು ಪ್ರಸ್ತಾಪಿಸುತ್ತಾ ಇತ್ತೀಚೆಗೆ ವಿಮಾ ಖಾಸಗೀಕರಣದತ್ತ ಭಾರೀ ಒಲವು ತೋರಿಸಿರುವ ಸರಕಾರದ ಹೇಳಿಕೆಗಳತ್ತ ಗಮನ ಸೆಳೆದಿದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ರಾಜ್ಯ ಸರಕಾರಿ ನೌಕರರ ಸಂಘದ ಅಮೃತ ಮಹೋತ್ಸವ ಸಮಾರಂಭದಲ್ಲಿ ಮಾತನಾಡುತ್ತಾ ಪ್ರಧಾನಿಯವರು "ಉತ್ತರಪ್ರದೇಶ ಒಂದು ರಾಜ್ಯದಲ್ಲೇ 60 ಸಾವಿರ ಹಳ್ಳಿಗಳಲ್ಲಿ ರಸ್ತೆಗಳಿಲ್ಲ, 40 ಸಾವಿರ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳಿಲ್ಲ, 1.3 ಲಕ್ಷ ಹಳ್ಳಿಗಳಲ್ಲಿ ಕುಡಿಯುವ ನೀರೂ ಇಲ್ಲ. ಇದಕ್ಕೆಲ್ಲಾ ಭಾರೀ ಹಣ ಬೇಕು" ಎಂದ ಮಾತನ್ನು ಒಪ್ಪುತ್ತಾ ಆದರೆ ಇವಕ್ಕೆಲ್ಲಾ ಹಣ ಕ್ರೋಢೀಕರಿಸಬೇಕಾದರೆ ಸರಕಾರ ಸಾಮಾಜಿಕ ಅಭಿವೃದ್ಧಿಯಲ್ಲಿ ಇನ್ನೂ ತೀವ್ರವಾಗಿ ಪಾತ್ರ ವಹಿಸಬೇಕೇ ಹೊರತು ಅದರಿಂದ ಹಿಂಜರಿದು ಖಾಸಗಿಯವರಿಗೆ ಅವಕಾಶ ಮಾಡಿಕೊಡುವುದರಿಂದ ಇಂತಹ ಬೃಹತ್ ಗಾತ್ರದ ಕೆಲಸ ಈಡೇರಿವುದಿಲ್ಲ. ಇದು ಬಹಳಷ್ಟು ದೇಶಗಳ ಅನುಭವ ಎಂದು ಸಂಘ ಹೇಳಿದೆ. ಆದ್ದರಿಂದ ಸರಕಾರ ಹಣ ಕ್ರೋಡೀಕರಿಸುವ ಸಂಸ್ಥೆಗಳ ಮೇಲೆ ಹತೋಟಿಯನ್ನಿಟ್ಟುಕೊಳ್ಳಬೇಕೇ ಹೊರತು ಅದನ್ನು ಬಿಟ್ಟುಕೊಡಬಾರದು. ಈ ಕಾರಣದಿಂದ ವಿಮಾ ಉದ್ದಿಮೆಯನ್ನು ಖಾಸಗೀಕರಿಸುವ ಎಲ್ಲಾ ಯೋಜನೆಗಳನ್ನು ಕೈಬಿಡಬೇಕು ಎಂದು ಸಂಘ ಒತ್ತಾಯಿಸಿದೆ. ಹಣ ಸಂಪನ್ಮೂಲ ಕ್ರೋಢೀಕರಣ ಹಾಗೂ ವಿಮಾ ಗ್ರಾಹಕರ ತೃಪ್ತಿಗೆ ಸಂಬಂಧಪಟ್ಟಂತೆ ಸರಕಾರ ಹಾಕುವ ಯಾವುದೇ ಗುರಿಯನ್ನು ಈಡೇರಿಸುವ ಸವಾಲನ್ನು ಸ್ವೀಕರಿಸಲು ಸಿದ್ಧ ಎಂಬ ಅಖಿಲ ಭಾರತ ವಿಮಾ ನೌಕರರ ಸಂಘದ ವಾಗ್ದಾನವನ್ನು ಈ ಸಂದರ್ಭದಲ್ಲಿ ಪುನರುಚ್ಚರಿಸಲಾಗಿದೆ.

ಕಾರು ಚಾಲಕರ ಸಂಘದ ಸಭೆ

ದ.ಕ.: ಚಾಲಕರ ಮೇಲೆ ನಡೆಯುವ ಪೋಲೀಸ್ ಕಿರುಕುಳ, ಗೂಂಡಾಗಿರಿಯನ್ನು ತಡೆಗಟ್ಟಲು ಸಂಘಟನೆ ಅಗತ್ಯ. ಶಿಸ್ತುಬದ್ಧ, ಧ್ಯೇಯ ಧೋರಣೆ ಹೊಂದಿರುವ ಸಂಘಟನೆಯಿಂದ ಚಾಲಕರ ವೈಚಾರಿಕ ತಿಳುವಳಿಕೆಯನ್ನು ಹೆಚ್ಚು ಮಾಡುತ್ತಾ ಚಾಲಕ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಹೋರಾಡಲು ಸಾಧ್ಯವೆಂದು ಸಿಐಟಿಯು ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಮೂಸಬ್ಬನವರು ಇತ್ತೀಚೆಗೆ ಬಿ.ಸಿ. ರೋಡಿನಲ್ಲಿ ನಡೆದ ಜಿಲ್ಲಾ ಟೂರಿಸ್ಟ್ ಕಾರ್ ಚಾಲಕರ ಸಂಘದ 13ನೇ ವಾರ್ಷಿಕ ಮಹಾಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್(ಸಿಐಟಿಯು) ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಸರಕಾರದ ತಪ್ಪು ಆರ್ಥಿಕ ನೀತಿಯು ಟೂರಿಸ್ಟ್ ಚಾಲಕರಿಗೆ ಭಾದಕವಾಗಿದೆ ಎಂದರು.

ಮಹಾಸಭೆಯು ಅಧ್ಯಕ್ಷತೆಯನ್ನು ಎಸ್.ಎಫ್.ಐ.ನ ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೆ.ಯಾದವ ಶೆಟ್ಟಿಯವರು ವಹಿಸಿದ್ದರು. ವೇದಿಕೆಯಲ್ಲಿ ಬಂಟ್ವಾಳ ತಾಲೂಕು ಕಾರ್ಮಿಕ ಮುಖಂಡರಾದ ಬಿ.ವಾಸುಗಟ್ಟಿ, ಬೆಳ್ತಂಗಡಿ, ಪುತ್ತೂರು, ವಿಟ್ಲ ಕಾರು ಚಾಲಕ ಸಂಘದ ಪದಾಧಿಕಾರಿಗಳು, ಬಂಟ್ವಾಳ ನಗರ ಪಂಚಾಯಿತಿ ಸದಸ್ಯರಾದ ಉದಯಕುಮಾರ್ ರವರು ಉಪಸ್ಥಿತರಿದ್ದರು.

ಸಭೆಯು ಗತ ವರ್ಷದ ವಾರ್ಷಿಕ ಯೋಜನೆ, ಆಯವ್ಯಯ ಪತ್ರಕ್ಕೆ ಅಂಗೀಕಾರ ನೀಡಿತು. ಮಹಾಸಭೆಯು ಮುಂದಿನ ಚಟುವಟಿಕೆಗಾಗಿ ಜಿ.ಕೃಷ್ಣಪ್ಪ ಸಾಲಿಯಾನ್ ಅಧ್ಯಕ್ಷರನ್ನಾಗಿ, ಕೃಷ್ಣ ಅಲ್ಲಿಪಾದೆಯವರು ಕಾರ್ಯದರ್ಶಿಯಾಗಿರುವ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಪ್ರಾರಂಭದಲ್ಲಿ ಚಾಲಕ ವೃಂದದಿಂದ ಆಕರ್ಷಕ ಬೃಹತ್ ರ‍್ಯಾಲಿಯನ್ನು ನಡೆಸಲಾಯಿತು.

ಎಸ್.ಎಫ್.ಐ. ನೂತನ ಕಛೇರಿ ಉದ್ಘಾಟನೆ

ಕಾರವಾರ: ಎಲ್ಲರಿಗೂ ಶಿಕ್ಷಣ ನೀಡಬೇಕಾದರೆ ಶಿಕ್ಷಣದ ಖಾಸಗೀಕರಣವನ್ನು ಸಂಪೂರ್ಣ ನಿಲ್ಲಿಸಿ, ಈಗಿರುವ ಖಾಸಗಿ ಸಂಸ್ಥೆಗಳ ಮೇಲೆ ಸರಕಾರದ ಹಿಡಿತ ಇಟ್ಟುಕೊಳ್ಳಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್.ಎಫ್.ಐ. ಕೇಂದ್ರ ಸಮಿತಿ ಸದಸ್ಯರಾದ ಶಾಂತರಾಮ ನಾಯಕ್ ನುಡಿದರು. ಸರಕಾರ ಶಿಕ್ಷಣ ಸಂಸ್ಥೆಗಳ ಗುಣಮಟ್ಟ ಹೆಚ್ಚಿಸ ಬೇಕೆಂದು ಆಗ್ರಹಿಸಿದರು. ಅವರು ಎಸ್.ಎಫ್.ಐ.ನ 26ನೇ ಸ್ಥಾಪನಾ ದಿನಾಚರಣೆಯ ಅಂಗವಾಗಿ ಎಸ್.ಎಫ್.ಐ.ನ ನೂತನ ಕಛೇರಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ನಿವೃತ್ತ ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಎಂ.ವೈ.ಪ್ರಭು ರವರು ವಿದ್ಯಾರ್ಥಿಗಳು ಶಿಸ್ತಿನಿಂದ ಸಂಘಟಿತರಾಗಬೇಕಾಗಿದೆ. ನೂತನ ಕಛೇರಿ ವಿದ್ಯಾರ್ಥಿಗಳ ಸಂಪರ್ಕ ಕೇಂದ್ರವಾಗಿ ರೂಪಗೊಳ್ಳಲಿ ಎಂದು ಹಾರೈಸಿದರು. ಅತಿಥಿಗಳಾಗಿ ಜಿಲ್ಲಾ ಯುವಜನ ಒಕ್ಕೂಟದ ಅಧ್ಯಕ್ಷ ಸದಾನಂದ ನಾಯ್ಕ, ಜೆ.ಎಲ್.ನಾಯ್ಕ, ಪಿ.ಆರ್.ನಾಯ್ಕ, ಯುನಿಟಿ ಹೈಸ್ಕೂಲಿನ ಮುಖ್ಯ ಅಧ್ಯಾಪಕರಾದ ಕಲೀಲುಲ್ಲಾ ಉದ್ಘಾಟನಾ ಸಭೆಯಲ್ಲಿ ಮಾತನಾಡಿದರು, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್. ನಾಯ್ಕ ಶುಭಕೋರಿ ಮಾತನಾಡಿದರು. ಎಸ್‌ಎಫ್‌ಐ ರಾಜ್ಯ ಸಮಿತಿ ಸದಸ್ಯೆ ಯಮುನಾ ಗಾಂವಕರ್ ಅಧ್ಯಕ್ಷತೆ ವಹಿಸಿದ್ದರು. ನೂತನ್ ಬಾಂದೇಕರ ಸ್ವಾಗತಿಸಿದರು. ರಾಜೇಶ ದೇಸಾಯಿ ವಂದಿಸಿದರು. ರಾಜೀವ ಜೋಶಿ ಕಾರ್ಯಕ್ರಮ ನಿರ್ವಹಿಸಿದರು.

ನೂತನ ಸಮಿತಿ: ಕಾರವಾರ ತಾಲೂಕಿನ ನೂತನ ಸಮಿತಿಗೆ ಅಧ್ಯಕ್ಷರಾಗಿ ಗಣಪತಿ ನಾಯ್ಕ ಹಾಗೂ ಕಾರ್ಯದರ್ಶಿ ರಾಜೇಶ ದೇಸಾಯಿಯವರು, ಉಪಾಧ್ಯಕ್ಷರಾಗಿ ಕುಸುಮಾ ನಾಯ್ಕ, ಮುದರಸದ ಶೇಖ, ರಾಜೀವ್ ಜೋಶಿ, ಸಹ ಕಾರ್ಯದರ್ಶಿಗಳಾಗಿ ನೂತನ ಬಾಂದೇಕರ, ಶೇಖರ ಅಂಗಡಿ ಮತ್ತು ತಿಮ್ಮಪ್ಪ ಮಡಿವಾಳ ಅವರುಗಳು ಡಿಸೆಂಬರ್ 30 ರಂದು ನಡೆದ ಕಾರ್ಯಕರ್ತರ ಸಭೆಯಲ್ಲಿ ಆಯ್ಕೆಗೊಂಡರು.

ದಕ್ಷಿಣಕೊರಿಯಾದ ನಾಲ್ಕು ಲಕ್ಷ ಕಾರ್ಮಿಕರ ಮುಷ್ಕರ

ದಕ್ಷಿಣಕೊರಿಯಾದ ಕಾರ್ಮಿಕರು ಆದೇಶದ ಮೊದಲ ದೇಶವ್ಯಾಪಿ ಹಾಗೂ ಅತ್ಯಂತ ದೊಡ್ಡ ಅನಿರ್ದಿಷ್ಟ ಕಾಲದ ಮುಷ್ಕರ ಹೂಡಿದ್ದಾರೆ. ಈ ಮುಷ್ಕರ ದಕ್ಷಿಣಕೊರಿಯಾದ ಆಳುವ ಪಕ್ಷ ಪಾರ್ಲಿಮೆಂಟಿನಲ್ಲಿ ಪಾಸು ಮಾಡಿದ ಟ್ರೇಡ್ ಯೂನಿಯನ್ ಚಟುವಟಿಕೆಗಳ ಮೇಲೆ ತೀವ್ರ ನಿರ್ಬಂಧಗಳನ್ನು ಹೇರುವ ಕಾನೂನಿನ ವಿರುದ್ಧ ಪ್ರತಿಭಟಿಸಲು ಹಾಗೂ ಅದನ್ನು ವಾಪಸು ತೆಗೆದುಕೊಳ್ಳುವಂತೆ ಒತ್ತಾಯಿಸಲು, ಆ ಕಾನೂನನ್ನು ವಿರೋಧಪಕ್ಷಗಳು ಪಾರ್ಲಿಮೆಂಟಿನಲ್ಲಿ ಇಲ್ಲದಾಗ ಗುಟ್ಟಾಗಿ ಪಾಸು ಮಾಡಲಾಗಿತ್ತು.

ಪ್ರಜಾಸತ್ತಾತ್ಮಕ ಟ್ರೇಡ್ ಯೂನಿಯನ್‌ಗಳ ಫೆಡರೇಷನ್ ಈ ಮುಷ್ಕರಕ್ಕೆ ಕರೆ ನೀಡಿತ್ತು. ದೇಶದಾದ್ಯಂತ 320 ಕಾರ್ಖಾನೆಗಳಲ್ಲಿ ನಾಲ್ಕು ಲಕ್ಷದಷ್ಟು ಕಾರ್ಮಿಕರು ಈ ಮುಷ್ಕರದಲ್ಲಿ ಪಾಲುಗೊಂಡಿದ್ದಾರೆ. ಕೊರಿಯಾದ ಜಗತ್ ಪ್ರಸಿದ್ಧ ಕಾರು ತಯಾರಿಸುವ ಹ್ಯುಂದಯ್ ಮೋಟರ್ ಕಂಪನಿ ಹಾಗೂ ಹಡಗು ತಯಾರಿಸುವ ಹ್ಯುಂದಯ್ ಭಾರಿ ಕೈಗಾರಿಕಾ ಕಂಪನಿ ಸೇರಿದಂತೆ ಹಲವಾರು ಪ್ರಮುಖ ರಫ್ತು-ಆಧಾರಿತ ಕೈಗಾರಿಕೆಗಳು ಸ್ತಬ್ಧಗೊಂಡಿವೆ. ಕೆಲವು ದಿನಗಳಲ್ಲೇ ಕೊರಿಯಾದ ಇನ್ನೊಂದು ಟ್ರೇಡ್ ಯೂನಿಯನ್ ಕೇಂದ್ರವಾದ ಕೊರಿಯಾ ಟ್ರೇಡ್ ಯೂನಿಯನ್ ಫೆಡರೇಷನ್ ತನ್ನ 10 ಲಕ್ಷ ಸದಸ್ಯರಿಗೆ ಮುಷ್ಕರ ಹಾಗೂ ಪ್ರತಿಭಟನೆಯ ಕರೆ ನೀಡಿ, ಮುಷ್ಕರ ಇನ್ನೂ ವ್ಯಾಪಕಗೊಳ್ಳುವ ಸಂಭವವಿದೆ.

ಮುಷ್ಕರವಲ್ಲದೆ ರಾಜಧಾನಿ ಸಿಯೋಲ್‌ನಲ್ಲಿ ಎರಡುಲಕ್ಷ ಕಾರ್ಮಿಕರ ರ್‍ಯಾಲಿ ಸಂಘಟಿಸಲಾಗಿತ್ತು. ಆದರೆ ತಮ್ಮ ಕಾರ್ಖಾನೆಗಳ ನಡುವೆ ಪಿಕೆಟಿಂಗ್ ಮಾಡುತ್ತಿರುವ ಕಾರ್ಮಿಕರು ಬದಲಾಗದ ಕಾರಣ, ಹಾಗೂ ಪೋಲೀಸ್ ಹಿಂಸಾಚಾರದಲ್ಲಿ ಭಾರಿ ಸಾವುನೋವು ತಪ್ಪಿಸಲು ಸಣ್ಣ ರ್‍ಯಾಲಿ ಸಂಘಟಿಸಲಾಯಿತು. ಸುಮಾರು 20 ಸಾವಿರ ಕಾರ್ಮಿಕರು ರ್‍ಯಾಲಿಗೆ ಬಂದಿದ್ದರು. 15 ಸಾವಿರ ಪೋಲೀಸರು ರ್‍ಯಾಲಿಯನ್ನು ಒಡೆಯಲು ಸಜ್ಜಾಗಿದ್ದರು. ದಕ್ಷಿಣ ಕೊರಿಯಾದ ಚರಿತ್ರೆಯಲ್ಲೇ ಇದು ಅತ್ಯಂತ ಸಮರಶೀಲ ಪ್ರತಿಭಟನೆಯಾಗಿತ್ತು. ಸಿಯೊಲ್‌ನಲ್ಲಿ ರ್‍ಯಾಲಿ ನಡೆದ ಜಾಗದ ತುಂಬಾ ಸಾವಿರಾರು ಬಿಳಿ, ನೀಲಿ ಹಾಗೂ ಕೆಂಪು ಪ್ರತಿಭಟನಾ ಪ್ಲೇಕಾರ್ಡುಗಳು ಕಂಡವು.

ದೇಶದ ತುಂಬಾ ಹೆದ್ದಾರಿಗಳಲ್ಲಿ ಸಂಚಾರ ಪೂರ್ತಿ ಅಸ್ತವ್ಯಸ್ತವಾಗಿತ್ತು. ಪ್ರತಿಭಟನೆಯ ಸಂಕೇತವಾಗಿ ರ್‍ಯಾಲಿಗೆ ಕಾರು, ಬಸ್ಸು, ವ್ಯಾನುಗಳಲ್ಲಿ ಬರುತ್ತಿದ್ದ ಪ್ರತಿಭಟನಾಕಾರ ಕಾರ್ಮಿಕರು ಬೇಕಂತಲೇ ಬಹಳ ನಿಧಾನವಾಗಿ ಚಲಿಸುತ್ತಿದ್ದ ವಾಹನಗಳ ಮೇಲೆ ಪ್ಲೇಕಾರ್ಡ್, ಧ್ವಜಗಳನ್ನು ಹಿಡಿದು ಕುಣಿಯುತ್ತಿದ್ದರು.

ಇತ್ತೀಚಿನವರೆಗೆ ಏಶಿಯಾದ 'ಹೊಸ ಹುಲಿ' ಎಂದು ಸಾಮ್ರಾಜ್ಯಶಾಹಿ ಮಾಧ್ಯಮಗಳು ಹೊಗಳುತ್ತಿದ್ದ ದಕ್ಷಿಣ ಕೊರಿಯಾ ತೀವ್ರವಾದ ರಾಜಕೀಯ, ಆರ್ಥಿಕ ಬಿಕ್ಕಟ್ಟಿನತ್ತ ಹೋಗುತ್ತಿದೆ ಎಂದು ಈ ಮುಷ್ಕರ ಸಾರಿದೆ. ಬಂಡವಾಳ ಶಾಹಿ ವ್ಯವಸ್ಥೆ ಮೂರನೇ ಜಗತ್ತಿನ ದೇಶಗಳಲ್ಲಿ ಕೆಲಸ ಮಾಡಬಲ್ಲದು ಎಂಬುದಕ್ಕೆ ಪುರಾವೆಯಾಗಿ ಕೊಡುತ್ತಿದ್ದ ದಕ್ಷಿಣ ಕೊರಿಯಾದ ವ್ಯವಸ್ಥೆ ಎಷ್ಟು ಕ್ರೌರ್ಯ, ಹುಳುಕುಗಳಿಂದ ತುಂಬಿದೆ ಎಂದು ಈಗ ಮುಚ್ಚಿಡುವುದು ಸಾಧ್ಯವಾಗುತ್ತಿಲ್ಲ.

ಭೂಸುಧಾರಣೆಗಳಿಲ್ಲದೆ ಗ್ವಾಟೆಮಾಲಾದ ಒಪ್ಪಂದ ಶಾಂತಿ ತರಬಲ್ಲುದೆ?

ದಕ್ಷಿಣ ಅಮೆರಿಕಾದ ಖಂಡದಲ್ಲೇ ಗ್ವಾಟೆಮಾಲಾ ಗೆರಿಲ್ಲಾ ಕದನಕ್ಕೆ, ಆಳುವ ವರ್ಗಗಳಿಂದ ಅದರ ದಮನಕ್ಕೆ ಬಳಸಿದ ಕ್ರೌರ್ಯಕ್ಕೆ ಕುಖ್ಯಾತವಾದ ದೇಶ. 36 ವರ್ಷಗಳಿಂದ ನಡೆಯುತ್ತಿರುವ ಈ ಆಂತರಿಕ ಯುದ್ಧವನ್ನು ಅಂತ್ಯಗೊಳಿಸಲು ಗ್ವಾಟೆಮಾಲಾದ ಗೆರಿಲ್ಲಾ ಚಳುವಳಿಯ ಕಮಾಂಡರುಗಳ ಹಾಗೂ ಸರಕಾರದ ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಒಂದು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದೆ. ಇದರ ಪ್ರಕಾರ ಸಶಸ್ತ್ರ ಕದನಗಳನ್ನು ನಿಲ್ಲಿಸಲಾಗುವುದು. ಗೆರಿಲ್ಲಾಗಳು ತಮ್ಮ ರಾಜಕೀಯವನ್ನು ಕಾನೂನು ಚೌಕಟ್ಟಿನ ಒಳಗೆ ರಾಜಕೀಯಪಥವಾಗಿ ಮುಂದುವರಿಸುತ್ತಾರೆ. ಒಂದು ವರ್ಷಕ್ಕೂ ಹೆಚ್ಚು ಕಾಲ ಮಾತುಕತೆಗಳ ಮೂಲಕ ತಯಾರಿಸಲಾದ ಈ ಒಪ್ಪಂದ ಆರು ಭಾಗಗಳಲ್ಲಿದೆ.

ಗ್ವಾಟೆಮಾಲಾದ ಆಂತರಿಕ ಯುದ್ಧದಿಂದ ಬೇಸತ್ತ ಜನ ಈ ಒಪ್ಪಂದವನ್ನು ಸ್ವಾಗತಿಸಿದ್ದಾರೆ. ಕಳೆದ ಮೂರು ದಶಕಗಳಲ್ಲಿ ಒಂದು ಲಕ್ಷ ಜನರನ್ನು ಈ ಯುದ್ಧ ಬಲಿ ತೆಗೆದುಕೊಂಡಿದೆ. ಆದರೆ ಈ ಒಪ್ಪಂದ ಎಷ್ಟರ ಮಟ್ಟಿಗೆ ಶಾಶ್ವತ ಶಾಂತಿ ತರಬಲ್ಲದು ಎಂಬ ಬಗ್ಗೆ ತೀವ್ರ ಸಂಶಯ ವ್ಯಕ್ತಪಡಿಸಲಾಗಿದೆ. ಒಪ್ಪಂದ ಹಲವು ಪ್ರಮುಖ ವಿಷಯಗಳ ಬಗ್ಗೆ ಅಸ್ಪಷ್ಟವಾಗಿದೆ. ಜಾರಿಗೆ ಇದು ಭಾರಿ ತೊಡಕಾಗಿ ಒಪ್ಪಂದ ಮುರಿದುಬೀಳಬಹುದು ಎಂದು ಒಂದು ಸಂಶಯ. ಗ್ವಾಟೆಮಾಲಾದ ಗೆರಿಲ್ಲಾ ಯುದ್ಧದ ಮುಖ್ಯ ಕಾರಣ, ರೈತರ ತೀವ್ರ ಸಮಸ್ಯೆಗಳು. ಗೆರಿಲ್ಲಾ ಗ್ವಾಟೆಮಾಲಾದ ಲಕ್ಷಾಂತರ ರೈತರ ಪರವಾಗೇ ಹೋರಾಡುತ್ತಿದ್ದದ್ದು. ತೀವ್ರ ಭೂಸುಧಾರಣೆಗಳನ್ನು ಮಾಡದೆ, ರೈತರ ಸಮಸ್ಯೆಗಳನ್ನು ಪರಿಹಾರ ಮಾಡದೆ ಶಾಶ್ವತ ಶಾಂತಿ ಸಾಧ್ಯವಿಲ್ಲ ಎಂದು ಹಲವಾರು ಸ್ವತಂತ್ರ ವೀಕ್ಷಕರ ಹಾಗೂ ಸಮಾಜ ಶಾಸ್ತ್ರಜ್ಞರುಗಳ ಅಭಿಪ್ರಾಯ.



ಕಮ್ಯುನಿಸ್ಟ್ ಪಕ್ಷವಾದ ಸೋಷಲಿಸ್ಟ್ ಪಕ್ಷ!

ಇದೇನು ವಿಚಿತ್ರ.. ಅದೂ ಕಮ್ಯುನಿಸಂ ಸಾಯುತ್ತಿದೆ ಎಂದು ಕೆಲವರು ಬೊಬ್ಬೆ ಹೊಡೆಯುತ್ತಿರುವ ಈ ಜಮಾನದಲ್ಲಿ ಅಂದಿರಾ! ಇದು 'ವಿಚಿತ್ರ ಆದರೂ ನಿಜ' ಆಸ್ಟ್ರೇಲಿಯಾ ಸೋಶಲಿಸ್ಟ್ ಪಕ್ಷ ಇತ್ತೀಚೆಗೆ ಪಕ್ಷದ ಮಹಾಧಿವೇಶನದಲ್ಲಿ ತನ್ನ ಹೆಸರನ್ನು ಆಸ್ಟ್ರೇಲಿಯನ್ ಸೋಶಲಿಸ್ಟ್ ಪಕ್ಷದಿಂದ ಆಸ್ಟ್ರೇಲಿಯನ್ ಕಮ್ಯುನಿಸ್ಟ್ ಪಕ್ಷಕ್ಕೆ ಬದಲಾಯಿಸಲು ನಿರ್ಧರಿಸಿದೆ. ಇನ್ನೂ ಆಶ್ಚರ್ಯವೆಂದರೆ ಈ ಬದಲಾವಣೆಗೆ ಸದಸ್ಯರಲ್ಲಿ, ಕಾರ್ಮಿಕರ ಚಳುವಳಿಯಲ್ಲಿ ವ್ಯಾಪಕ ಜನಬೆಂಬಲ ದೊರಕಿದೆ. ಈ ಹೆಸರು ಬದಲಾವಣೆಯ ನಂತರ ಇದರಿಂದಾಗಿ ಸದಸ್ಯರಾಗಿ ಸೇರುವ, ಪಕ್ಷದ ಪತ್ರಿಕೆ 'ಗಾರ್ಡಿಯನ್' ಕೊಂಡುಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆಯಂತೆ.

ಪಕ್ಷದ ಹೆಸರು ಬದಲಾಯಿಸಲು ಕಾರಣ ಕೊಡುತ್ತಾ ಪಕ್ಷದ ಕಾರ್ಮಿಕಪರ ಹಾಗೂ ಸಮರಶೀಲ ರಾಜಕೀಯ, ದೂರದರ್ಶಿತ್ವ, ಪ್ರಗತಿಪರತೆ, ಅಂತರ್‍ರಾಷ್ಟ್ರೀಯ ದೃಷ್ಟಿಕೋನವನ್ನು ಹೊಸಹೆಸರು ಚೆನ್ನಾಗಿ ಬಿಂಬಿಸುತ್ತದೆ ಎಂದಿದೆ.

ಇತ್ತೀಚಿನ ವರ್ಷಗಳಲ್ಲಿ ಕಮ್ಯುನಿಸ್ಟ್ ಪಕ್ಷದಿಂದ ಸೋಶಲಿಸ್ಟ್ ಪಕ್ಷಕ್ಕೆ ಹೆಸರು ಬದಲಾಯಿಸಲು ಹಲವಾರು ಕಮ್ಯುನಿಸ್ಟ್ ಪಕ್ಷ ತೀರ್ಮಾನಿಸಿದ್ದವು. ಅದು ಸುದ್ದಿಯೇ ಆಗಿರಲಿಲ್ಲ. ಹಾಗಿರುವಾಗ ಈ ವಿಶಿಷ್ಟ ಬೆಳವಣಿಗೆ, ನಿಜವಾಗಿಯೂ ಗಮನಾರ್ಹ ತಿರುವು ಎನ್ನಬಹುದು.

ಜಗತ್ತಿನಾದ್ಯಂತವೂ ಈ ಸುದ್ದಿಯನ್ನು ಬಹಳಷ್ಟು ಸ್ವಾಗತಿಸಲಾಗಿದೆ. ಆಸ್ಟ್ರೇಲಿಯಾ ಕಮ್ಯುನಿಸ್ಟ್ ಪಕ್ಷಕ್ಕೆ ಅಭಿನಂದಿಸುವ ಹಲವಾರು ಸಂದೇಶಗಳು ಹರಿದುಬರುತ್ತಿವೆ. ಅದರಲ್ಲಿ ಒಂದು ಹೀಗಿತ್ತಂತೆ.

'ಆಸ್ಟ್ರೇಲಿಯನ್ ಸೋಶಲಿಸ್ಟ್ ಪಾರ್ಟಿ ಸಲಾಂ,
ಆಸ್ಟ್ರೇಲಿಯನ್ ಕಮ್ಯುನಿಸ್ಟ್ ಪಾರ್ಟಿ ಚಿರಾಯುವಾಗಲಿ'

ನಾವು ಒನ್ಸ್‌ಮೋರ್ ಅನ್ನೋಣವೆ?

ನೇಪಾಳದಲ್ಲಿ ಕಮ್ಯುನಿಸ್ಟ್-ವಿರೋಧಿ ಸರಕಾರ ಮೋಸದಿಂದ ಪಾರಾಗಿದೆ

ನೇಪಾಳದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಉರುಳಿಸಿ ಅಧಿಕಾರಕ್ಕೆ ಬಂದ ನೇಪಾಳ ಕಾಂಗ್ರೆಸ್ ರಾಷ್ಟ್ರೀಯ ಪ್ರಜಾತಂತ್ರ ಪಾರ್ಟಿ(RPP) ಹಾಗೂ ನೇಪಾಳ ಸದ್ಭಾವನಾ ಪಾರ್ಟಿಯ ಸಮಿಶ್ರ ಸರಕಾರ, ಅದರ ಅಸ್ತಿತ್ವಕ್ಕೆ ಬಂದ ಸವಾಲಿನಿಂದ ಮೋಸದಿಂದ ಸದ್ಯಕ್ಕೆ ಪಾರಾಗಿದೆ. ಕಮ್ಯುನಿಸ್ಟ್ ಪಕ್ಷ, ಇತರ ಎಡ ಪಕ್ಷಗಳು ಆಳುವ ಪಕ್ಷಗಳ ಕೆಲವು ಬಂಡಾಯಕೋರ ಸದಸ್ಯರು ನೋಟೀಸು ಕೊಟ್ಟಿದ್ದ ಅವಿಶ್ವಾಸ ಮತಕ್ಕೆ ಬಹುಮತ ಸಿಗಲಿಲ್ಲ. ಆದರೆ ಸರಕಾರದ ಪರವಾಗಿಯೂ ಬಹುಮತ ಸಿಗದೆ ಹಾಗೂ ಬಹುಮತ ಎಂದರೆ ಹಾಜರಿದ್ದ ಸದಸ್ಯರ ಅಥವಾ ಒಟ್ಟು ಸದಸ್ಯರಲ್ಲೋ ಎಂದು ಎದ್ದಿರುವ ಜಿಜ್ಞಾಸೆಯ ಫಲವಾಗಿ ನೇಪಾಳ ಸಂವೈಧಾನಿಕ ಬಿಕ್ಕಟ್ಟಿನತ್ತ ಚಲಿಸುತ್ತಿದೆ.

205 ಸದಸ್ಯರಿರುವ ಪಾರ್ಲಿಮೆಂಟಿನಲ್ಲಿ ಅವಿಶ್ವಾಸ ಮತಕ್ಕೆ 101 ಪರ, 84 ವಿರುದ್ಧ ಹಾಗೂ 14 ಸದಸ್ಯರು ಮತದಾನದಲ್ಲಿ ಭಾಗವಹಿಸಲಿಲ್ಲ. ಆದರೆ ಸರಕಾರದ ಅಂಬೋಣದ ಪ್ರಕಾರ ಅವಿಶ್ವಾಸ ಮತ ಗೆಲ್ಲಬೇಕಾದರೆ 103 ಮತಬೇಕು ಅಂತ ವಿರೋಧ ಪಕ್ಷಗಳು ಹಾಜರಿದ್ದ ಸದಸ್ಯರ ಬಹುಮತ ಪಾರ್ಲಿಮೆಂಟರಿ ಪದ್ಧತಿ ಅನುಸರಿಸುತ್ತಿರುವ ಎಲ್ಲಾ ದೇಶಗಳಲ್ಲಿ ಜಾರಿಯಲ್ಲಿರುವ ಪದ್ಧತಿ ಎಂದು ವಾದಿಸುತ್ತಿದೆ.

ಇದಲ್ಲದೆ ಅವಿಶ್ವಾಸ ಮತದ ಪರ ಮತ ಚಲಾಯಿಸುವ ಸಾಧ್ಯತೆ ಇದ್ದ ಆರುಜನ ಆಳುವ ಪಕ್ಷಗಳ ಸದಸ್ಯರು ಹಾಗೂ ಮಂತ್ರಿಗಳನ್ನು ಅಧಿವೇಶನದ ಹಿಂದಿನ ದಿನ ತರಾತುರಿಯಲ್ಲಿ ಥೈಲಾಂಡ್, ಸಿಂಗಾಪುರಗಳಿಗೆ ಪ್ರಯಾಣಕ್ಕೆ ಕಳಿಸಲಾಗಿದೆ. ಒಬ್ಬ ಆಳುವ ಪಕ್ಷದ ಸದಸ್ಯನನ್ನು ಅಪಹರಿಸಿ ಕೊಲೆ ಮಾಡಲಾಗಿದೆ. ಇನ್ನಿಬ್ಬರು ಸದಸ್ಯರನ್ನು ಪ್ರಧಾನ ಮಂತ್ರಿಗಳ ಮನೆಯಲ್ಲಿ ಇಟ್ಟುಕೊಂಡು, ಅವಿಶ್ವಾಸಮತ ವಿರುದ್ಧ ಮತದಾನ ಮಾಡದಿದ್ದರೆ, ಕಾಶ್ಮೀರಿ ಉಗ್ರಗಾಮಿಗಳಿಗೆ ಶಸ್ತ್ರಾಸ್ತ್ರ ಒದಗಿಸುತ್ತಿರುವವರೆಂಬ ಸುಳ್ಳು ಮೊಕದ್ದಮೆ ಹಾಕಲಾಗುವುದು ಎಂದು ಬೆದರಿಸಲಾಯಿತು. ಇಷ್ಟೆಲ್ಲಾ ಮೋಸ ನಡೆಯದಿದ್ದರೆ, ಸರಕಾರದ ನಿರ್ವಚನೆಯ ಪ್ರಕಾರವೂ ಅವಿಶ್ವಾಸ ಮತಕ್ಕೆ ಬಹುಮತ ಬರುತ್ತಿತ್ತು ಎಂದು ಕಮ್ಯುನಿಸ್ಟರು ಆರೋಪಿಸಿದ್ದಾರೆ. ಕಮ್ಯುನಿಸ್ಟ್ ಹಾಗೂ ಇತರ ಎಡಪಕ್ಷಗಳ ಎಲ್ಲಾ ಜಿಲ್ಲೆಗಳಲ್ಲಿ ವ್ಯಾಪಕ ರ್‍ಯಾಲಿ, ಪ್ರತಿಭಟನಾ ಪ್ರದರ್ಶನಗಳಿಗೆ ಕರೆ ನೀಡಿದ್ದಾರೆ. ನೇಪಾಳ ಸರಕಾರ ದಿನ್ನ ಎಣಿಸುತ್ತಿದೆ.

ಚೀನಿ ಪ್ರಧಾನಿ ಮಾಸ್ಕೋ ಭೇಟಿ ಏಪ್ರಿಲ್‌ನಲ್ಲಿ ಶೃಂಗಸಭೆ

ಚೀನಿ ಪ್ರಧಾನಿ ಲಿಪೆಂಗ್‌ರವರ ಮೂರುದಿನದ ಮಾಸ್ಕೋ ಭೇಟಿ ಈಗ ನಿಕಟವಾಗುತ್ತಿರುವ ಚೀನಿ-ರಶ್ಯನ್ ಸಂಬಂಧಗಳು ದೂರಗಾಮಿ ಹಾಗೂ ಬಲಿಷ್ಠವಾಗುವತ್ತ ಸಾಗುತ್ತಿರುವುದನ್ನು ಬಲಪಡಿಸಿವೆ. ಭೇಟಿಯ ಸಮಯದಲ್ಲಿ ಹಲವಾರು ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಮಾತ್ರವಲ್ಲ ಹಲವಾರು ಭವಿಷ್ಯದ ಪ್ರಮುಖ ಯೋಜನೆಗಳ ಬಗ್ಗೆ ಮಾತುಕತೆ ನಡೆಸಲಾಯಿತು. ಅಲ್ಲದೆ ಏಪ್ರಿಲ್‌ನಲ್ಲಿ ರಶ್ಯನ್-ಚೀನಿ ಶೃಂಗಸಭೆ ನಡೆಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಯಿತು.

ಚೀನಿ ಪ್ರಧಾನಿ ಶಸ್ತ್ರ ಚಿಕಿತ್ಸೆಯಿಂದ ಚೇತರಿಸಿ ಕೊಳ್ಳುತ್ತಿರುವ ರಶ್ಯನ್ ಅಧ್ಯಕ್ಷ ಯೆಲ್ಟ್‌ಸಿನ್‌ರನ್ನು ಭೇಟಿ ಮಾಡಿದ ಮೊದಲ ವಿದೇಶಿ ಗಣ್ಯರು. ಎರಡು ದೇಶಗಳ ಪ್ರಧಾನ ಮಂತ್ರಿಗಳು ಆರ್ಥಿಕ, ವೈಜ್ಞಾನಿಕ ಹಾಗೂ ಮಿಲಿಟರಿ ಕ್ಷೇತ್ರಗಳಲ್ಲಿ ಸಹಕಾರ ಹಾಗೂ ವಿನಿಮಯವನ್ನು ಇನ್ನಷ್ಟು ಬಲಪಡಿಸುವ ಮೂರು ಒಪ್ಪಂದಗಳಿಗೆ ಸಹಿ ಹಾಕಿದರು.


ರಶ್ಯನ್ ಎಸ್‌ಯು-27 ಎಂಬ ಅತ್ಯಾಧುನಿಕ ಫೈಟರ್ ಬಾಂಬರ್ ವಿಮಾನಗಳನ್ನು ಖರೀದಿ ಮಾಡಿ, ತಂತ್ರಜ್ಞಾನ ವರ್ಗಾಯಿಸಿ ಚೀನದಲ್ಲಿ ಉತ್ಪಾದಿಸಲು ಚೀನಾ ತೀವ್ರ ಆಸಕ್ತಿ ಹೊಂದಿದೆ. ರಶ್ಯ ಜಗತ್ತಿನಲ್ಲಿ ಅತ್ಯಂತ ದೊಡ್ಡದಾದ ಮೂರು ಶತಕೋಟಿ ಡಾಲರುಗಳ ಜಲ-ವಿದ್ಯುತ್ ಯೋಜನೆಯನ್ನು ಚೀನಾದಲ್ಲಿ ಜಾರಿಮಾಡಲು ಎಲ್ಲಾ ತಾಂತ್ರಿಕ ಸಹಕಾರ ನೀಡಲಿದೆ. ಅಣು ಶಕ್ತಿ ಉತ್ಪಾದನಾ ಘಟಕ, ಪ್ರಾಕೃತಿಕ ಗ್ಯಾಸ್ ಪೈಪ್ ಲೈನ್, ಗಡಿ ವ್ಯಾಪಾರಕ್ಕೆ ಅನು ಕೂಲವಾಗುವಂತೆ ಚೀನಿ ಸೈಫೆನ್ ಪಟ್ಟಣದಲ್ಲಿ ವಿಶೇಷ ಆರ್ಥಿಕ ಪ್ರದೇಶ ಮಾಡುವ ಬಗ್ಗೆ ಮಾತುಕತೆ ನಡೆಸ ಲಾಯಿತು.

ರಶ್ಯದ ಅಧ್ಯಕ್ಷ ದೇಶದೊಳಗೆ ಕಮ್ಯುನಿಸ್ಟ್ ವಿರೋಧಿ ಯಾದರೂ ಅಂತರ್‍ರಾಷ್ಟ್ರೀಯ ಸಂಬಂಧಗಳಲ್ಲಿ ಚೀನದ ಜತೆ ನಿಕಟ ಬಾಂಧವ್ಯಕ್ಕೆ ವಿಶೇಷ ಮಹತ್ವ ನೀಡುತ್ತಿರುವುದು ಗಮನಾರ್ಹ. ಎರಡೂ ದೇಶಗಳು ಈ ರೀತಿ ನಿಕಟವಾಗುತ್ತಿರುವುದು ಅಮೆರಿಕದ ಜತೆ ಅವುಗಳ ಸಂಬಂಧದ ಮೇಲೆ ಪರಿಣಾಮ ಗೊತ್ತಿದ್ದು, ವಿಶೇಷ ಆಸಕ್ತಿ ವಹಿಸುತ್ತಿವೆ. ನಿಜವಾಗಿಯೂ ಈ ಎರಡು ದೇಶಗಳು ಅಮೆರಿಕದ ಈಗಿನ ಏಕದ್ವಿತೀಯ ಅಧಿಪತ್ಯಕ್ಕೆ ಸವಾಲು ಹಾಕಲಿಕ್ಕಾಗಿ ವಿಶೇಷ ಮಹತ್ವ ನೀಡುತ್ತಿವೆ. ಇದು ಅಮೆರಿಕದಲ್ಲಿ ಆತಂಕಕ್ಕೆ ಕಾರಣವಾಗಿದೆ. ಅಮೆರಿಕದ ಆಳುವ ವರ್ಗಗಳ ಆತಂಕ, ಹಿತಾಸಕ್ತಿಯ ವಕ್ತಾರ ಹೇರಿಟೇಜ್ ಫೌಂಡೇಷನ್ ಇದು ಅಮೆರಿಕಕ್ಕೆ ಎಚ್ಚರಿಕೆಯ ಕರೆಗಂಟೆ, ಭಾರಿ ಅಪಾಯಕಾರಿ ಬೆಳವಣಿಗೆ ಎಂದಿದೆ. ಇನ್ನೂ ವರದಿ ಮಾಡುತ್ತಾ 'ವಾಶಿಂಗ್‌ಟನ್ ಟೈಮ್ಸ್', ಸರಕಾರ ಸಹ ಈ ಬೆಳವಣಿಗೆಯನ್ನು ಆತಂಕದಿಂದ ಗಮನಿಸುತ್ತಿದೆ ಎಂದಿದೆ.

ನಿರಂತರ, ಗೋಡೆಪತ್ರಿಕೆ ಪುನರಾರಂಭ

ಪ್ರಜಾಪ್ರಭುತ್ವದ ಆಶಯಗಳನ್ನು ಬಿಂಬಿಸಲು ಕರೆ

ಪ್ರಜಾಪ್ರಭುತ್ವದ ಬಹು ದೊಡ್ಡ ಅಗತ್ಯ ಜನರಿಗೆ ಶಿಕ್ಷಣ ನೀಡುವುದು. ಜನರನ್ನು ಶಿಕ್ಷಿತರನ್ನಾಗಿ ಮಾಡಲು ವಸ್ತು ನಿಷ್ಠ, ಸತ್ಯ ವಿಷಯಗಳನ್ನು ಪತ್ರಿಕೆಗಳು ತಲುಪಿಸಬೇಕು ಎಂದು ಹಿರಿಯಪತ್ರಕರ್ತ ಮಂಜುನಾಥ್ ಭಟ್ ಅವರು ಅಭಿಪ್ರಾಯಪಟ್ಟರು.



ಹಿರಿಯ ಪತ್ರಕರ್ತ ಮಂಜುನಾಥ ಭಟ್ ಅವರು ಮಂಗಳೂರಿನಲ್ಲಿ 'ನಿರಂತರ' ಗೋಡೆ ಪತ್ರಿಕೆಯ ಪುನರಾರಂಭ ಸಂಚಿಕೆಯನ್ನು ಉದ್ಘಾಟಿಸಿದರು. ಚಿತ್ರದಲ್ಲಿ ಜಿ.ಎನ್.ಮೋಹನ್, ರಾಮದಾಸ್, ಸುರೇಶ್ ಅವರೂ ಇದ್ದಾರೆ.

ಸಮಾನ ಮನಸ್ಕ ಸಂಘಟನೆಗಳು 'ವಿಕಾಸ' ಕಚೇರಿಯಲ್ಲಿ ಆರಂಭಿಸಿದ 'ನಿರಂತರ' ಗೋಡೆ ಪತ್ರಿಕೆಯ ಪುನರಾರಂಭದ ಸಂಚಿಕೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಜನರನ್ನು ಸುಳ್ಳು ಹೇಳಿ ಕೆರಳಿಸಬಹುದು. ಆದರೆ ಶಿಕ್ಷಿತರನ್ನಾಗಿ ಮಾಡಲು ಸತ್ಯ ವಿಷಯಗಳನ್ನೇ ಹೇಳಬೇಕು. ಸತ್ಯಕ್ಕೆ ನಿಷ್ಠೆ ಮತ್ತು ಬದ್ಧತೆಯ ನಡುವೆ ಹೊಂದಾಣಿಕೆ ಅಗತ್ಯ ಎಂದು ಅವರು ತಿಳಿಸಿದರು.

ವ್ಯಕ್ತಿತ್ವಕ್ಕೆ ಆಳ ಬರಲು ಮತ್ತು ವಿಷಯದ ಎಲ್ಲಾ ಮುಜಲುಗಳನ್ನು ತಿಳಿದುಕೊಳ್ಳಲು ಯಾವುದೇ ಅತಂಕವಿರಬಾರದು. ನಮಗೆ ತಿಳಿದಿದ್ದನ್ನು ಬೇರೆಯವರಿಗೆ ತಿಳಿಸುವುದೂ ಅಗತ್ಯ ಎಂದರು.

ಇಂದು ಜಾಹೀರಾತು ಒಂದು ದೊಡ್ಡ ಆತಂಕವಾಗಿದೆ. ಪತ್ರಿಕೆಗಳ ಧೋರಣೆಗಳನ್ನು ಜಾಹೀರಾತುಗಳು ನಿರ್ಧರಿಸುವ ಅಪಾಯವಿದೆ. ಪತ್ರಿಕೋದ್ಯಮವೇ ಜಾಹೀರಾತನ್ನು ಅವಲಂಬಿಸಿ ಕೊಂಡಿರುವುದರಿಂದ ಹೀಗಾಗಿರಬಹುದು ಎಂದರು. ಗೋಡೆ ಪತ್ರಿಕೆಯು ಕೇವಲ ಪತ್ರಿಕೆಯಾಗದೆ ಹಲವು ಉತ್ತಮ ಪತ್ರಕರ್ತರನ್ನು ತಯಾರು ಮಾಡಿದೆ. ಗೋಡೆ ಪತ್ರಿಕೆ ಪತ್ರಿಕೋದ್ಯಮಕ್ಕೆ ಆರಂಭದ ಮೆಟ್ಟಲು. ಇದು ಪತ್ರಿಕಾ ಭಾಷೆಯನ್ನು ಬೆಳಸಿ ಭಾಷಾ ದಾರಿದ್ರ್ಯವನ್ನು ಹೋಗಲಾಡಿಸಬೇಕು ಮತ್ತು ಜನರಿಗೆ ನೈತಿಕ ಶಿಕ್ಷಣ ಒದಗಿಸಬೇಕು ಎಂದು ಆಶಿಸಿದರು.

ಮುಖ್ಯ ಅತಿಥಿಯಾಗಿದ್ದ ಪತ್ರಕರ್ತ ಜಿ.ಎನ್.ಮೋಹನ್ ಅವರು ಪತ್ರಿಕೋದ್ಯಮ ಇಂದು ಹಲವು ಆತಂಕಗಳನ್ನು ಎದುರಿಸುತ್ತಿದೆ. ಪತ್ರಿಕೋದ್ಯಮ ಜನಪರವಾಗಲು ಮಾಧ್ಯಮ ವಿಮರ್ಶೆ ಅತ್ಯಗತ್ಯ. ಓದುಗರು ಮಾಧ್ಯಮಗಳ ಬಗ್ಗೆ ಹೆಚ್ಚು ಅರಿವನ್ನು ಪಡೆದುಕೊಳ್ಳಬೇಕು ಎಂದರು.

ನಂತರ ನಡೆದ ಸಂವಾದದಲ್ಲಿ ಮಂಜುನಾಥ್ ಭಟ್ ಹಾಗೂ ಜಿ.ಎನ್.ಮೋಹನ್ ಅವರು ಭಾಗವಹಿಸಿದ್ದರು. ಜಾಹೀರಾತು ಮತ್ತು ಸುದ್ದಿ ಪ್ರಮಾಣ ಕಾಶ್ಮೀರದ ಬಗೆಗಿನ ಪತ್ರಿಕಾ ವರದಿಗಳು, ಸುದ್ದಿ ಮೂಲದ ಗೋಪ್ಯತೆ ರಕ್ಷಣೆ, ಪತ್ರಿಕೆ ಮತ್ತು ನ್ಯಾಯಾಲಯ, ಪತ್ರಿಕೆಗಳ ನಡುವಿನ ಬೆಲೆ ಇಳಿಕೆ ಸ್ಪರ್ಧೆಗಳ ಬಗ್ಗೆ ಮುಕ್ತ ಸಂವಾದ ನಡೆಯಿತು. ಡಿ.ಪಿ. ಕುಮಾರ್, ಮಾಧವ, ಅಪ್ಪಯ್ಯ, ಉಮೇಶ್ ಅವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಡಿ.ವೈ.ಎಫ್.ಐ.ನ ರಾಜ್ಯ ಸಹ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ ಪ್ರಸ್ತಾವಿಕ ಮಾತುಗಳನ್ನಾಡಿದರು. ಸುರೇಶ್ ಕುಮಾರ್ ಸ್ವಾಗತಿಸಿದರು. ನಾಗೇಶ್ ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

ಕಪೋಲಕಲ್ಪಿತ ವರದಿಗಳ ಬಗ್ಗೆ ಸುರ್ಜಿತ್ ಕಟು ಟೀಕೆ

ಸದಾ ಎಡ ಆಂದೋಲನದ ಬಗ್ಗೆ ದ್ವೇಷಪೂರಿತವಾಗಿರುವ ದೊಡ್ಡ ಬಂಡವಾಳಶಾಹಿಗಳ ಹಿಡಿತದ ಸುದ್ದಿ ಮಾಧ್ಯಮಗಳು ಸಿಪಿಐ(ಎಂ)ನ್ನು ದೂಷಿಸುವ ಸುಳ್ಳು ಹಾಗೂ ಕಿಡಿಗೇಡಿತನದ ವಿಕೃತ ವರದಿಗಳನ್ನು ಆಗಾಗ ಪ್ರಕಟಿಸುತ್ತಾ ಬಂದಿವೆ. ಈ ವರ್ತನೆ ಇತ್ತೀಚೆಗೆ ಹೊಸ ಹಂತ ಮುಟ್ಟಿದೆ. ಒಂದು ಕಲ್ಕತ್ತಾ ದೈನಿಕದಲ್ಲಿ ಜ್ಯೋತಿ ಬಸುರವರ ಸಂದರ್ಶನ ಕುರಿತಂತೆ ಬಂದ ಪ್ರಶ್ನೆಗಳಿಗೆ ಉತ್ತರವಾಗಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಜನವರಿ 1ರಂದು ಒಂದು ಹೇಳಿಕೆ ನೀಡಿ "ಮೇ 1996ರಲ್ಲಿ ಪಕ್ಷದ ಕೇಂದ್ರ ಸಮಿತಿ ಕೇಂದ್ರ ಸರಕಾರವನ್ನು ಸೇರುವ ಪ್ರಶ್ನೆಯನ್ನು ಸಂಪೂರ್ಣವಾಗಿ ಚರ್ಚಿಸಿದೆ. ಕೇಂದ್ರ ಸಮಿತಿ ಸರಕಾರವನ್ನು ಸೇರುವ ವಿರುದ್ಧ ತೀರ್ಮಾನ ಮಾಡಿದೆ. ಇದರೊಂದಿಗೆ ಈ ಪ್ರಶ್ನೆ ಇತ್ಯರ್ಥವಾಗಿದೆ, ಕೊನೆಗೊಂಡಿದೆ" ಎಂದು ಸ್ಪಷ್ಟವಾಗಿ ಹೇಳಿದ್ದರೂ ಈ ಪ್ರಶ್ನೆಯ ಮೇಲೆ ಕೆಲವು ದೊಡ್ಡ ಪತ್ರಿಕೆಗಳು ಈಗಲೂ ಕಪೋಲಕಲ್ಪಿತ ಸುದ್ದಿಗಳನ್ನು ಪ್ರಕಟಿಸುತ್ತಿವೆ.

ಇಂತಹ ಅಪಪ್ರಚಾರದಲ್ಲಿ ಪ್ರಾಥಮಿಕ ಪತ್ರಿಕಾ ನಿಯಮಗಳನ್ನು ಕೂಡಾ ಉಪೇಕ್ಷಿಸಲಾಗುತ್ತಿದೆ. ಜನವರಿ 2 ರಂದು 'ಗಣಶಕ್ತಿ' ಪತ್ರಿಕೆಯ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಮತ್ತು ಪೊಲಿಟ್‌ಬ್ಯೂರೋ ಸದಸ್ಯ ಜ್ಯೋತಿ ಬಸು ವಿಭಿನ್ನ ದನಿಗಳಲ್ಲಿ ಮಾತನಾಡಿದರು ಎಂದು ಟೈಮ್ಸ್ ಆಫ್ ಇಂಡಿಯಾ ತನ್ನ ಪ್ರಧಾನ ಸುದ್ದಿಗಳಲ್ಲಿ ಪ್ರಕಟಿಸಿದೆ. ಸುರ್ಜಿತ್‌ರಾಗಲೀ, ಜ್ಯೋತಿ ಬಸುರಾಗಲೀ ತಮ್ಮ ಭಾಷಣಗಳಲ್ಲಿ ಹೇಳಿದ "ಉದ್ಧರಣೆ"ಗಳನ್ನು ಅದು ಪ್ರಕಟಿಸಿದೆ.


ಕಲ್ಕತ್ತೆಯ 'ದಿ ಟೆಲಿಗ್ರಾಫ್'ಗಂತೂ ಸಿಪಿಐ(ಎಂ) ದೂಷಣೆ ಸಾಮಾನ್ಯವಾದ ಸಂಗತಿ. ಅದರ ಸುದ್ದಿಯ ಪ್ರಕಾರ ಜನವರಿ 1ರಂದು ಪೊಲಿಟ್‌ಬ್ಯೂರೋ ನೀಡಿದ ಹೇಳಿಕೆಯ ಬಗ್ಗೆ ಸುರ್ಜಿತ್‌ರಿಗೇ ಗೊತ್ತಿಲ್ಲವಂತೆ! ಈ ಅತ್ಯಂತ ವಿಕೃತ ಸುದ್ದಿಯ ಬಗ್ಗೆ ಸುರ್ಜಿತ್‌ರ ಬಲವಾದ ಆಕ್ಷೇಪವನ್ನು ಮರುದಿನ ಆ ಪತ್ರಿಕೆ ಪ್ರಕಟಿಸಬೇಕಾಗಿ ಬಂತು.

'ಏಶ್ಯನ್ ಏಜ್' ಪತ್ರಿಕೆ ಎಂದಿನಂತೆ "ಮೂಲಗಳಿಂದ" ಬಂದ ಸುದ್ದಿಗಳು ಎಂದು ಸುಳ್ಳು ಸುದ್ದಿಗಳನ್ನು ಪ್ರಕಟಿಸಿದೆ. ಸರಕಾರ ಸೇರುವ ಪ್ರಶ್ನೆಯನ್ನು ಚರ್ಚಿಸಲು ಒಂದು ವಿಶೇಷ ಸಂಘಟನಾ ಪ್ಲೀನಂನ್ನು ಸಿಪಿಐ(ಎಂ) ನಡೆಸಲಿದೆ ಎಂಬುದು ಇಂತಹಾ ಒಂದು ಸುಳ್ಳು ಸುದ್ದಿ.

ಇಂತಹ ಹಲವಾರು ಸುಳ್ಳು ಸುದ್ದಿಗಳು ಪ್ರಕಟವಾಗುತ್ತಿರುವ ಬಗ್ಗೆ ಟಿಪ್ಪಣಿ ಮಾಡುತ್ತಾ "ಬಂಡವಾಳಶಾಹೀ ಸುದ್ದಿ ಮಾಧ್ಯಮ ಸಿಪಿಐ(ಎಂ) ಅನುಯಾಯಿಗಳಲ್ಲಿ ಮತ್ತು ಪ್ರಜಾಪ್ರಭುತ್ವದಲ್ಲಿ ಎಡ ಒಲವಿನ ಜನಗಳಲ್ಲಿ ಗೊಂದಲ ಮೂಡಿಸಲು ಪ್ರಯತ್ನಿಸುತ್ತಿದೆ. ವಿಶೇಷ ಪ್ಲೀನಂ ನಡೆಸುವಂತಹ ಸುದ್ದಿಗಳು, ಪೊಲಿಟ್‌ಬ್ಯೂರೋದಲ್ಲಿ ಭಿನ್ನಾಭಿಪ್ರಾಯವಿದೆ ಎಂಬಂತಹ ಸುದ್ದಿಗಳು ಶುದ್ಧ ಕಪೋಲಕಲ್ಪಿತ. ಜ್ಯೋತಿ ಬಸುರವರ ಸಂದರ್ಶನದ ನಂತರ ಪೊಲಿಟ್‌ಬ್ಯೂರೋ ಮೇ 1996ರ ಕೇಂದ್ರ ಸಮಿತಿಯ ಸಭೆಯ ನಂತರ ಆ ಪ್ರಶ್ನೆ ಇತ್ಯರ್ಥವಾಗಿದೆ, ಅದನ್ನು ಮತ್ತೆ ತೆರೆಯುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಸ್ವತಃ ಕಾಮ್ರೇಡ್ ಜ್ಯೋತಿ ಬಸುರವರೇ ಈ ಪ್ರಶ್ನೆಯ ಮೇಲೆ ಪಕ್ಷದ ಲೈನನ್ನು ಬದಲಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇಂತಹ ಅಪಪ್ರಚಾರಗಳಿಂದ ಯಾರೂ ಗೊಂದಲಗೊಳ್ಳಬೇಕಾಗಿಲ್ಲ. ಏಕೆಂದರೆ ದೇಶ ಇಂದು ಎದುರಿಸುತ್ತಿರುವ ಸವಾಲುಗಳನ್ನು ಸ್ವೀಕರಿಸಲು ಎಡ, ಪ್ರಜಾಪ್ರಭುತ್ವವಾದೀ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಒಂದುಗೂಡಿಸುವಲ್ಲಿ ಸಿಪಿಐ(ಎಂ)ನ ಪಾತ್ರವನ್ನು ಗೌಣಗೊಳಿಸಲು ಹಲವು ಶಕ್ತಿಗಳು ಸಕ್ರಿಯವಾಗಿವೆ. ಪ್ರಜಾಸತ್ತಾತ್ಮಕ ಕೇಂದ್ರವಾದದ ನೀತಿಗಳ ಮೇಲೆ ಕೆಲಸ ಮಾಡುವ ಸಿಪಿಐ(ಎಂ) ಕೇಂದ್ರ ಸಮಿತಿಯ ನೇತೃತ್ವದಲ್ಲಿ ಸಂಪೂರ್ಣ ಒಗ್ಗಟ್ಟಿನಿಂದಿದೆ" ಎಂದು ಐಎನ್‌ಎಸ್ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಸಿಪಿಐ(ಎಂ) ಹೇಗೆ ಕೆಲಸ ಮಾಡುತ್ತಿದೆ ಎಂಬ ಕಲ್ಪನೆಯೂ ಬಂಡವಾಳಶಾಹಿ ಸುದ್ದಿ ಮಾಧ್ಯಮಕ್ಕೆ ಇಲ್ಲ ಎಂದ ಸುರ್ಜಿತ್ "ಇದು ದೇಶದಲ್ಲೇ ಅತ್ಯಂತ ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡುತ್ತಿರುವ ಪಕ್ಷ. ಚರ್ಚೆಗಳ ಮೂಲಕ ಇಲ್ಲಿ ನಿರ್ಣಯ ಕೈಗೊಳ್ಳಲಾಗುತ್ತದೆ. ಆದರೆ ನಿರ್ಣಯ ಕೈಗೊಂಡ ಮೇಲೆ ಇಚ್ಛಾಶಕ್ತಿ ಹಾಗೂ ಕಾರ್ಯಾಚರಣೆಯಲ್ಲಿ ಒಗ್ಗಟ್ಟಿನಿಂದ ವರ್ತಿಸುತ್ತದೆ" ಎಂದರು. (ಐಎನ್‌ಎಸ್)

ನಡೆದಾಡುವ ಬೆಳಕಿಗೆ ಜ್ಞಾನಪೀಠ



ಬಂಗಾಳಿ ಲೇಖಕಿ ಮಹಾಶ್ವೇತಾದೇವಿ ಅವರಿಗೆ ಈ ಸಾಲಿನ ಜ್ಞಾನಪೀಠ ಪ್ರಶಸ್ತಿ ಬಂದಿದೆ. ಬುಡಕಟ್ಟು ಜನಾಂಗಗಳ ನಡುವೆಯೇ ಮನೆ ಮಾಡಿ ನಿಂತು ಅವರ ಎಲ್ಲಾ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ ಮಹಾಶ್ವೇತಾದೇವಿ ಸದಾ ವ್ಯವಸ್ಥೆಯ ವಿರುದ್ಧ ಸೆಣಸುತ್ತಾ ಬಂದವರು. ಇಂತಹ ಲೇಖಕಿಗೆ ಜ್ಞಾನಪೀಠ ಪುರಸ್ಕಾರ ಸಿಕ್ಕಿರುವುದು ನಿಜಕ್ಕೂ ಆಶ್ಚರ್ಯಕರ ಘಟನೆ.

'ನಡೆದಾಡುವ ಬೆಳಕು' ಎಂದೇ ಬುಡಕಟ್ಟು ಜನಾಂಗಗಳಿಂದ ಗುರುತಿಸಲ್ಪಟ್ಟಿರುವ ಮಹಾಶ್ವೇತಾದೇವಿ ಅವರು ಕನ್ನಡದ ಹಿರಿಯ ಕವಿ ಸು.ರಂ.ಎಕ್ಕುಂಡಿಯವರು ಅಭಿಪ್ರಾಯಪಟ್ಟಂತೆ 'ಯೋಧ ನಡೆಯುವ ದಾರಿ ಕವಿಯ ದಾರಿಯು ಕೂಡಾ....' ಎಂದು ನಂಬಿದವರು. ಬದುಕು ಮತ್ತು ಬರಹದ ಬಗ್ಗೆ ಸಾಮರಸ್ಯ ಇರಬೇಕೆಂದು ಆಶಿಸಿ ಅದರಂತೆ ಬದುಕಿದವರು.

ಕೆಂಡದ ಮೇಲೆ ನಡೆದವರು ಮಾತ್ರ ಕೆಂಡದ ಅನುಭವವನ್ನು ಚೆನ್ನಾಗಿ ಬಣ್ಣಿಸಬಲ್ಲರು ಎಂಬಂತೆ ಮಹಾಶ್ವೇತಾದೇವಿ ತಾವು ಬರೆದ ಕಥೆ ಕಾದಂಬರಿಗಳಲ್ಲಿ ಬುಡಕಟ್ಟು ಜನರ ನಿಟ್ಟುಸಿರುಗಳನ್ನು ಪರಿಚಯಿಸಿದರು. ಬುಡಕಟ್ಟು ಜನರ ಮಧ್ಯೆ ಇದ್ದಲ್ಲಿ ಅವರಕೆಂಡದ ಅನುಭವ ಪಡೆಯಲು ಸಾಧ್ಯ ಎಂದು ತಿಳಿದು ಅವರ ನಡುವೆಯೇ ಬದುಕಲು ಆರಂಭಿಸಿದರು.

ಲೋಧರು ಸಂತಾಲರು ಹೀಗೆ ಹಲವಾರು ಬುಡಕಟ್ಟುಗಳ ಮಧ್ಯೆ ಅವರು ಪ್ರೀತಿಯ ಅಕ್ಕ. ಈ ಬುಡಕಟ್ಟುಗಳ ಬಗ್ಗೆ ಅವರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಅಂಕಿ-ಅಂಶಗಳ ಸಹಿತ ಪತ್ರಿಕೆಗಳಿಗೆ ಲೇಖನ ಬರೆದರು. ಪತ್ರಿಕೆಗಳ ಮೂಲಕ ಇವರ ಸ್ಥಿತಿಯನ್ನು ಬಣ್ಣಿಸಿ ನಂತರ ಈ ಸಮಸ್ಯೆ ಬಗೆಹರಿಸಲು ಕೇಂದ್ರ ಸರಕಾರದ ಕಚೇರಿಗಳನ್ನು ಸುತ್ತಿದರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದಕ್ಕಿಸಿಕೊಟ್ಟ 'ಅರಣ್ಯೇರ್ ಅಧಿಕಾರ್'(ಅರಣ್ಯದ ಅಧಿಕಾರ ಯಾರದು) ಪುಸ್ತಕ ಸಹಾ ಬುಡಕಟ್ಟು ಜನಾಂಗದ ಮೇಲೆ ನಡೆದ ದೌರ್ಜನ್ಯವನ್ನು ಕುರಿತದ್ದು. ಬಂಗಾಲಿಯ ಹಲವು ಪತ್ರಿಕೆಗಳ ಅಂಕಣಕಾರರೂ ಆಗಿರುವ ಮಹಾಶ್ವೇತಾ ದೇವಿ 'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ'ಯ ಬರಹಗಾರ್ತಿಯೂ ಹೌದು.

ಇಡೀ ಭಾರತದಲ್ಲಿ ಅಮಿಷವೊಡ್ಡಿ ವಿದೇಶೀ ಹಣ ನೀಡುವ ಜಾಲ ಹಬ್ಬುತ್ತಿದ್ದಾಗ ಇದರ ಬಣ್ಣವನ್ನು ಮೊದಲು ಬಯಲಿಗೆಳೆದ ಹಿರಿಮೆ ಕೂಡಾ ಮಹಾಶ್ವೇತಾದೇವಿಯವರದ್ದು. ಫೋರ್ಡ್ ಫೌಂಡೇಶನ್ ಬುಡಕಟ್ಟು ಜನಾಂಗದ ಮಧ್ಯೆ ಇವರು ಮಾಡುತ್ತಿದ್ದ ಕೆಲಸವನ್ನು ಮೆಚ್ಚಿ ಇವರಿಗೆ ಫೋರ್ಡ್ ಫೌಂಡೇಶನ್ ಹಣ ನೀಡುವುದಾಗಿ ಪತ್ರ ಬರೆದಾಗ ಇವರು ನೇರವಾಗಿಅದನ್ನು ತಿರಸ್ಕರಿಸಿದರು. ಇಷ್ಟೊಂದು ಸಾವಿರಗಟ್ಟಲೆ ಹಣವನ್ನು ನೀವೇಕೆ ನೀಡುತ್ತೀರಿ? ಇದರಿಂದ ನಿಮಗಿರುವ ಲಾಭವಾದರೂ ಏನು? ಯಾವುದೇ ಲಾಭವಿಲ್ಲದೆ ಯಾರೂ ಇಷ್ಟೊಂದು ಹಣ ನೀಡುತ್ತಾರೆ ಎಂದು ನಾನು ಭಾವಿಸುವುದಿಲ್ಲ. ಯಾವುದೇ ಹಣಕ್ಕಾಗಿನಾನುಬುಡಕಟ್ಟು ಜನಾಂಗಗಳ ಮಧ್ಯೆ ಕೆಲಸ ಮಾಡುತ್ತಿಲ್ಲ. ಆದ್ದರಿಂದ ನಿಮ್ಮ ಹಣ ನಿಮ್ಮ ಬಳಿಯೇ ಇರಲಿ ಎಂದು ಸ್ಪಷ್ಟವಾಗಿ ತಿರಸ್ಕರಿಸಿದರು.

"ಸೃಜನಶೀಲ ಸಾಹಿತಿಗೆ ಸಾಮಾಜಿಕ ಬದ್ಧತೆ ಇರಲೇಬೇಕೆಂಬುದು ನನ್ನ ನಿಲುಮೆ. ಸಮಾಜದ ಬಗ್ಗೆ ನನ್ನ ಕರ್ತವ್ಯವಿದೆ. ನಾನು ತರುಣಿಯರನ್ನು ಕುರಿತು ಹೇಳುವುದಿಷ್ಟು. ನೀವೇನೂ ಹಳ್ಳಿಗಳಿಗೆ ಹೋಗಬೇಕೆಂದಿಲ್ಲ. ನಿಮ್ಮ ಯೂನಿವರ್ಸಿಟಿಯ ಪಕ್ಕಕ್ಕೇ ಅಂಟಿಕೊಂಡಂತೆ ಹಾದಿ ಬದಿಯಲ್ಲಿ ಸ್ಲಂಗಳಲ್ಲಿನ ಜನ ವಿದ್ಯುತ್ ನೀರು ಇಂತಹ ಮೂಲಭೂತ ಅನುಕೂಲಗಳೂ ಇಲ್ಲದೆ ಬದುಕುತ್ತಿದ್ದಾರೆ ಎಂಬುದರ ಬಗ್ಗೆ ಬರೆಯಿರಿ ಸಾಕು" ಎನ್ನುತ್ತಾರೆ.

ಗುಜರಾತ್ ನಂತರ ರಾಜಾಸ್ಥಾನದಲ್ಲಿ ಬಿಜೆಪಿ ಸರಕಾರಕ್ಕೆ ಉಂಟಾಗಿರುವ ಆಂತರಿಕ ಬಿಕ್ಕಟ್ಟಿನ ಬಗ್ಗೆ 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಉನ್ನಿಯವರ ವ್ಯಂಗ್ಯ



ಅಂತ್ಯಾಕ್ಷರಿ ಸ್ಟಾರ್ಟ್...........

ಪ್ಯಾರ್ ಕಿಯಾ ತೋ ಡರ್‌ನಾ ಕ್ಯಾ....?

ಮಗ: ಅಪ್ಪಾ, ಪ್ಯಾರ್ ಕಿಯಾ ತೋ ಡರ್‌ನಾ ಕ್ಯಾ, ಪ್ಯಾರ್ ಕಿಯಾ ಕೋಯೀ ಚೋರಿ ನಹೀ ಕೀ! ಅಂದರೇನು?

ಅಪ್ಪ: ಪ್ರೀತಿ ಮಾಡಿದ ಮೇಲೆ ಭಯ ಯಾಕೆ, ಪ್ರೀತಿ ಮಾಡಿರುವುದು-ಕಳ್ಳತನವಲ್ಲ ಅಂತ. ಇದು ಮೊಗಲ್-ಎ-ಆಜಂ ಅಂತ ಹಳೇ ಫಿಲಂನ ಹಾಡಿನ ಮೊದಲ ವಾಕ್ಯ. ಜಹಾಂಗೀರನ ಪ್ರೇಮಿ ಅನಾರ್ಕಲಿ ಡ್ಯಾನ್ಸ್ ಮಾಡುತ್ತಾ ಹಾಡುವ ಹಾಡು.

ಮಗ: ಆದರೆ ಬಾಳಾಠಾಕ್ರೆ ಯಾಕಪ್ಪಾ ಆ ಹಾಡು ಹಾಡ್ತಾ ಇದ್ದಾರೆ?

ಅಪ್ಪ: ಮಹಾರಾಷ್ಟ್ರದ ಬಿಜೆಪಿ-ಶಿವಸೇನಾ ಜಂಟಿ ಸರಕಾರದ ಬಿಜೆಪಿ ಉಪ ಮುಖ್ಯ ಮಂತ್ರಿ ಗೋಪಿನಾಥ ಮುಂಡೆ ಬರ್ ಖಾ ಎಂಬ ಮಹಿಳೆಗೆ ಫ್ಲಾಟ್ ಕೊಡಿಸಿದ್ದಾರೆ ಎಂಬ ಆಪಾದನೆ ಬಂದಿದೆ. ಗೋಪಿನಾಥಗೂ ಬರ್ ಖಾರಿಗೂ ಏನು ಸಂಬಂಧ ಅಂತ ಪ್ರಶ್ನೆ ಬಂದಾಗ ಮುಂಡೆಯವರು ಬ್ಬೆ-ಬ್ಬೆ-ಬ್ಬೆ ಅಂದರಂತೆ. ಅದಕ್ಕೆ ಅವರ ಪರವಾಗಿ ಬಾಳಾಠಾಕ್ರೆ ಅವರ ಸಮಜಾಯಿಷಿ.

ಮಗ: ಮುಂಡೆಯವರ ಮೇಲೆ ಆಪಾದನೆ ಬಂದ್ರೆ, ಠಾಕ್ರೆ ಯಾಕೆ ಸಮಜಾಯಿಷಿ ಕೊಡಬೇಕು ಅಪ್ಪಾ!

ಅಪ್ಪ: ಟಿವಿಯಲ್ಲಿ ಮಾತು, ಚಿತ್ರ ಸರಿಯಾಗಿ ಬರದಿದ್ದರೆ 'ರಿಮೋಟ್ ಕಂಟ್ರೋಲ್'ನಿಂದ ಅದನ್ನು 'ಅಡ್ಜಸ್ಟ್' ಮಾಡುವುದಿಲ್ಲವೇ? ಹಾಗೆ ಇದೂ.

ಅಣಕ

☺

ತರತ್‌ಚಂದ್ರ

ಮಗ: ಗಾಂಧೀಜಿಯವರೇ ಇಬ್ಬರು ಹೆಣ್ಣುಮಕ್ಕಳ ಹೆಗಲ ಮೇಲೆ(ಅದು ಅವರ ಮೊಮ್ಮಕ್ಕಳೇ ಆಗಲಿ ಆದರೇನಂತೆ) ಕೈ ಹಾಕಿ ತಿರುಗುತ್ತಿದ್ದರು. ಪಾಪ ಮುಂಡೆಯವರ ತಪ್ಪೇನು ಅಂತಲೂ ಠಾಕ್ರೆ ಅಂದಿದ್ದಾರಂತಪ್ಪ. ಇದರ ಅರ್ಥ ಏನು ಅಪ್ಪ?

ಅಪ್ಪ: ನನಗೆ ಗೊತ್ತಿಲ್ಲ ಮಗ!

ಮಗ: ವೀರಪ್ಪನ್ ಸಹ 'ಚೋರಿ ಕಿಯಾ ತೋ ಡರ್‌ನಾ ಕ್ಯಾ...ಚೋರಿ ಕಿಯಾ ಕೋಯೀ ಚಾರ್ ಸೋಬಿಸ್ ನಹೀ ಕೀ..." ಎಂದು ಹಾಡು ಹೇಳಿದ್ದಾನಂತಾಪ್ಪ' ಅಂದ್ರೇನು?

ಅಪ್ಪ: ನನಗೆ ಗೊತ್ತಿಲ್ಲ ಮಗ!

ಮಗ: ಚಂದ್ರಸ್ವಾಮಿ ಸಹ 'ಚಾರ್ ಸೋಬಿಸ್ ಕಿಯಾ ತೋ ಡರ್‌ನಾ ಕ್ಯಾ.. ಚಾರ್ ಸೋ ಬೀಸ್ ಕಿಯಾ ಕೋಯಿ ಸರಸ್ವತಿ ಜಲಾಯಿ ನಹೀ' ಎಂದು ಹಾಡು ಹೇಳ್ತಿದ್ದಾರಂತಪ್ಪ ಅಂದ್ರೇನು?

ಅಪ್ಪ: ನನಗೆ ಗೊತ್ತಿಲ್ಲ ಮಗ

ಮಗ: ವಿಶ್ವ ಹಿಂದೂ ಪರಿಷತ್ತಿನ ಸಿಂಘಾಲ್ ಸಹ 'ಸರಸ್ವತಿ ಜಲಾಯಿತೋ ಡರ್‌ನಾಕ್ಯಾ' ಸರಸ್ವತಿ ಜಲಾಯಿ ಕೋಯಿ ಗುನಾಹ್ ನಹೀ ಕೀ'. ಅಂತ ಹಾಡು ಹೇಳ್ತಿದ್ದಾರಂತಪ್ಪ. ಅಂದ್ರೇನು?

ಅಪ್ಪ: ಗೊತ್ತಿಲ್ಲ ಮಗ!

ಮಗ: ಏನಪ್ಪಾ ಏನು ಕೇಳಿದ್ರೂ ನನಗೆ ಗೊತ್ತಿಲ್ಲ ಅಂದ್ರೆ!

ಅಪ್ಪ: ಠಾಕ್ರೆ, ವೀರಪ್ಪನ್, ಚಂದ್ರಸ್ವಾಮಿ, ಸಿಂಘಾಲ್ ಎಲ್ಲಾ ಸೇರಿ 'ಅಂತ್ಯಾಕ್ಷರಿ' ಆಡ್ತಾ ಇರ್ಬೇಕು.

ಮಗ: ಅಂತ್ಯಾಕ್ಷರಿ ಅಂದ್ರೇನು ಅಪ್ಪಾ? ಅಕ್ಷರಾಭ್ಯಾಸ ಅಂತ್ಯ ಮಾಡುವುದು ಅಂತಲಾ?

ಅಪ್ಪ: ನನಗೆ ಗೊತ್ತಿಲ್ಲ ಮಗಾ!

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಶಕುನ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು